ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಮೇ 20 ಸೋಮವಾರ 2024

ಸಂಪುಟ: 45 | ಸಂಚಿಕೆ: 34 | ಪುಟಗಳು: 10

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಕೆಲಸ ಕೊಟ್ಟವರ ಮನೆಯಲ್ಲೇ ಕದಿಯುವುದನ್ನು ಕಸುಬಾಗಿಸಿಕೊಂಡ ಕಾರ್ಪೆಂಟರ್‌ಗೆ ತಕ್ಕ ಶಾಸ್ತಿ!

● ಕೆಲಸದ ವೇಳೆ ಸಣ್ಣಪುಟ್ಟದಾಗಿ ಕದ್ದಾಗಲೆಲ್ಲಾ ಬುದ್ಧಿವಾದ ಹೇಳಿದ್ದ ಪ್ರೊಫೆಸರ್ ● ಕಲಿತಿದ್ದ ಕದಿಯುವ ಕಸುಬು ಬಿಡದ ಕಾರ್ಪೆಂಟರ್ ಈಗ ಪೊಲೀಸರ ಅತಿಥಿ

ಮೈಸೂರು,ಮೇ19–ಅನ್ನ ಹಾಕಿದ ಮನೆಗೆ ಕಾರ್ಪೆಂಟರ್ ಕನ್ನ ಹಾಕಲು ಮುಂದಾಗಿ ರೆಡ್‌ಹ್ಯಾಂಡ್ ಆಗಿ ಮಾಲೀಕನ ಕೈಗೆ ಮೈಸೂರಿನಲ್ಲಿ ಸಿಕ್ಕಿಬಿದ್ದಿದ್ದಾನೆ. ಈತ ಮಾಲೀಕನಿಂದ ತಪ್ಪಿಸಿಕೊಂಡು ಮಹಡಿಯನ್ನು ಜಿಗಿದು ಹೋಗುವಾಗ ಬಿದ್ದು, ಗಂಭೀರವಾಗಿ ಗಾಯಗೊಂಡು, ಈಗ ಆಸ್ಪತ್ರೆಗೆ ಸೇರಿದ್ದಾನೆ. ಈ ಘಟನೆ ಮೈಸೂರಿನ ಮಾನಸಿನಗರದಲ್ಲಿ ನಡೆದಿದ್ದು, ಕಳ್ಳತನಕ್ಕೆ ಬಂದು ಸಿಕ್ಕಿಹಾಕಿಕೊಂಡ ಕಾರ್ಪೆಂಟರ್ ಅನ್ನು ರವಿ ಎಂದು ಗುರುತಿಸಲಾಗಿದೆ. ಮೈಸೂರಿನ ಮಾನಸಿನಗರದಲ್ಲಿ ವಾಸವಾಗಿರುವ ಕಾಲೇಜೊಂದರ ಪ್ರಾಧ್ಯಾಪಕ ಡಾ.ಬಾಲಾಜಿ ಅವರ ಮನೆಯಲ್ಲಿ ಈತ ಮರ ಗೆಲಸ ಮಾಡಲು ಬಂದಿದ್ದ. ದೊಡ್ಡ ಮನೆಯಾಗಿದ್ದರಿಂದ ದೂರದ ಊರಿನಿಂದ ಬಂದು ಕೆಲಸ ಮಾಡಿಕೊಂಡಿದ್ದ ರವಿಗೆ ಬೇರೆಡೆ ಉಳಿದುಕೊಳ್ಳುವುದಕ್ಕಿಂತ ತಮ್ಮ ಮನೆಯಲ್ಲೇ ಒಂದಿಷ್ಟು ಜಾಗ ಕೊಟ್ಟು ಅಲ್ಲೇ ಉಳಿದುಕೊಂಡು ಕೆಲಸ ಮಾಡಲು ಡಾ.ಬಾಲಾಜಿ ವ್ಯವಸ್ಥೆ ಮಾಡಿದ್ದರು.

ಡಾ.ಬಾಲಾಜಿ ಅವರ ಮನೆಯಲ್ಲಿ ಈ ಹಿಂದೆಯೂ ಮೂರು ಬಾರಿ ಸಣ್ಣ ಪುಟ್ಟದಾಗಿ ಕಾರ್ಪೆಂಟರ್ ರವಿ ಕಳ್ಳತನ ಮಾಡಿ ಸಿಕ್ಕಿಬಿದ್ದಿದ್ದ. ಆದರೆ, ನೀನು ಚೆನ್ನಾಗಿ ಕೆಲಸ ಮಾಡುತ್ತೀಯಾ. ನಿನ್ನ ಜೀವನಕ್ಕೆ ದುಡಿದ ಹಣವೇ ಸಾಕು, ಕಳ್ಳತನ ಮಾಡುವುದು ಬಿಟ್ಟುಬಿಡು ಎಂದು ಡಾ.ಬಾಲಾಜಿ ಆತನಿಗೆ ಬುದ್ಧಿಮಾತು ಹೇಳಿದ್ದರು. ಅಲ್ಲದೇ ಇನ್ನೊಂದು ಬಾರಿ ಕಳ್ಳತನ ಮಾಡಿದರೆ ಪೊಲೀಸರಿಗೆ ಒಪ್ಪಿಸುವುದಾಗಿ ಹೇಳಿ ಎಚ್ಚರಿಕೆಯನ್ನೂ ಕೊಟ್ಟಿದ್ದರು.




ಆಗ ನಾಟಕ ಮಾಡಿ ಇನ್ನು ಮುಂದೆ ಹೀಗೆ ಮಾಡುವುದಿಲ್ಲವೆಂದು ಮತ್ತೆ ನಂಬಿಕೆ ಗಳಿಸಿಕೊಂಡ ರವಿ, ಸ್ವಲ್ಪ ದಿನ ಯಾವುದೇ ಕಳ್ಳತನ ಮಾಡದೇ ಸುಮ್ಮನೇ ಕೆಲಸ ಮಾಡಿಕೊಂಡಿದ್ದ. ನಂತರ ಮನೆಯವರ ವಿಶ್ವಾಸವನ್ನೂ ಗಳಿಸಿಕೊಂಡು ಮನೆಯ ಮುಖ್ಯ ಬಾಗಿಲಿನ ನಕಲಿ ಕೀಯನ್ನು ಮಾಡಿಸಿಟ್ಟುಕೊಂಡು, ಮನೆಯಲ್ಲಿ ಯಾರು ಇಲ್ಲದ ವೇಳೆ ಕಳ್ಳತನಕ್ಕೆ ಯತ್ನಿಸಿದ್ದಾನೆ. ಈ ವೇಳೆ ಡಾ.ಬಾಲಾಜಿ ಅವರು ದಿಢೀರ್ ಮನೆಗೆ ಆಗಮಿಸಿದ್ದಾರೆ. ಮನೆಗೆ ಬೀಗ ಹಾಕಿಕೊಂಡು ಹೋಗಿದ್ದರೂ ಹೇಗೆ ಬೀಗ ತೆಗೆದಿದೆ ಎಂದು ಅನುಮಾನಗೊಂಡು ಡಾ.ಬಾಲಾಜಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಕಳ್ಳ ಮನೆಯಲ್ಲಿಯೇ ಇದ್ದು, ನೀವು ಬೇಗ ಬಂದರೆ ಸುಲಭವಾಗಿ ಹಿಡಿಯಬಹುದು ಎಂದು ಹೇಳಿದ್ದಾರೆ. ಆಗ ಪೊಲೀಸರ ಸಮೇತ ಮನೆಯೊಳಗೆ ಹೋದ ಡಾ. ಬಾಲಾಜಿ ಅವರು ಬರುವುದನ್ನು ಗಮನಿಸಿದ ಕಳ್ಳ ಕಾರ್ಪೆಂಟರ್ ರವಿ ಮನೆಯ ಮಹಡಿಯಿಂದ ಬೇರೊಂದು ಮಹಡಿಗೆ ಮನೆಯ ರಗ್ಗು ಬಳಸಿ ಜಿಗಿಯಲು ಮುಂದಾಗಿದ್ದಾನೆ. ಆದರೆ, ಕೈಯಲ್ಲಿದ್ದ ರಗ್ಗು ತಪ್ಪಿದ್ದು ಸೀದಾ ಕೆಳಗೆ ಬಿದ್ದಿದ್ದಾನೆ.

ಮನೆಯ ಪಕ್ಕದಲ್ಲಿ ಏನೋ ಬಿದ್ದ ಶಬ್ದ ಕೇಳಿದ ತಕ್ಷಣ ಅಲ್ಲಿಗೆ ತೆರಳಿದ ಪೊಲೀಸರು ಹಾಗೂ ಡಾ.ಬಾಲಾಜಿ ಅವರಿಗೆ ಕಳ್ಳ ರವಿ ಬಿದ್ದು ತಲೆಗೆ ಗಾಯವಾಗಿ ಒದ್ದಾಡುವುದು ಕಂಡುಬಂದಿದೆ. ಪೊಲೀಸರು ಕಳ್ಳನನ್ನು ವಶಕ್ಕೆ ಪಡೆದು, ಆತನನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸುತ್ತಿದ್ದು, ಚಿಕಿತ್ಸೆ ಬಳಿಕ ಮತ್ತೆ ವಶಕ್ಕೆ ಪಡೆದು ವಿಚಾರಣೆ ಮಾಡಲಿದ್ದಾರೆ. ಈ ಸಂಬಂಧ ಮೈಸೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಇಂದು ಲೋಕಸಭೆ 5ನೇ ಹಂತದ ಮತದಾನ

ರಾಹುಲ್ ಗಾಂಧಿ, ರಾಜನಾಥ್ ಸಿಂಗ್ ಸೇರಿ ಹಲವು ಪ್ರಮುಖರ ಭವಿಷ್ಯ ನಿರ್ಧಾರ





ನವದೆಹಲಿ:18ನೇ ಲೋಕಸಭೆ ಚುನಾವಣೆಯ ಐದನೇ ಹಂತದ ಮತದಾನವು ನಾಳೆ (ಮೇ 20) ನಡೆಯಲಿದೆ. ಎಂಟು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 49 ಕ್ಷೇತ್ರಗಳಲ್ಲಿ ಮತದಾನ ನಡೆಯಲಿದೆ. ಉತ್ತರ ಪ್ರದೇಶದ 14, ಪಶ್ಚಿಮ ಬಂಗಾಳದ 7, ಬಿಹಾರ 5, ಒಡಿಶಾ 5, ಜಾರ್ಖಂಡ್‌ನ 3 ಸ್ಥಾನಗಳು ಮತ್ತು ಜಮ್ಮು ಮತ್ತು ಕಾಶ್ಮೀರ ಸೇರಿವೆ.

ಪ್ರಭಾವಿ ನಾಯಕರು: 2024ರ ಲೋಕಸಭೆ ಚುನಾವಣೆಯ ಐದನೇ ಹಂತದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ (ಲಕ್ನೋ), ವಾಣಿಜ್ಯ ಕೈಗಾರಿಕೆ ಸಚಿವ ಪಿಯೂಷ್ ಗೋಯಲ್, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ (ರಾಯ್ ಬರೇಲಿ), ಸ್ಮೃತಿ ಇರಾನಿ (ಅಮೇಥಿ), ಒಮರ್ ಅಬ್ದುಲ್ಲಾ, ಸಜ್ಜದ್ ಗನಿ ಲೋನ್, ಸಾಧ್ವಿ ನಿರಂಜನ್ ಜ್ಯೋತಿ, ಲಲ್ಲು ಸಿಂಗ್, ● 8ನೇ ಪುಟಕ್ಕೆ

ಐಪಿಎಲ್ ಬೆಟ್ಟಿಂಗ್: ಯುವಕ ನೇಣಿಗೆ ಶರಣು!

ರಾಯಚೂರು: ಐಪಿಎಲ್ ಬೆಟ್ಟಿಂಗ್ ದಂಧೆಯಲ್ಲಿ ಲಕ್ಷ ಲಕ್ಷ ಕಳೆದುಕೊಂಡ ಯುವಕನೋರ್ವ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾದ ಘಟನೆ ರಾಯಚೂರು ಜಿಲ್ಲೆಯ ಸಿಂಧನೂರು ನಗರದಲ್ಲಿ ನಡೆದಿದೆ.

ಮಸ್ಕಿ ತಾಲೂಕಿನ ಉದ್ಬಾಳ ಗ್ರಾಮದ ಮುದಿಬಸವ (29) ಆತ್ಮಹತ್ಯೆಗೆ ಶರಣಾದ ಯುವಕ. ಈತ ಐಪಿಎಲ್ ಬೆಟ್ಟಿಂಗ್‌ಗಾಗಿ ಸಾಕಷ್ಟು ಸಾಲ ಮಾಡಿಕೊಂಡಿದ್ದ. ಆದರೆ ಬೆಟ್ಟಿಂಗ್ ಕಟ್ಟಿದ ಎಲ್ಲಾ ಮ್ಯಾಚ್‌ಗಳು ಸೋತಿದ್ದವು. ಸಾಲದಿಂದ ಮಾನಸಿಕ ಒತ್ತಡಕ್ಕೆ ಒಳಗಾಗಿದ್ದ. ಸಾಲಗಾರರ ಕಾಟಕ್ಕೆ ಬೇಸತ್ತ ಮುದಿಬಸವ ಲಾಡ್ಜ್ ರೂಮಿನಲ್ಲಿ ಫ್ಯಾನ್‌ಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ರೂಮಿನ ಬಾಗಿಲು ತೆರೆಯದೆ ಇದ್ದಾಗ ಅನುಮಾನಗೊಂಡು ಲಾಡ್ಜ್ ಸಿಬ್ಬಂದಿ ಒಳಹೊಕ್ಕಿ ನೋಡಿದಾಗ ಘಟನೆ ಬೆಳಕಿಗೆ ಬಂದಿದೆ. ಕೂಡಲೆ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕಾಗಮಿಸಿದ ಸಿಂಧನೂರು ನಗರ ಪೊಲೀಸರು, ಪರಿಶೀಲನೆ ನಡೆಸಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ರವಾನಿಸಿದ್ದಾರೆ.

ಮೈಸೂರಲ್ಲಿ ಮಸ್ತ್ ಮಳೆ

ಇಡೀ ದಿನ ಮಲೆನಾಡಿನ ಚಿತ್ರಣ ಕಣ್ಣಿಗೆ ಕಟ್ಟಿದ ಸಾಂಸ್ಕೃತಿಕ ನಗರಿ

ಮೈಸೂರು, ಮೇ 19 (ಆರ್‌ಕೆ, ಎಸ್‌ಬಿಡಿ)– ಮೈಸೂರಲ್ಲಿ ಭಾನುವಾರ ಧಾರಾಕಾರ ಮಳೆ ಸುರಿಯಿತು. ಪರಿಣಾಮ ಜನಜೀವನ ಅಸ್ತವ್ಯಸ್ತವಾಗಿತ್ತು.

ಬೆಳಗ್ಗೆಯೇ ಮೋಡ ಕವಿದ ವಾತಾವರಣವಿದ್ದು, ತುಂತುರು ಮಳೆಯಾಗುತ್ತಿತ್ತು. ಬೆಳಗ್ಗೆ 9 ಗಂಟೆ ಸುಮಾರಿಗೆ ಹಲವೆಡೆ ಜೋರಾಗಿ ಸುರಿಯಿತು. ಕೆಲಹೊತ್ತಿನ ನಂತರ ಸೂರ್ಯನ ದರ್ಶನವಾಯಿತು. ನಾಲ್ಕೈದು ಗಂಟೆ ಬಿಡುವು ನೀಡಿದ ಮಳೆ, ಮಧ್ಯಾಹ್ನ 3 ಗಂಟೆ ವೇಳೆಗೆ ಮತ್ತೆ ಆರ್ಭಟಿಸಿತು. ಸುಮಾರು 40–50 ನಿಮಿಷಗಳವರೆಗೆ ರಭಸವಾಗಿ ಸುರಿದು, ನಂತರ ಜಡಿ ಹಿಡಿಯಿತು. ಎಡೆಬಿಡದೆ ಸುರಿದ ಮಳೆ, ಮಧ್ಯೆ ಮಧ್ಯೆ ಆರ್ಭಟಿಸಿತು. ಸಹಜ ತೊಂದರೆಗಳಾದರೂ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಇಡೀ ದಿನ ಮಲೆನಾಡಿನ ಹಿತಕರ ವಾತಾವರಣ ನಿರ್ಮಾಣವಾಗಿತ್ತು.

ಜನಜೀವನ ಅಸ್ತವ್ಯಸ್ತ: ಜಡಿ ಮಳೆಯಾಗುತ್ತದೆ ಎಂದು ಯಾರೂ ಊಹಿಸಿರಲಿಲ್ಲ. ಬೆಳಗ್ಗೆಯಂತೆಯೇ ಕೆಲಕಾಲ ಜೋರಾಗಿ ಸುರಿದು ನಂತರ ಬಿಡುವು ನೀಡಬಹುದು ಎಂದು ಜನ ಭಾವಿಸಿದ್ದರು. ಆದರೆ ಧಾರಾಕಾರ ಮಳೆಯಿಂದ ಮಧ್ಯಾಹ್ನ 3ರ ನಂತರ ಮೈಸೂರಿನ ಚಿತ್ರಣವೇ ಬದಲಾಯಿತು. ಶುರುವಾದ ಮಳೆ ಒಂದು ನಿಮಿಷವೂ ಬಿಡುವು ನೀಡಲಿಲ್ಲ. ರಸ್ತೆಬದಿ ವ್ಯಾಪಾರಿಗಳ ಅರ್ಧ ದಿನದ ದುಡಿಮೆಗೆ ಮಳೆ ತಣ್ಣೀರೆರಚಿತು. ಕೆ.ಆರ್.ವೃತ್ತ, ಮಕ್ಕಾಜಿ ಚೌಕ, ದೇವರಾಜ ಮಾರುಕಟ್ಟೆ, ಡಿ.ದೇವರಾಜ ಅರಸು ರಸ್ತೆ, ತರಕಾರಿ ಮಾರುಕಟ್ಟೆಗಳು ಸೇರಿದಂತೆ ಬಹುತೇಕ ವ್ಯಾಪಾರ ಮಳಿಗೆಗಳೂ ಗ್ರಾಹಕರಿಲ್ಲದೆ ಭಣಗುಡುತ್ತಿದ್ದವು. ಚಾಟ್ಸ್ ಅಂಗಡಿಗಳಲ್ಲೂ ವ್ಯಾಪಾರ ಕಡಿಮೆಯಿತ್ತು. ದ್ವಿಚಕ್ರ ವಾಹನ ಸವಾರರು ಹಾಗೂ ಪಾದಚಾರಿಗಳು ವಿಧಿಯಿಲ್ಲದೆ ಮಳೆಯಲ್ಲಿ ತೊಯ್ದು ಸಾಗಿದರು. ರಸ್ತೆ ಬದಿ ತಗ್ಗು ಪ್ರದೇಶಗಳಲ್ಲಿ ನೀರು ನಿಂತಿದ್ದರಿಂದ ವಾಹನ ಸಂಚಾರಕ್ಕೂ ಅಡ್ಡಿಯಾಗಿತ್ತು. ಕೆಲವೆಡೆ ತಗ್ಗು ಪ್ರದೇಶಗಳಿಗೆ ಚರಂಡಿ ನೀರು ನುಗ್ಗಿ ಅವಾಂತರ ಉಂಟಾಯಿತು. ನರ್ಮ್ ಯೋಜನೆಯಡಿ ನಿರ್ಮಿಸಿರುವ ● 8ನೇ ಪುಟಕ್ಕೆ



ಕಮಾನು ಗೇಟ್ ಬಳಿ ಬ್ಯಾರಿಕೇಡ್; ಮಳೆಯಲ್ಲಿ ಜನ ಹೈರಾಣ

ಮೈಸೂರು, ಮೇ 19– ನಗರದ ಸಬರ್ಬನ್ ಬಸ್ ನಿಲ್ದಾಣದ ಬಳಿಯ ಕಮಾನು ಗೇಟ್ ಇಕ್ಕೆಲಗಳಲ್ಲಿ ಬ್ಯಾರಿಕೇಡ್ ಅಳವಡಿಸಿದ್ದರಿಂದ ವಾಹನ ದಟ್ಟಣೆ ಉಂಟಾಗಿ ಪ್ರಯಾಣಿಕರು ಮಳೆಯಲ್ಲಿ ಹೈರಾಣಾದರು.

ದೇವರಾಜ ಸಂಚಾರ ಠಾಣೆ ಪೊಲೀಸರು, ಕಮಾನು ಗೇಟ್‌ನ ಎರಡೂ ಕಡೆ ಬ್ಯಾರಿಕೇಡ್ ಅಳವಡಿಸಿದ್ದರು. ಇದರಿಂದ ಇರ್ವಿನ್ ರಸ್ತೆ ಕಡೆಯಿಂದ ಮಿನಿ ವಿಧಾನ ಸೌಧದ ಕಡೆಗೆ ಸಾಗುವ ವಾಹನಗಳು ಎಡಕ್ಕೆ ಚಲಿಸಿ, ಫೈವ್‌ಲೈಟ್ ಬಳಿಯ ಹಳೆಯ ಬಿಷಪ್ ಹೌಸ್ ಮುಂಭಾಗ ಬಲಕ್ಕೆ ತಿರುವು ಪಡೆದು ಸಾಗುತ್ತಿದ್ದವು. ಹಾಗೆಯೇ ಮಿನಿ ವಿಧಾನಸೌಧದ ಕಡೆಯಿಂದ ಇರ್ವಿನ್ ರಸ್ತೆಗೆ ಸಾಗುವ ವಾಹನಗಳು ಕಮಾನು ಗೇಟ್ ಬಳಿ ಎಡಕ್ಕೆ ತಿರುಗಿ ಮಹಾರಾಜ ಕಾಂಪ್ಲೆಕ್ಸ್ ಬಳಿ ಯೂಟರ್ನ್ ಪಡೆದು ಹೋಗುತ್ತಿದ್ದವು. ಪರಿಣಾಮ ಭಾರಿ ವಾಹನ ದಟ್ಟಣೆ ಉಂಟಾಗಿತ್ತು. ವಾಹನಗಳು ಸಾಲುಗಟ್ಟಿ ನಿಂತಿದ್ದವು. ಕಮಾನು ಗೇಟ್ ಬಳಿಯಿಂದ ಮುಂದೆ ಸಾಗಲು 10–15 ನಿಮಿಷ ಬೇಕಾಗಿತ್ತು. ದಟ್ಟಣೆಯಲ್ಲಿ



ಸಿಲುಕಿದ ದ್ವಿಚಕ್ರ ವಾಹನ ಸವಾರರು ಮಳೆಯಲ್ಲಿ ತೊಯ್ದು ಹೈರಾಣಾದರು. ವಾಹನ ದಟ್ಟಣೆ ಕಂಡು ಸಾರಿಗೆ ಬಸ್ ಪ್ರಯಾಣಿಕರು ನಿಲ್ದಾಣಕ್ಕೆ ತೆರಳುವ ಬದಲು ಕಮಾನು ಗೇಟ್ ಬಳಿಯೇ ಇಳಿದುಕೊಂಡರು.

ದಟ್ಟಣೆ ನಿರ್ವಹಣೆಗೆ ಈ ಕ್ರಮ: ವಾರಾಂತ್ಯವಾದ ಕಾರಣ ನಗರದಲ್ಲಿ ವಾಹನ ಸಂಚಾರ ಹೆಚ್ಚಾಗಿತ್ತು. ಕಮಾನು ಗೇಟ್ ಎರಡೂ ಕಡೆ ವಾಹನ ಸಂಚಾರದಿಂದ ಭಾರಿ ದಟ್ಟಣೆ ಉಂಟಾಗಿತ್ತು. ಕೆಲ ದ್ವಿಚಕ್ರ ವಾಹನ ಸವಾರರು ಅಡ್ಡಾದಿಡ್ಡಿ ನುಗ್ಗುತ್ತಿದ್ದ ಕಾರಣ ಅಪಘಾತ ಸಂಭವಿಸುವ ಸಾಧ್ಯತೆ ಇತ್ತು. ಸಾರಿಗೆ ಬಸ್ ಸಂಚಾರಕ್ಕೂ ತೀವ್ರ ಅಡ್ಡಿಯಾಗಿತ್ತು. ಆದ್ದರಿಂದ ತಾತ್ಕಾಲಿಕವಾಗಿ ಇರ್ವಿನ್ ರಸ್ತೆಯಿಂದ ಮಿನಿ ವಿಧಾನಸೌಧದ ಕಡೆಗೆ ನೇರವಾಗಿ ವಾಹನಗಳು ಸಂಚರಿಸದಂತೆ ಬ್ಯಾರಿಕೇಡ್ ಅಳವಡಿಸಲಾಗಿತ್ತು. ಮತ್ತೊಂದು ಕಡೆ ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟು, ಸಿಬ್ಬಂದಿ ಸ್ಥಳದಲ್ಲೇ ನಿಂತು ಸಂಚಾರ ನಿರ್ವಹಣೆ ಮಾಡಿದ್ದಾಗಿ ದೇವರಾಜ ಸಂಚಾರ ಠಾಣೆ ಪೊಲೀಸರು ಸ್ಪಷ್ಟನೆ ನೀಡಿದರು.



ಕೊಡಗಿನಲ್ಲಿ ಉತ್ತಮ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ದುಬಾರೆ ಬಳಿ ಕಾವೇರಿ ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಳವಾಗಿರುವುದು.

ಕೊಡಗಿನಾದ್ಯಂತ ವರುಣನ ಆರ್ಭಟ

ಕಾವೇರಿ ನದಿಯಲ್ಲಿ ನೀರಿನ ಮಟ್ಟ ಏರಿಕೆ

ಮಡಿಕೇರಿ, ಮೇ 19–ಕೊಡಗಿನ ವಿವಿಧೆಡೆ ಕಳೆದ ಕೆಲ ದಿನಗಳಿಂದ ಉತ್ತಮ ಮಳೆಯಾಗುತ್ತಿದ್ದು, ಬತ್ತಿ ಹೋಗಿದ್ದ ನದಿ, ತೊರೆಗಳಲ್ಲಿ ನೀರಿನ ಮಟ್ಟ ಏರಿಕೆಯಾಗಿದೆ.

ಕೊಡಗಿನಾದ್ಯಂತ ಪೂರ್ವ ಮುಂಗಾರು ಚುರುಕಾಗಿದ್ದು, ಕುಡಿಯುವ ನೀರಿನ ಸಮಸ್ಯೆ ಸೇರಿದಂತೆ ತಾಪಮಾನ ಹೆಚ್ಚಳಕ್ಕೂ ಕಡಿವಾಣ ಬಿದ್ದಂತಾಗಿದೆ. ಜಿಲ್ಲೆಯ ಭಾಗಮಂಡಲ, ಕಕ್ಕಬ್ಬೆ ನಾಪೋಕ್ಲು, ಮೂರ್ನಾಡು, ವಿರಾಜಪೇಟೆ, ಕದನೂರು, ನಂಜರಾಯಪಟ್ಟಣ, ಗುಡ್ಡೆಹೊಸೂರು, ಕುಶಾಲನಗರ ಸೇರಿದಂತೆ ಕಾವೇರಿ ಜಲಾನಯನ ಪ್ರದೇಶಗಳಲ್ಲೂ ಉತ್ತಮ ಮಳೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕಾವೇರಿ ನದಿಯಲ್ಲಿ ನೀರಿನ ಪ್ರಮಾಣ ಅಲ್ಪ ಪ್ರಮಾಣದಲ್ಲಿ ಏರಿಕೆಯಾಗಿದೆ. ನದಿ ತೊರೆಗಳಲ್ಲಿ ಜಲಚರಗಳು ಇದೀಗ ಚೇತರಿಸಿಕೊಳ್ಳುತ್ತಿವೆ. ● 2ನೇ ಪುಟಕ್ಕೆ

ರಸ್ತೆ ವಿಭಜಕಕ್ಕೆ ಬೈಕ್ ಡಿಕ್ಕಿ: ಯುವಕ ಸಾವು


● ಮೈಸೂರಿನ ರಾಮಕೃಷ್ಣ ಪರಮಹಂಸ ಸರ್ಕಲ್–ದಟ್ಟಗಳ್ಳಿ ಕೆಇಬಿ ಜಂಕ್ಷನ್ ನಡುವೆ ಭಾನುವಾರ ಮುಂಜಾನೆ ದುರ್ಘಟನೆ ● ಮತ್ತೊಬ್ಬರಿಗೆ ತೀವ್ರ ಗಾಯ



ರಕ್ಷಿತ್

ಮೈಸೂರು,ಮೇ 19 (ಆರ್‌ಕೆ)– ಕೆಟಿಎಂ ಬೈಕ್, ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದ ಪರಿಣಾಮ ಯುವಕ ದುರ್ಮರಣಕ್ಕೀಡಾದ ದುರಂತ ಮೈಸೂರಿನ ರಾಮಕೃಷ್ಣ ಪರಮಹಂಸ ರಸ್ತೆ–ದಟ್ಟಗಳ್ಳಿ ಕೆಇಬಿ ಜಂಕ್ಷನ್ ನಡುವೆ ಮಾರಮ್ಮ ದೇವಸ್ಥಾನದ ಬಳಿ ಇಂದು ಮುಂಜಾನೆ ಸಂಭವಿಸಿದೆ.

ಮೂಲತಃ ಕೆಜಿ ಕೊಪ್ಪಲಿನವರಾದ ಟಿಕೆ ಲೇಔಟ್ ನಿವಾಸಿ ಶಿವಪ್ಪ ಅವರ ಮಗ ರಕ್ಷಿತ್(26) ಅಪಘಾತದಲ್ಲಿ ಸಾವನ್ನಪ್ಪಿದವರು. ಘಟನೆಯಲ್ಲಿ ಗಾಯಗೊಂಡಿರುವ ಹಿಂಬದಿ ಸವಾರ ದಟ್ಟಗಳ್ಳಿ ನಿವಾಸಿ ತೇಜಸ್‌ನನ್ನು ಕುವೆಂಪುನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ನಜರ್‌ಬಾದ್‌ನಲ್ಲಿ ಶನಿವಾರ ನಡೆದ ಕರಗ ಮಹೋತ್ಸವದಲ್ಲಿ ರಾತ್ರಿಯಿಡೀ ಸ್ನೇಹಿತರೊಂದಿಗೆ



ಪಾಲ್ಗೊಂಡಿದ್ದ ರಕ್ಷಿತ್ ಮುಂಜಾನೆ ತನ್ನ ಕೆಟಿಎಂ(ಕೆಎ 55,ಡಬ್ಲ್ಯೂ 5487) ಬೈಕ್‌ನಲ್ಲಿ ತೇಜಸ್‌ನೊಂದಿಗೆ ಬರುತ್ತಿದ್ದಾಗ ರಾಮಕೃಷ್ಣನಗರದ ಶ್ರೀರಾಮಕೃಷ್ಣ ಪರಮಹಂಸ ಸರ್ಕಲ್ ಸಮೀಪ ಮಾರಮ್ಮ ದೇವಸ್ಥಾನದ ಎದುರು ರೋಡ್ ಡಿವೈಡರ್‌ಗೆ ಬೈಕ್ ಅಪ್ಪಳಿಸಿದೆ. ● 8ನೇ ಪುಟಕ್ಕೆ

ವರ್ಷ ಪೂರೈಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ 'ಗ್ಯಾರಂಟಿ' ಸರ್ಕಾರ

ಸರ್ಕಾರದ ಸಾಧನೆ ಒರೆಗೆ ಹಚ್ಚಲಿರುವ ಲೋಕಸಭಾ ಚುನಾವಣಾ ಫಲಿತಾಂಶ!



ಬೆಂಗಳೂರು, ಮೇ 19– ಸಿದ್ದರಾಮಯ್ಯನವರು ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿ ಸೋಮವಾರಕ್ಕೆ ಒಂದು ವರ್ಷ. ಸಿದ್ದರಾಮಯ್ಯ ಹಲವು ಸವಾಲುಗಳ ನಡುವೆಯೂ ಚುನಾವಣೆಗೂ ಮುನ್ನ ತಾವು ನೀಡಿದ ಭರವಸೆಯಂತೆ ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿದ್ದಾರೆ.

ಕಳೆದ ವರ್ಷ ನಡೆದ ವಿಧಾನಸಭೆ ಸಾರ್ವತ್ರಿಕ ಚುನಾವಣೆಯಲ್ಲಿ 135 ಸ್ಥಾನಗಳೊಂದಿಗೆ ಕಾಂಗ್ರೆಸ್ ನಿಚ್ಚಳ ಬಹುಮತ ಪಡೆಯಿತು. ಮುಖ್ಯಮಂತ್ರಿ ಸ್ಥಾನಕ್ಕಾಗಿ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ನಡುವೆ ತೀವ್ರ ಪೈಪೋಟಿ ಏರ್ಪಟ್ಟು, ಅಂತಿಮವಾಗಿ ಕಾಂಗ್ರೆಸ್ ಹೈಕಮಾಂಡ್ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿಯಾಗಿ ಹಾಗೂ ಡಿ.ಕೆ. ಶಿವಕುಮಾರ್ ಅವರನ್ನು ಉಪಮುಖ್ಯಮಂತ್ರಿಯಾಗಿ ಘೋಷಿಸಿತು.

ಅನ್ನಭಾಗ್ಯ: ಸಿದ್ದರಾಮಯ್ಯ 2023ರ ಮೇ 20ರಂದು ಪ್ರಮಾಣವಚನ ಸ್ವೀಕರಿಸಿದ ನಂತರ ನಡೆದ ಸಂಪುಟ ಸಭೆಯಲ್ಲೇ ಗ್ಯಾರಂಟಿಗಳಲ್ಲಿ ಒಂದಾದ 'ಅನ್ನಭಾಗ್ಯ' ಯೋಜನೆಯನ್ನು ಜಾರಿಗೊಳಿಸಿದರು. ಈ ಯೋಜನೆಯಂತೆ ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಬಡ ಕುಟುಂಬ ಸದಸ್ಯರಿಗೆ ತಲಾ 10 ಕೆಜಿ ಅಕ್ಕಿ ಕೊಡಬೇಕಿತ್ತು. ಆದರೆ, ಕೇಂದ್ರ ಸರ್ಕಾರದ 5 ಕೆಜಿ ಅಕ್ಕಿಯ ಜೊತೆಗೆ ಉಳಿದ 5 ಕೆಜಿ ಅಕ್ಕಿಗಾಗಿ ರಾಜ್ಯ ಸರ್ಕಾರ ಪರದಾಡಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. ಹಣ ನೀಡುತ್ತೇವೆ ಎಂದರೂ ಕೇಂದ್ರ ಸರ್ಕಾರ ಅಕ್ಕಿ ಕೊಡಲಿಲ್ಲ ಎಂದು ಆಪಾದಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ತಾವು ಹೇಳಿದಂತೆ 10 ಕೆಜಿ ಅಕ್ಕಿ ಕೊಡಲು ಸಾಧ್ಯವಿಲ್ಲ ಎಂಬಂತಹ ಪರಿಸ್ಥಿತಿ ನಿರ್ಮಾಣವಾದಾಗ ಬಿಪಿಎಲ್ ಕಾರ್ಡ್ ಕುಟುಂಬ ಸದಸ್ಯರಿಗೆ ತಲಾ 5 ಕೆಜಿ ಅಕ್ಕಿ ಜೊತೆಗೆ ಉಳಿದ 5 ಕೆಜಿ ಅಕ್ಕಿಗೆ ಕೆಜಿಗೆ 34 ರೂ.ಗಳಂತೆ ಹಣ ಸಂದಾಯದ ಮೂಲಕ ಈ ಯೋಜನೆಯನ್ನು ಅನುಷ್ಠಾನಗೊಳಿಸಿದರು. ಅವರು ಮುಖ್ಯಮಂತ್ರಿಯಾಗಿ ವರ್ಷವಾಗುತ್ತಿದ್ದರೂ ಅಕ್ಕಿ ಹೊಂದಿಸಲಾಗದೇ ಹಣ ಕೊಡುವ ಪ್ರಕ್ರಿಯೆ ಮುಂದುವರೆದಿದೆ. ಈ ಯೋಜನೆ ಬಗ್ಗೆ ವಿರೋಧ ಪಕ್ಷಗಳಾದ ಬಿಜೆಪಿ, ಜೆಡಿಎಸ್



ಟೀಕೆಗಳ ಸುರಿಮಳೆಯನ್ನೇ ಸುರಿಸಿವೆ. ಬಡವರಿಗೆ ಕೊಡುತ್ತಿರುವ ಹಾಲಿ 5 ಕೆಜಿ ಅಕ್ಕಿ ಪ್ರಧಾನಿ ಮೋದಿಯವರು ಕೊಡುತ್ತಿರುವುದು. ಹೀಗಾಗಿ ಸಿದ್ದರಾಮಯ್ಯ ಈ 5 ಕೆಜಿ ಜೊತೆಗೆ 10 ಕೆಜಿ ಸೇರಿಸಿ 15 ಕೆಜಿ ಅಕ್ಕಿ ಕೊಡಬೇಕಾಗಿತ್ತು ಎಂಬುದು ಅವರ ವಾದವಾಗಿದೆ.

ಶಕ್ತಿ ನಂತರ ಮಹಿಳೆಯರು ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸುವ 'ಶಕ್ತಿ' ಯೋಜನೆ ಜಾರಿಗೊಳಿಸಿದಾಗ ಬಸ್‌ಗಳಲ್ಲಿ ನೂಕು ನುಗ್ಗಲು. ಇದರಿಂದ ದಿನಂಪ್ರತಿ ಪ್ರಯಾಣಿಸುವ ವಿದ್ಯಾರ್ಥಿಗಳು ಹಾಗೂ ಇತರ ಪ್ರಯಾಣಿಕರು ತೊಂದರೆ ಅನುಭವಿಸಬೇಕಾಯಿತು. ಇದೂ ಕೂಡ ವಿಪಕ್ಷಗಳ ಟೀಕೆಗೆ ಗುರಿಯಾಯಿತು.

ಗೃಹಜ್ಯೋತಿ: ಮನೆಯೊಂದಕ್ಕೆ 200 ಯೂನಿಟ್ ಉಚಿತ ವಿದ್ಯುತ್ ನೀಡುವ 'ಗೃಹಜ್ಯೋತಿ' ಯೋಜನೆಯನ್ನು ಘೋಷಿಸಿದ್ದ ಸಿದ್ದರಾಮಯ್ಯ, ನಂತರ ಗ್ರಾಹಕರು ಪ್ರತಿ ತಿಂಗಳು ಬಳಸುವ ವಿದ್ಯುತ್‌ನ ಸರಾಸರಿಯನ್ನು ಲೆಕ್ಕ ಹಾಕಿ ಅದರ ಜೊತೆಗೆ 5 ಯೂನಿಟ್ ಹೆಚ್ಚುವರಿಯಾಗಿ ಉಚಿತ ವಿದ್ಯುತ್ ನೀಡಿದರು. ಈ ಯೋಜನೆ ಸ್ವಲ್ಪ ವಿಳಂಬವಾದಾಗ ರಾಜ್ಯದ ಹಲವೆಡೆ ಗ್ರಾಹಕರು ವಿದ್ಯುತ್ ಬಿಲ್ ಕಟ್ಟುವುದಿಲ್ಲ ಎಂದು ವಿದ್ಯುತ್ ಇಲಾಖೆ ಸಿಬ್ಬಂದಿಯೊಂದಿಗೆ ಘರ್ಷಣೆಗಿಳಿದ ಘಟನೆಗಳೂ ನಡೆಯಿತು. ಈ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರನ್ನು ಸಾಮಾಜಿಕ ಜಾಲತಾಣದಲ್ಲಿ ಟ್ರೋಲ್ ಮಾಡಲಾಗಿತ್ತು. ಆದರೆ, ಯೋಜನೆ ಜಾರಿಯೇನೋ ಆಯಿತು. ಅದರ ಬೆನ್ನ ಹಿಂದೆಯೇ ವಿದ್ಯುತ್ ದರ ● 8ನೇ ಪುಟಕ್ಕೆ

ಇಂದಿನಿಂದ ಸುತ್ತೂರು ಶ್ರೀ ಕ್ಷೇತ್ರದಲ್ಲಿ ಅಧ್ಯಯನ ಶಿಬಿರ

ಮೈಸೂರು, ಮೇ 19–ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್ಎಸ್ ಮಹಾವಿದ್ಯಾಪೀಠ ಸಂಯುಕ್ತಾಶ್ರಯದಲ್ಲಿ ಮೇ 20ರಿಂದ ಶ್ರೀ ಸುತ್ತೂರು ಕ್ಷೇತ್ರದಲ್ಲಿ ಶ್ರೀ ನಿಜಗುಣ ಶಿವಯೋಗಿಗಳವರ ಪರಮಾರ್ಥಗೀತೆ ಗ್ರಂಥದ–ಅಧ್ಯಯನ ಶಿಬಿರವನ್ನು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ಆಯೋಜಿಸಲಾಗಿದೆ.

ಶ್ರೀ ನಿಜಗುಣ ಶಿವಯೋಗಿಗಳವರ ಪರಮಾರ್ಥಗೀತೆ–ಕೃತಿ ಪರಿಚಯ, ಪ್ರಥಮ ಗತಿ – ವಸ್ತು–ಶಕ್ತಿ–ದ್ವಿತಯಂ, ದ್ವಿತೀಯ ಗತಿ–ಭೂತ ಪಂಚೀಕರಣಂ, ತೃತೀಯ ಗತಿ–ಗುಣಭೇದ ವಿಕಾರಂ, ಚತುರ್ಥ ಗತಿ–ಪಿಂಡಾಂಡ–ಉದಯ–ವಿಭೇದ, ಪಂಚಮ ಗತಿ – ವಿಶ್ವ ರಚನಾಭೇದಂ, ಷಷ್ಠಮ ಗತಿ–ಬಂಧ ಮೋಕ್ಷ ದ್ವಿತಯಂ, ಸಪ್ತಮ ಗತಿ–ಸಾಧಕನ ಸ್ಥಿತಿ, ಅಷ್ಟಮ ಗತಿ–ಯೋಗದ ಕ್ರಮ, ನವಮ ಗತಿ–ನಿಸ್ಸಂಗ ಯೋಗ, ದಶಮ ಗತಿ–ಚತುರ್ಭೂಮಿಕಾ, ಏಕಾದಶ ಗತಿ–ಯೋಗಿವರನ ಚರಿತಂ, ಈ ವಿಷಯಗಳನ್ನು ಕುರಿತು ಅನುಕ್ರಮವಾಗಿ ಶ್ರೀ ಮಲ್ಲಯ್ಯ ಸ್ವಾಮಿಗಳು, ಶ್ರೀ ನಿಜಗುಣ ದೇವರು, ಶ್ರೀ ಸದಾಶಿವ ಗುರೂಜಿ, ಡಾ.ಆರೂಡ ಭಾರತಿ ಸ್ವಾಮಿಗಳು, ಡಾ. ಬಿ.ವಿ.ವಸಂತ ಕುಮಾರ್, ಡಾ.ಆರೂಡ ಭಾರತಿ ಸ್ವಾಮಿಗಳು, ಶ್ರೀ ಸದಾಶಿವ ಗುರೂಜಿ, ಶ್ರೀ ಈಶಪ್ರಸಾದ ಸ್ವಾಮಿಗಳು, ಡಾ.ಬಿ.ವಿ.ವಸಂತ ಕುಮಾರ್, ಡಾ.ಕೆ.ಅನಂತರಾಮು, ಶ್ರೀ ಈಶಪ್ರಸಾದ ಸ್ವಾಮಿಗಳು, ಡಾ.ಕೆ.ಅನಂತರಾಮು ಅವರಿಂದ ಉಪನ್ಯಾಸ ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ನರ್ಸಿಂಗ್ ವಿದ್ಯಾರ್ಥಿಗಳಿಗೆ ಲ್ಯಾಂಪ್ ಲೈಟಿಂಗ್ ಕಾರ್ಯಕ್ರಮ




ಡಾ॥ ಚಂದ್ರಶೇಖರ್ ಫೌಂಡೇಷನ್ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾವೇರಿ ಸಮೂಹ ವಿದ್ಯಾಸಂಸ್ಥೆಗಳು ಹಾಗೂ ಆಲ್‌ಫ್ಯಾನ್ ಸೋ ಕಾಲೇಜಿನ ಬಿಎಸ್ಸಿ ನರ್ಸಿಂಗ್ ಹಾಗೂ ಡಿಪ್ಲೋಮಾ ಇನ್ ನರ್ಸಿಂಗ್ ವಿದ್ಯಾರ್ಥಿಗಳಿಗೆ ಲ್ಯಾಂಪ್ ಲೈಟಿಂಗ್ ಮೂಲಕ ಪ್ರಮಾಣ ಸ್ವೀಕರಿಸುವ ಕಾರ್ಯಕ್ರಮವು ವಿಜೃಂಭಣೆಯಿಂದ ಕಾಲೇಜಿನ ಆವರಣದಲ್ಲಿ ನೆರವೇರಿತು.

ಮೈಸೂರು: ಡಾ॥ ಚಂದ್ರಶೇಖರ್ ಫೌಂಡೇಷನ್ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾವೇರಿ ಸಮೂಹ ವಿದ್ಯಾಸಂಸ್ಥೆಗಳು ಹಾಗೂ ಆಲ್‌ಫ್ಯಾನ್ ಸೋ ಕಾಲೇಜಿನ ಬಿಎಸ್ಸಿ ನರ್ಸಿಂಗ್ ಹಾಗೂ ಡಿಪ್ಲೋಮಾ ಇನ್ ನರ್ಸಿಂಗ್ ವಿದ್ಯಾರ್ಥಿಗಳಿಗೆ ಲ್ಯಾಂಪ್ ಲೈಟಿಂಗ್ ಮೂಲಕ ಪ್ರಮಾಣ ಸ್ವೀಕರಿಸುವ ಕಾರ್ಯಕ್ರಮವು ವಿಜೃಂಭಣೆಯಿಂದ ಇತ್ತೀಚೆಗೆ ಕಾಲೇಜಿನ ಆವರಣದಲ್ಲಿ ನೆರವೇರಿತು.

ಸಮಾರಂಭವನ್ನು ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ ಉದ್ಘಾಟಿಸಿದರು. ಆರೋಗ್ಯ ಸುರಕ್ಷಾ ವೃತ್ತಿಪರರಿಗೆ ಜಾಗತಿಕ ಮಟ್ಟದಲ್ಲಿ ಭಾರೀ ಬೇಡಿಕೆ ಇರುವ ಬಗ್ಗೆ ತಿಳಿಸಿದರು.

ಮುಖ್ಯ ಅತಿಥಿಗಳಾಗಿದ್ದ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕುಮಾರಸ್ವಾಮಿ ಮಾತನಾಡಿ, ನರ್ಸಿಂಗ್ ಸೇವೆ ವೈದ್ಯರ ಸೇವೆಯಷ್ಟೇ ಪ್ರಾಮುಖ್ಯತೆವುಳ್ಳಂತಹದ್ದು ಎಂದು ಮನವರಿಕೆ ಮಾಡಿಕೊಟ್ಟರು.

ಸಮಾರಂಭದ ಅಧ್ಯಕ್ಷತೆಯನ್ನು ಸಂಸ್ಥೆಯ ಛೇರ್ಮನ್ ಡಾ॥ ಜಿ.ಆರ್.ಚಂದ್ರಶೇಖರ್ ವಹಿಸಿದ್ದರು. ಅವರು ಮಾತನಾಡಿ, ನರ್ಸ್‌ಗಳು ಯಾವಾಗಲು ರೋಗಿಗಳ ವಿಚಾರದಲ್ಲಿ ಕಾಳಜಿ ಮತ್ತು ಸಹಾನುಭೂತಿಯಿಂದ ಕಾರ್ಯನಿರ್ವಹಿಸುವಂತೆ ತಿಳಿಸಿದರು. ಡಾ.ಸರಳ ಚಂದ್ರಶೇಖರ್–ಸುರಕ್ಷಾ ವಿದ್ಯಾಸಂಸ್ಥೆಯ ಅಧ್ಯಕ್ಷರು, ಶ್ರೀಮತಿ ಸುಲಲಿ ತಾಂಗಿ–ನರ್ಸಿಂಗ್ ಸೂಪರಿಟೆಂಟ್, ಚೆಲುವಾಂಬ ಆಸ್ಪತ್ರೆ, ಕಾಲೇಜಿನ ಡೀನ್ ಪ್ರೊ.ಶ್ರೀಕಂಠಸ್ವಾಮಿ, ನರ್ಸಿಂಗ್ ಪ್ರಿನ್ಸಿಪಾಲ್ ಡಾ॥ ರಾಜಕಣ್ಣನ್, ವಿದ್ಯಾರ್ಥಿಗಳ ಪೋಷಕರು, ಕಾಲೇಜಿನ ಆಡಳಿತ ವರ್ಗ, ಬೋಧಕ ವರ್ಗ ಸಮಾರಂಭದಲ್ಲಿ ಹಾಜರಿದ್ದರು.

ಹೊಸ ಆವಿಷ್ಕಾರಗಳನ್ನು ತಿಳಿದುಕೊಳ್ಳಲು ರಾಷ್ಟ್ರೀಯ ವಿಚಾರ ಸಂಕಿರಣಗಳು ಸಹಕಾರಿ

ವಿಶ್ರಾಂತ ಕುಲಪತಿ ಪ್ರೊ. ವೈ.ಎಸ್.ಸಿದ್ದೇಗೌಡ



ತುಮಕೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ವೈ.ಎಸ್.ಸಿದ್ದೇಗೌಡ ಮಾತನಾಡಿದರು.

ಮೈಸೂರು, ಮೇ 19(ಎಸ್‌ಪಿಎನ್)– ಬೋಧಕರು, ಸಂಶೋಧಕರು ಜಗತ್ತಿನಲ್ಲಿ ಅಭಿವೃದ್ಧಿ ಗೊಳ್ಳುತ್ತಿರುವ ಹೊಸಹೊಸ ಆವಿಷ್ಕಾರಗಳನ್ನು ತಿಳಿದುಕೊಳ್ಳಲು ರಾಷ್ಟ್ರೀಯ ವಿಚಾರ ಸಂಕಿರಣಗಳು ಸಹಕಾರಿಯಾಗುತ್ತವೆ ಎಂದು ತುಮಕೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ವೈ.ಎಸ್.ಸಿದ್ದೇಗೌಡ ಅಭಿಪ್ರಾಯಪಟ್ಟರು.

ಮೈಸೂರು ವಿವಿ ಮಾನಸಗಂಗೋತ್ರಿ ಆವರಣದ ಸೆನೆಟ್‌ಭವನದಲ್ಲಿ ಕೆಎಸ್‌ಓಯು ಮತ್ತು ಮೈಸೂರು ವಿವಿ ಸಮಾಜ ಶಾಸ್ತ್ರ ವಿಭಾಗ ಹಾಗೂ ಇಂಡಿಯನ್ ಸೊಸೈಟಿ ಆಫ್ ಪ್ರೊಫೆಷನಲ್ ಸೋಷಿಯಲ್ ವರ್ಕ್(ಐಎಸ್‌ಪಿಎಸ್‌ಡಬ್ಲ್ಯು) ಸಹಯೋಗದೊಂದಿಗೆ ಆಯೋಜಿಸಿದ್ದ ಮೂರು ದಿನಗಳು ರಾಷ್ಟ್ರೀಯ ವಿಚಾರ ಸಂಕಿರಣದ ಸಮಾರೋಪದಲ್ಲಿ ಭಾಗವಹಿಸಿ ಮಾತನಾಡಿದರು. ಸಮಾಜಶಾಸ್ತ್ರ ವಿಭಾಗದ ವಿದ್ಯಾರ್ಥಿಗಳು ಸಾಮಾಜಿಕ ಸೇವಾ ವಿಭಾಗದಲ್ಲಿ ಹೊಸಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಬೇಕು. ಈ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವ ಯುವಕರು ಕಠಿಣ ಸಮಸ್ಯೆಗೆ ಸರಳ ಪರಿಹಾರದ ಮೂಲಕ ಸಾಮಾಜಿಕ ಕ್ಷೇತ್ರಕ್ಕೆ ಹೊಸ ಆಯಾಮ ನೀಡಬೇಕು ಎಂದು ಸಲಹೆ ನೀಡಿದರು.

ಈ ವೇಳೆ ತುಮಕೂರು ವಿವಿ ಸಮಾಜ ಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಪ್ರೊ.ಬಿ. ರಮೇಶ್, ಪ್ರೊ.ಕೆ.ಜಿ.ಪರಶುರಾಮ, ಪ್ರೊ.ಆರ್.ಧನಶೇಖರ ಪಾಂಡಿಯನ್, ಪ್ರೊ.ಗುಂಜಾಲ್, ಡಾ.ಜ್ಯೋತಿ, ಪ್ರೊ.ಪ್ರವೀಣ್, ಡಾ.ಚಂದ್ರ ಮೌಳಿ ಸೇರಿದಂತೆ ಇತರರಿದ್ದರು. ಇದೇ ವೇಳೆ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ನೀಡಿ ಗೌರವಿಸಲಾಯಿತು. ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ರಾಜ್ಯದಲ್ಲಿ ಇನ್ನೂ 5 ದಿನ ಧಾರಾಕಾರ ಮಳೆ

ಬೆಂಗಳೂರು: ರಾಜ್ಯದಲ್ಲಿ ಇದೇ 20ರಿಂದ ಐದು ದಿನ ಕರಾವಳಿ, ದಕ್ಷಿಣ ಹಾಗೂ ಉತ್ತರ ಒಳನಾಡು ಜಿಲ್ಲೆಗಳ ಅಲ್ಲಲ್ಲಿ ಗುಡುಗು ಸಹಿತ ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿದೆ. ಹಲವು ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಘೋಷಿಸಿದೆ.

ಇದೇ 20ರಂದು ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಹಾಸನ, ಕೊಡಗು, ಚಾಮರಾಜನಗರ, ಮೈಸೂರು ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಘೋಷಿಸಿದ್ದರೆ, ಅದೇ ದಿನ ಉತ್ತರ ಕನ್ನಡ, ಹಾವೇರಿ, ಮಂಡ್ಯ, ರಾಮನಗರ ಜಿಲ್ಲೆಗಳಿಗೆ 'ಯೆಲ್ಲೋ ಅಲರ್ಟ್' ಸೂಚನೆ ನೀಡಲಾಗಿದೆ.

21ರಂದು ಶಿವಮೊಗ್ಗ, ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಹಾಸನ, ಕೊಡಗು ಜಿಲ್ಲೆಗಳಿಗೆ 'ಆರೆಂಜ್' ಹಾಗೂ ಉತ್ತರ ಕನ್ನಡ, ಮಂಡ್ಯ, ಮೈಸೂರು, ಚಾಮರಾಜನಗರ ಜಿಲ್ಲೆಗಳಿಗೆ 'ಯೆಲ್ಲೋ ಅಲರ್ಟ್' ಸೂಚನೆ ನೀಡಲಾಗಿದೆ. ಇದೇ 22ರಂದು ಶಿವಮೊಗ್ಗ, ಹಾಸನ, ಚಿಕ್ಕಮಗಳೂರು ಜಿಲ್ಲೆಗಳಿಗೆ 'ಆರೆಂಜ್' ಹಾಗೂ ಕೊಡಗು, ದಾವಣಗೆರೆ, ಮೈಸೂರು, ಚಾಮರಾಜನಗರ ಜಿಲ್ಲೆಗಳಿಗೆ 'ಯೆಲ್ಲೋ ಅಲರ್ಟ್' ಸೂಚನೆ ಕೊಡಲಾಗಿದೆ.

ಮೈಸೂರು ಟ್ರಾವಲ್ಸ್ ಅಸೋಸಿಯೇಶನ್‌ನ ನೂತನ ಪದಾಧಿಕಾರಿಗಳ ಆಯ್ಕೆ

ಮೈಸೂರು, ಮೇ 19(ಎಂಕೆ)– ಶುಕ್ರವಾರದಂದು ಹುಲ್ಲಹಳ್ಳಿಯ ಕಪಿಲಾ ರಿವರ್‌ಫ್ರಂಟ್‌ನಲ್ಲಿ ಮೈಸೂರು ಟ್ರಾವಲ್ಸ್ ಅಸೋಸಿಯೇಶನ್‌ನ 2023–24ನೇ ಸಾಲಿನ ವಾರ್ಷಿಕ ಮಹಾಸಭೆ ನಡೆಯಿತು. ಇದೇ ವೇಳೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಅಧ್ಯಕ್ಷರಾಗಿ ಬಿ.ಎಸ್.ಪ್ರಶಾಂತ್, ಉಪಾಧ್ಯಕ್ಷರಾಗಿ ಡೇವಿಡ್ ರಾಜ್, ಕಾರ್ಯದರ್ಶಿಯಾಗಿ ಮಂಜುನಾಥ್ ಕೆ., ಜಂಟಿ ಕಾರ್ಯದರ್ಶಿಯಾಗಿ ರಾಘವೇಂದ್ರ ಕೆ.ಸಿ., ಖಜಾಂಚಿಯಾಗಿ ಅರುಣ್ ಕುಮಾರ್ ಎಂ., ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿ ಅಶೋಕ್ ಎಸ್.ಜೆ. ಆಯ್ಕೆಯಾಗಿದ್ದಾರೆ.



ಈ ವೇಳೆ ನೂತನ ಅಧ್ಯಕ್ಷ ಬಿ.ಎಸ್. ಪ್ರಶಾಂತ್ ಮಾತನಾಡಿ, ಮೈಸೂರು ಪ್ರವಾಸೋದ್ಯಮಿಗಳ ನೆಚ್ಚಿನ ನಗರ. ನಮ್ಮ ನಗರಕ್ಕೆ ಇನ್ನೂ ಹೆಚ್ಚು ಪ್ರವಾಸಿಗರನ್ನು ಆಕರ್ಷಿಸಲು ಹಲವು ವಿನೂತನ ಪ್ರಯತ್ನಗಳನ್ನು ಮಾಡಬೇಕಿದೆ. ಹೆಚ್ಚು ಪ್ರಸಿದ್ಧವಾಗದ ಮೈಸೂರಿನಲ್ಲಿನ ವಿವಿಧ ಪ್ರವಾಸಿ ತಾಣಗಳನ್ನು ಜನರಿಗೆ ಪರಿಚಯಿಸುವ ಕೆಲಸ ನಡೆಯಬೇಕಿದೆ. ಈ ನಿಟ್ಟಿನಲ್ಲಿ ನಮ್ಮ ತಂಡ ಕಾರ್ಯಪ್ರವೃತ್ತವಾಗಲಿದೆ. ಮೈಸೂರಿನಲ್ಲಿ ಪ್ರವಾಸಿಗರು ಹೆಚ್ಚು ದಿನ ತಂಗಬೇಕು. ಮೈಸೂರಿನ ಹೆಸರು ವಿಶ್ವ ಪ್ರವಾಸೋದ್ಯಮದ ಭೂಪಟದಲ್ಲಿ ತನ್ನದೇ ಆದ ಛಾಪು ಮೂಡಿಸಬೇಕು ಎಂಬುದು ನಮ್ಮೆಲ್ಲರ ಗುರಿ ಎಂದರು.

ಕಾರ್ಯಕ್ರಮಕ್ಕೆ ಅತಿಥಿಯಾಗಿ ಆಗಮಿಸಿದ್ದ ಕರ್ನಾಟಕ ಟೂರಿಸಂ ಫೋರಂನ ಉಪಾಧ್ಯಕ್ಷ ರವಿ ಮಾತನಾಡಿ, ಪ್ರವಾಸೋದ್ಯಮದ ವಿಷಯದಲ್ಲಿ ಮೈಸೂರು ಸೇರಿದಂತೆ ಹಲವು ಸ್ಥಳಗಳಲ್ಲಿ ಒಂದಷ್ಟು ಬದಲಾವಣೆಗಳು, ಉನ್ನತೀಕರಣಗಳು ಆಗಬೇಕಿವೆ. ಹೋಟೆಲ್‌ಗಳಲ್ಲಿ ಪ್ರವಾಸಿ ವಾಹನ ಚಾಲಕರಿಗೆ ಇರುವ ವ್ಯವಸ್ಥೆ ಇನ್ನಷ್ಟು ಉನ್ನತೀಕರಣಗೊಳ್ಳಬೇಕು. ಮಾತ್ರವಲ್ಲದೆ ಪ್ರವಾಸಿ ವಾಹನ ಚಾಲಕರಿಗೆ ಇತರ ಸ್ಥಳಗಳಿಂದ ಬರುವ ಪ್ರವಾಸಿಗರೊಂದಿಗೆ ಹೇಗೆ ವ್ಯವಹರಿಸಬೇಕು ಎಂಬುದರ ಬಗ್ಗೆ ಶಿಕ್ಷಣ ನೀಡಬೇಕು. ಹೀಗೆ ಮಾಡಿದಾಗ ಮಾತ್ರ ಪ್ರವಾಸಿಗರು ಎಲ್ಲ ಆಯಾಮಗಳಲ್ಲಿಯೂ ಇಲ್ಲಿನ ಪ್ರವಾಸಿ ಅನುಭವವನ್ನು ಆಸ್ವಾದಿಸಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ವಾಹನ ಚಾಲಕರಿಗೆ ಒಂದು ವಿಶೇಷ ಕಾರ್ಯಾಗಾರ ಮಾಡಬೇಕು ಎಂಬ ಯೋಚನೆ ಇದೆ ಎಂದು ತಿಳಿಸಿದರು.

ಈ ವೇಳೆ ಮೈಸೂರು ಟ್ರಾವಲ್ಸ್ ಅಸೋಸಿಯೇಶನ್‌ನ ನಿಕಟಪೂರ್ವ ಅಧ್ಯಕ್ಷರಾದ ಜಯಪ್ರಕಾಶ್ ರಾಜೇ ಅರಸ್, ಗೌರವಾಧ್ಯಕ್ಷರಾದ ಸಿ.ಎ.ಜಯಕುಮಾರ್ ಮತ್ತಿತರರು ಇದ್ದರು.

ಭಾರೀ ಮಳೆಯಿಂದ ಶುಂಠಿ, ತಂಬಾಕು ಬೆಳೆಗೆ ಹಾನಿ



ಹುಣಸೂರು, ಮೇ 19– ಭಾರೀ ಮಳೆಯಿಂದಾಗಿ ತಾಲೂಕಿನ ಹಲವು ಗ್ರಾಮಗಳಲ್ಲಿ ಅಪಾರ ಪ್ರಮಾಣದ ತಂಬಾಕು, ಶುಂಠಿ ಬೆಳೆ ಜಲಾವೃತವಾಗಿದೆ. ನೀರು ಹರಿವಿನ ರಭಸಕ್ಕೆ ಜಮೀನಿನ ಮಣ್ಣು ಕೊಚ್ಚಿಕೊಂಡು ಹೋಗಿದ್ದು ರೈತರು ಕಂಗಾಲಾಗಿದ್ದಾರೆ.

ಭಾನುವಾರ ಮಧ್ಯಾಹ್ನ ಸುಮಾರು ಒಂದೂವರೆ ಗಂಟೆ ಕಾಲ ಸುರಿದ ಭಾರೀ ಮಳೆಯಿಂದ ಹನಗೋಡು ಹೋಬಳಿಯ ಕರಣಕುಪ್ಪೆ, ಕಲ್ಲಹಳ್ಳಿ, ಕೊತ್ತೆಗಾಲ, ಚಿಲ್ಕುಂದ ಸೇರಿದಂತೆ ಗ್ರಾಪಂ ವ್ಯಾಪ್ತಿಯ ಹರೀನಹಳ್ಳಿ, ಕಣಗಾಲು, ಮುತ್ತುರಾಯನ ಹೊಸಹಳ್ಳಿ, ಆಡಿಗನಹಳ್ಳಿಯಲ್ಲಿ ವಿವಿಧ ಬೆಳೆ ಕೊಚ್ಚಿಹೋಗಿ ಅಪಾರ ನಷ್ಟವಾಗಿದೆ.

ನೂರಾರು ಎಕರೆ ಪ್ರದೇಶದಲ್ಲಿ ನಾಟಿ ಮಾಡಿದ್ದ ತಂಬಾಕು ಹಾಗೂ ಶುಂಠಿ ಬೆಳೆ ಹಾಳಾಗಿದೆ. ಹೊಲದ ಫಲವತ್ತಾದ ಮಣ್ಣು ಮಳೆ ನೀರಿನೊಂದಿಗೆ ಹಳ್ಳ ಸೇರಿದೆ. ಲಕ್ಷಾಂತರ ರೂ. ಸಾಲ ಮಾಡಿ ಶುಂಠಿ ಹಾಗೂ ತಂಬಾಕು ನಾಟಿ ಮಾಡಿದ್ದ ರೈತರು ಮತ್ತೆ ನಷ್ಟದ ಸುಳಿಗೆ ಸಿಲುಕಿದ್ದಾರೆ. ತಾಲೂಕಿನಲ್ಲಿ ಕೋಟ್ಯಾಂತರ ಮೌಲ್ಯದ ಬೆಳೆ ನಾಶವಾಗಿದೆ. ಕೃಷಿ ಹಾಗೂ ಕಂದಾಯ ಇಲಾಖೆಯವರು ಸರ್ವೆ ಮಾಡಿ, ನ್ಯಾಯಯುತ ಪರಿಹಾರಕ್ಕೆ ಸರ್ಕಾರಕ್ಕೆ ಶಿಫಾರಸು ಮಾಡಬೇಕೆಂದು ರೈತರು ಮನವಿ ಮಾಡಿದ್ದಾರೆ.

ಮತ್ತೊಂದೆಡೆ ಹರ್ಷ: ಮುತುರಾಯನ ಹೊಸಹಳ್ಳಿ ಬೆಟ್ಟದಿಂದ ಅಪಾರ ಪ್ರಮಾಣದ ನೀರು ಹರಿದು ಬಂದಿರುವ ಪರಿಣಾಮ ಹಲವು ಕೆರೆ–ಕಟ್ಟೆಗಳು ತುಂಬಿ ಕಂಗೊಳಿಸುತ್ತಿವೆ. ಕಣಗಾಲಿನ ಆ ಗ್ರಾಮದ ಕೆರೆ, ಗೆಂಡೆಕೆರೆ, ಚನ್ನಮ್ಮನಕಟ್ಟೆ, ಹರೀನಹಳ್ಳಿಕೆರೆ, ಆಡಿಗನಹಳ್ಳಿಕೆರೆ, ನಾಗಮಂಗಲ ಕೆರೆ, ಕಲ್ಲಹಳ್ಳಿಯ ನಾಲ್ಕು ಕೆರೆಗಳು ಹಾಗೂ ಚಿಲ್ಕುಂದ ಭಾಗದ ಹಲವು ಕೆರೆ–ಕಟ್ಟೆಗಳು ಭರ್ತಿಯಾಗಿವೆ. ಕೆಲವು ಕೆರೆಗಳು ಕೋಡಿ ಬಿದ್ದು, ರಸ್ತೆಗಳು ಜಲಾವೃತವಾಗಿದ್ದವು. ಕೆರೆ–ಕಟ್ಟೆ ತುಂಬಿದ ಖುಷಿಯಲ್ಲಿ ಮಳೆ ನಿಂತ ಬಳಿಕ ಕೆಲವರು ಮೀನುಬೇಟೆ ನಡೆಸಿದ್ದು ವಿಶೇಷವಾಗಿತ್ತು.

ಗಾಜಾದಲ್ಲಿ ದಾಳಿ ತೀವ್ರ: 40 ಪ್ಯಾಲೆಸ್ತೇನಿಯನ್ನರ ಹತ್ಯೆ

ಜೆರುಸಲೇಂ(ಇಸ್ರೇಲ್): ದಕ್ಷಿಣ ಗಾಜಾದ ರಫಾಹ್ ಮತ್ತು ಉತ್ತರ ಗಾಜಾದ ಜಬಾಲಿಯಾದಲ್ಲಿ ಭಾನುವಾರ ಇಸ್ರೇಲ್ ನಡೆಸಿದ ದಾಳಿಯಲ್ಲಿ 40 ಪ್ಯಾಲೆಸ್ತೇನಿಯನ್ನರು ಮೃತಪಟ್ಟಿದ್ದಾರೆ. ಆಕ್ರಮಿತ ಪಶ್ಚಿಮ ದಂಡೆಯಲ್ಲಿರುವ ಜೆನಿನ್ ಪಟ್ಟಣದ ಮೇಲೆ ಇಸ್ರೇಲಿ ಪಡೆಗಳು ನಡೆಸಿದ ಕ್ಷಿಪಣಿ ದಾಳಿಯಲ್ಲಿ ಪ್ಯಾಲೆಸ್ತೀನ್ ಸಶಸ್ತ್ರ ಚಳವಳಿಯ ಕಮಾಂಡರ್ ಖಿಮೈಸೆ ಹತನಾಗಿದ್ದಾನೆ. ಖಿಮೈಸೆ ವಾಸವಿದ್ದ ಕಟ್ಟಡದ ಮೇಲೆ ಕ್ಷಿಪಣಿ ದಾಳಿ ನಡೆದಿದೆ. ಉತ್ತರ ಗಾಜಾದ ಕಮಲ್ ಅಡ್ವಾನ್ ಆಸ್ಪತ್ರೆ ಬಳಿಯ ವಸತಿ ಸಂಕೀರ್ಣದ ಮೇಲೆ ನಡೆದ ಬಾಂಬ್ ದಾಳಿಯಲ್ಲಿ ಮಕ್ಕಳು ಮತ್ತು ಮಹಿಳೆಯರು ಸೇರಿದಂತೆ 22 ಜನರು ಮತ್ತು ಜಬಾಲಿಯಾದಲ್ಲಿನ ಅಲ್ ಫಲ್ಲುಜಾ ಪ್ರದೇಶದಲ್ಲಿ ನೀರು ತರಲು ಹೋಗುತಿದ್ದ ಜನರ ಮೇಲೆ ನಡೆದ ಶೆಲ್ ದಾಳಿಯಲ್ಲಿ 8 ಜನರು ಮೃತಪಟ್ಟಿದ್ದಾರೆ. ದಾಳಿ ಉಲ್ಬಣಗೊಂಡಂತೆ, ರಫಾದಿಂದ 6.3 ಮಿಲಿಯನ್ ಮತ್ತು ಉತ್ತರ ಗಾಜಾದಿಂದ 1 ಮಿಲಿಯನ್ ಜನರು ಪಲಾಯನ ಮಾಡಿದ್ದಾರೆ.

ನ್ಯಾಯಾಧೀಶರಿಗೆ ಆತ್ಮೀಯ ಬೀಳ್ಕೊಡುಗೆ....



ಮೈಸೂರು ನ್ಯಾಯಾಲಯದಲ್ಲಿ ಮೂರನೇ ಸಿಟಿ ಸಿವಿಲ್ ಕೋರ್ಟ್ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸುತ್ತಿದ್ದ ಸಂದೇಶ ಭಂಡಾರಿ ಅವರು ವರ್ಗಾವಣೆಯಾದ ಹಿನ್ನೆಲೆಯಲ್ಲಿ ಅವರನ್ನು ನ್ಯಾಯಾಲಯದ ಸಿಬ್ಬಂದಿ ವರ್ಗದವರು ಆತ್ಮೀಯವಾಗಿ ಸನ್ಮಾನಿಸಿ, ಬೀಳ್ಕೊಟ್ಟರು. ಈ ವೇಳೆ ನೇತ್ರಾ ಮೋಹನ್ ಶಿರಸ್ತೇದಾರ್ ಸೇರಿ ಹಲವರು ಹಾಜರಿದ್ದರು.

ಬಸವ ಜಯಂತಿಗೆ ಹಲವು ಗಣ್ಯರಿಗೆ ಆಹ್ವಾನ






ಜೂನ್ 9ರಂದು ಮೈಸೂರಿನಲ್ಲಿ ನಡೆಯುವ ಬಸವ ಜಯಂತಿ ಕಾರ್ಯಕ್ರಮಕ್ಕೆ ಆಗಮಿಸುವಂತೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಸಚಿವ ಎಂ.ಬಿ.ಪಾಟೀಲ್, ಶಾಸಕ ಶಾಮನೂರು ಶಿವಶಂಕರಪ್ಪ ಅವರಿಗೆ ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ.ಪ್ರದೀಪ್‌ಕುಮಾರ್ ಆಹ್ವಾನ ನೀಡಿದರು. ಈ ವೇಳೆ ಕೋಶಾಧ್ಯಕ್ಷ ವೀರೇಶ್, ರಘು, ಸಿಂಧುವಳ್ಳಿ ನಟರಾಜು, ದೀಪು ಇದ್ದರು.

ಮೈಸೂರು ಜೈಲ್ ಬಳಿ ಮೊಬೈಲ್ ಇನ್ನಿತರೆ ಪದಾರ್ಥ ಪತ್ತೆ

ಮೈಸೂರು, ಮೇ 19– ಮೈಸೂರು ಕೇಂದ್ರ ಕಾರಾಗೃಹದ ಸಮೀಪ ಕಪ್ಪು ಕವರ್‌ನಲ್ಲಿ ಮೊಬೈಲ್ ಇನ್ನಿತರ ವಸ್ತುಗಳು ಪತ್ತೆಯಾಗಿದ್ದು, ಈ ಸಂಬಂಧ ಮಂಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕೆಎಸ್‌ಐಎಸ್‌ಎಫ್ ಸಿಬ್ಬಂದಿ ಶನಿವಾರ ಮಧ್ಯಾಹ್ನ ಗಸ್ತಿನಲ್ಲಿದ್ದಾಗ ಕಾರಾಗೃಹದ ಹೊರಭಾಗದ ಕಾಂಪೌಂಡ್ ಮೂಲೆಯಲ್ಲಿ ಯಾವುದೋ ವಸ್ತುಗಳನ್ನು ಸುತ್ತಿದ್ದ ಕಪ್ಪು ಕವರ್ ಪತ್ತೆಯಾಗಿದೆ. ಬಳಿಕ ಅದನ್ನು ಮೆಟಲ್ ಡಿಟೆಕ್ಟರ್‌ನಿಂದ ಪರಿಶೀಲಿಸಿದಾಗ ಆ ಕವರ್‌ನಿಂದ ಅಲಾರಾಂ ಮಾದರಿ ಶಬ್ಧ ಬಂದಿದೆ. ಅನುಮಾನಗೊಂಡ ಸಿಬ್ಬಂದಿ ಆ ಕವರ್ ಬಿಚ್ಚಿ ನೋಡಿದಾಗ ಅದರಲ್ಲಿ ನೋಕಿಯಾ ಮೊಬೈಲ್, ಚಾರ್ಜರ್, ಗಾಂಜಾ ಮಾದರಿ ವಸ್ತು, ಸ್ಪ್ರಿಂಗ್ ಹಾಗೂ ತಂತಿ ಪತ್ತೆಯಾಗಿದೆ. ಈ ವಸ್ತುಗಳನ್ನು ಕವರ್‌ನಲ್ಲಿ ಸುತ್ತಿ ಕಾರಾಗೃಹದ ಒಳಗೆ ಸಾಗಿಸುವ ಪ್ರಯತ್ನಿಸಿದ್ದಾರೆಂದು ಶಂಕಿಸಲಾಗಿದ್ದು, ಈ ಸಂಬಂಧ ಕಾರಾಗೃಹದ ಅಧಿಕಾರಿಗಳು ನೀಡಿದ ದೂರಿನ ಮೇರೆಗೆ ಮಂಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಒಂದನೇ ಪುಟದಿಂದ

ಕೊಡಗಿನಾದ್ಯಂತ ವರುಣನ ಆರ್ಭಟ


ನೀರಿಲ್ಲದೇ ಸ್ತಬ್ಧವಾಗಿದ್ದ ದುಬಾರೆ ಪ್ರವಾಸಿ ತಾಣ ಪ್ರವಾಸಿಗರಿಂದಲೂ ದೂರವಾಗಿತ್ತು. ನದಿ ಬತ್ತಿರುವ ಮಾಹಿತಿ ತಿಳಿಯದೇ ಇತ್ತ ಕಡೆ ಬರುತ್ತಿದ್ದ ಪ್ರವಾಸಿರು ಬತ್ತಿದ ದುಬಾರೆಯನ್ನು ಕಂಡು ನಿರಾಸೆಯಿಂದ ಮರಳುತ್ತಿದ್ದರು. ಆದರೆ, ಕೆಲ ದಿನಗಳಿಂದ ಕಾವೇರಿ ಜಲಾನಯನ ಪ್ರದೇಶಗಳಲ್ಲಿ ಉತ್ತಮ ಮಳೆಯಾಗುತ್ತಿರುವುದರಿಂದ ದುಬಾರೆ ಬಳಿ ನದಿ ನೀರಿನ ಪ್ರಮಾಣ ಹೆಚ್ಚಳವಾಗಿದ್ದು, ಜಲ ಕ್ರೀಡೆ ಮತ್ತೆ ಪ್ರಾರಂಭವಾಗಿದೆ. ಹಾರಂಗಿ ಜಲಾಶಯದ ಒಟ್ಟು ನೀರಿನ ಸಂಗ್ರಹ ಸಾಮರ್ಥ್ಯ 2859 ಅಡಿಗಳಿದ್ದು, ಪ್ರಸ್ತುತ 2823.3 ಅಡಿ ನೀರಿನ ಸಂಗ್ರಹವಿದೆ.

ಮಳೆ ವಿವರ: ಭಾನುವಾರ ಬೆಳಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆ ಅವಧಿಯಲ್ಲಿ ಕೊಡಗು ಜಿಲ್ಲೆಗೆ 18.18 ಮಿ.ಮೀ. ಸರಾಸರಿ ಮಳೆ ದಾಖಲಾಗಿದೆ. ಇನ್ನು ಮಡಿಕೇರಿ ತಾಲೂಕಿನ ನಾಪೋಕ್ಲು ವ್ಯಾಪ್ತಿ ಅತಿ ಹೆಚ್ಚು ಪ್ರಮಾಣದ 72.2 ಮಿ.ಮೀ. ಮಳೆ ದಾಖಲಾಗಿದೆ. ಸಂಪಾಜೆ ವ್ಯಾಪ್ತಿ 60.5 ಹಾಗೂ ಭಾಗಮಂಡಲ ಸುತ್ತಮುತ್ತಲಿನ ಪ್ರದೇಶದಲ್ಲಿ 41.2 ಮಿ.ಮೀ. ಮಳೆಯಾಗಿದೆ.

ಸೋಮವಾರಪೇಟೆ ತಾಲೂಕಿನ ಶನಿವಾರಸಂತೆ ವ್ಯಾಪ್ತಿಯಲ್ಲಿ 47 ಮಿ.ಮೀ., ಕೊಡ್ಲಿಪೇಟೆ 48 ಹಾಗೂ ಶಾಂತಳ್ಳಿ ವ್ಯಾಪ್ತಿಯಲ್ಲಿ 34 ಮಿ.ಮೀ. ಮಳೆಯಾಗಿದೆ. ಪೊನ್ನಂಪೇಟೆ ತಾಲೂಕಿನ ಶ್ರೀಮಂಗಲಕ್ಕೆ 6.8 ಮಿ.ಮೀ., ಪೊನ್ನಂಪೇಟೆ ವ್ಯಾಪ್ತಿಯಲ್ಲಿ 6 ಮಿ.ಮೀ. ಹಾಗೂ ವಿರಾಜಪೇಟೆ ತಾಲೂಕಿನ ಅಮ್ಮತ್ತಿ ವ್ಯಾಪ್ತಿಯಲ್ಲಿ 9 ಮಿ.ಮೀ. ಮಳೆಯಾಗಿದೆ. ಜಿಲ್ಲೆಯಲ್ಲಿ ಮೇ 23ರವರೆಗೂ ವಿವಿಧ ಭಾಗಗಳಲ್ಲಿ ಮಳೆ ಮುಂದುವರೆಯಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಆರೆಂಜ್ ಅಲರ್ಟ್: ಕೊಡಗಿನ ವಿವಿಧೆಡೆ ಮಳೆ ಮುಂದುವರೆದಿರುವ ಕಾರಣ ಜಿಲ್ಲೆಯಾದ್ಯಂತ ಮೇ 23ರವರೆಗೆ 'ಆರೆಂಜ್ ಅಲರ್ಟ್' ಘೋಷಣೆ ಮಾಡಲಾಗಿದೆ. ಈ ಮುನ್ಸೂಚನೆ ಮೇ 23ರ ಬೆಳಗ್ಗೆ 8.30ರ ವರೆಗೆ ಜಾರಿಯಲ್ಲಿರಲಿದ್ದು, ಜಿಲ್ಲೆಯಲ್ಲಿ ಗುಡುಗು, ಮಿಂಚಿನ ಸಹಿತ ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಈ ಅವಧಿಯಲ್ಲಿ 115.6 ಮಿ.ಮೀ.ನಿಂದ 204.4 ಮಿ.ಮೀ.ವರೆಗೆ ಮಳೆ ಸುರಿಯಲಿದ್ದು, ಗಾಳಿಯ ವೇಗ ಗಂಟೆಗೆ 40 ರಿಂದ 50 ಕಿ.ಮೀ. ಇರಲಿದೆ. ಸಾರ್ವಜನಿಕರು ಜಾಗೃತರಾಗಿರುವಂತೆ ಹವಾಮಾನ ಇಲಾಖೆ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–6.15 ಗೀತಾರಾಧನ, 6.35. / 6.10 ವಿಶ್ವ ವಿಖ್ಯಾತ ವಿಜ್ಞಾನಿಗಳು ಬಾನುಲಿ ಸರಣಿ, ಲೇಖನ–ಶ್ರೀನಿವಾಸ ಪ್ರಸಾದ್ ಪ್ರಸ್ತುತಿ–ಎಸ್.ಲಕ್ಷ್ಮೀನಾರಾಯಣ, 6.40–"ನಾನು ನ.ರತ್ನ" ಬಾನುಲಿ ಸರಣಿ. 6.50–ರೈತರಿಗೆ ಸಲಹೆ, 7.15 ಭಾವಗೀತೆಗಳು– ಕೆ.ಎಸ್.ನಿಸಾರ್ ಅಹಮದ್ ರಚನೆಗಳು, 9.00– ನೆನಪಿನಂಗಳ (ಧ್ವನಿ ಭಂಡಾರದಿಂದ), 10.00 ಶಾಸ್ತ್ರೀಯ ಸಂಗೀತ: ದ್ವಾರಮ್ ವೆಂಕಟ ಸ್ವಾಮಿ ನಾಯ್ಡು ಪಿಟೀಲು ವಾದನ, 12.30–ದೇವರನಾಮ, 12.45–ನಮ್ಮ ಆರೋಗ್ಯ–ಜೀವನ ಶೈಲಿಯ ವ್ಯತ್ಯಯದಿಂದಾಗುವ ಆರೋಗ್ಯ ಸಮಸ್ಯೆಗಳಿಗೆ ಆಯುರ್ವೇದದ ಪರಿಹಾರ' ಕುರಿತು ಮೈಸೂರಿನ ಕಾವೇರಿ ಆಯುರ್ವೇದ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ಪ್ರಾಂಶುಪಾಲರಾದ ಡಾ.ರಾಮಚಂದ್ರ ನೇಸರ್ಗಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ, ಬೇದ್ರೆ ಮಂಜುನಾಥ್. 1.00–ಚಿತ್ರಗೀತೆಗಳು, 1.20 ಭಾವಗೀತೆಗಳು– ರೋಹಿಣಿ ಸುಧಾಮ್, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ 4.00 ಮಹಿಳಾರಂಗ "ಡಾಕ್ಟರ್ ಸಮಯ" ಮೈಗ್ರೇನ್ ಅಂದರೆ ಅರೆತಲೆನೋವು ಇದಕ್ಕೆ ಕಾರಣ ಹಾಗೂ ಚಿಕಿತ್ಸೆ ಭಾಗವಹಿ ಸುವ ವೈದ್ಯರು ಆಯುರ್ವೇದ ತಜ್ಞೆ ಡಾ.ಚೈತ್ರ ಪ್ರಸ್ತುತಿ: ಕೆ.ಬಿ.ಮೀನಾ, 5.45 –ನಾನು ನ.ರತ್ನ ಬಾನುಲಿ ಸರಣಿ ಪರಿಕಲ್ಪನೆ: ಅಬ್ದುಲ್ ರಶೀದ್ 6.55 ಕೃಷಿರಂಗ: ಹಣ್ಣು ಹೊನ್ನು ತೋಟಗಾರಿಕಾ ಬೆಳೆಗಳ ಸಮಗ್ರ ಬೇಸಾಯ ವಿಧಾನ ಕುರಿತ ಬಾನುಲಿ ಸರಣಿ ಬಾಳೆ ಉತ್ಪಾದನಾ ತಾಂತ್ರಿಕತೆಗಳನ್ನು ಕುರಿತು ಸಂವಾದ. ಭಾಗ ವಹಿಸುತ್ತಾರೆ: ತೋಟಗಾರಿಕಾ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ.ಜಿ.ಎಸ್.ಕೆ. ಸ್ವಾಮಿ ಹಾಗೂ ಸಹಾಯಕ ಪ್ರಾಧ್ಯಾಪಕ ಡಾ.ಜಿ.ಕೆ.ಸುದರ್ಶನ್ ಸಂದರ್ಶಕರು: ಎನ್.ಕೇಶವಮೂರ್ತಿ 8.30 ಹಿಂದಿ ಚಿತ್ರಗೀತೆಗಳು 10.30 ಸವಿನೆನಪು

ಇಂದಿನ ಪಂಚಾಂಗ

20.05.2024 ಸೋಮವಾರ, ಮಳೆ ನಕ್ಷತ್ರ: ಕೃತ್ತಿಕ 11.05.2024ರಿಂದ 24.05.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ,
ಶುಕ್ಲ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಚಿತ್ತ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ರೇಣುಕಾದೇವಿ ಕರಗ ದೇವಸ್ಥಾನ ಟ್ರಸ್ಟ್, ಇಟ್ಟಿಗೆಗೂಡು:** ಮೈಸೂರು ಕರಗ ಶತಮಾನೋತ್ಸವ, ಮುಂಜಾನೆ 5 ಗಂಟೆಗೆ, ಕರಗ ವಿಸರ್ಜನೆ, ಸ್ಥಳ: ಪಶ್ಚಿಮ ವಾಹಿನಿ
- **ಶ್ರೀಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್:** ಬ್ರಹ್ಮ ರಥೋತ್ಸವ, ಗರುಡೋತ್ಸವ, ಸುದರ್ಶನ ಹೋಮ, ರಥೋತ್ಸವ, ಬೆಳಗ್ಗೆ 9 ಗಂಟೆಗೆ ಅವಭೃತ ಸ್ನಾನ (ಚಕ್ರಸ್ನಾನ), ಅಮೃತ ಕಳಶಾಭಿಷೇಕ, ಸಂಜೆ 6.30ಕ್ಕೆ ವಿದ್ವಾನ್ ಎಂ.ಜಿ.ರಂಗನಾಥ್–ವೃಂದದವರಿಂದ ಸಂಗೀತ ಕಾರ್ಯಕ್ರಮ, ಸ್ಥಳ: ಟ್ರಸ್ಟ್ ಆವರಣ, ಗೋಕುಲಂ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಮಕ್ಕಳ ಕಣ್ಣಿನ ದೃಷ್ಟಿ ಸಮಸ್ಯೆಗೆ ವಿಶೇಷ ಬೇಸಿಗೆ ಆರೋಗ್ಯ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9ರಿಂದ.
- **ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಮಹಿಳಾ ಕಾಲೇಜು (ಸ್ವಾಯತ್ತ):** ಸಾಂಸ್ಕೃತಿಕ, ಸಾಹಿತ್ಯಕ ಮತ್ತು ಕ್ರೀಡಾ ವೇದಿಕೆಗಳ ಸಮಾರೋಪ, ದಿವ್ಯ ಆಶೀರ್ವಾದ: ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಅಧ್ಯಕ್ಷತೆ: ಜೆಎಸ್‌ಎಸ್ ಮಹಾವಿದ್ಯಾಪೀಠ, ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಬಿ.ನಿರಂಜನ ಮೂರ್ತಿ, ಸಮಾರೋಪ ಭಾಷಣ: ಕಿರುತೆರೆ ಕಲಾವಿದರಾದ ಶ್ರೀಮತಿ ಅಕ್ಷತ ಗಣೇಶ್, ಮುಖ್ಯ ಅತಿಥಿ: ರಾಷ್ಟ್ರೀಯ ಬಾಲ್ ಬ್ಯಾಡ್ಮಿಂಟನ್ ಆಟಗಾರ ಸುದರ್ಶನ, ಸ್ಥಳ: ಕಾಲೇಜು ಆವರಣ, ಸರಸ್ವತಿಪುರಂ, ಬೆಳಗ್ಗೆ 11 ಗಂಟೆಗೆ.
- **ಬೆಂಗಳೂರು ಮಹಾಬೋಧಿ ಸೊಸೈಟಿ, ಮೈಸೂರು ವಿವಿ ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣಾ ಕೇಂದ್ರ:** ವೈಶಾಖ ಬುದ್ಧ ಪೂರ್ಣಿಮ–2568ನೇ ಪವಿತ್ರ ಬುದ್ಧ ಜಯಂತಿ ಆಚರಣೆ–2024 ಬೋಧಿ ಸಪ್ತಾಹ–ಜ್ಞಾನೋದಯದ ವಾರದ ಅಂಗವಾಗಿ ವೈಶಾಖ ಬುದ್ಧ ಪೂರ್ಣಿಮೆಯ ಆಚರಣೆ ಮತ್ತು ಅದರ ಮಹತ್ವ ಕುರಿತು ಉಪನ್ಯಾಸ, ಗೌರವಾನ್ವಿತ ಭಿಕ್ಷು ಆನಂದ (ಬೆಂಗಳೂರು ಮಹಾಬೋಧಿ ಸೊಸೈಟಿ ಪ್ರಧಾನ ಕಾರ್ಯದರ್ಶಿ) ಅವರಿಂದ. ಅಧ್ಯಕ್ಷತೆ: ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಜೆ.ಸೋಮಶೇಖರ್, ಸ್ಥಳ: ಡಾ.ಬಿಟ್ರಿಕ್ಸ್ ಡಿ ಸೋಜ ಸಭಾಂಗಣ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ
- **ಅನ್ವೇಷಣಾ ಸೇವಾ ಟ್ರಸ್ಟ್ :** ಪ್ರಾತಃ ಸ್ಮರಣೀಯರಾದ ಮಹಾರಾಣಿ ದೇವರಾಜಮ್ಮಣ್ಣಿ ಅವರ ಅಂಚೆ ಕಾರ್ಡ್ ಲೋಕಾರ್ಪಣೆ ಸಮಾರಂಭ, ಉದ್ಘಾಟನೆ: ಕುವೆಂಪು ಭಾಷಾ ಭಾರತಿ ಮಾಜಿ ಅಧ್ಯಕ್ಷ ಡಾ.ಪ್ರಧಾನ ಗುರುದತ್, ಅಂಚೆ ಕಾರ್ಡ್ ಲೋಕಾರ್ಪಣೆ: ಮೈಸೂರು ಅಂಚೆ ವಿಭಾಗದ ಸೀನಿಯರ್ ಸೂಪರಿಡೆಂಟೆಂಡ್ ಆಫ್ ಪೋಸ್ಟ್ ಆಫೀಸಸ್ ಡಾ.ಏಂಜಲ್‌ರಾಜ್, ಅಧ್ಯಕ್ಷತೆ: ಅನ್ವೇಷಣಾ ಸೇವಾ ಟ್ರಸ್ಟ್ ಅಧ್ಯಕ್ಷ ಡಾ.ಎಂ.ಜಿ.ಆರ್.ಅರಸ್, ಸ್ಥಳ: ಮೈಸೂರು ಪತ್ರಕರ್ತರ ಸಂಘದ ಸಭಾಂಗಣ, ಮಧ್ಯಾಹ್ನ 12 ಗಂಟೆಗೆ.

ಜಡಿ ಮಳೆಯ ನಡುವೆ ಪೈಲ್ವಾನರ ಸೆಣಸಾಟ; ನೆರೆದಿದ್ದ ಕುಸ್ತಿ ಪ್ರಿಯರಿಗೆ ರೋಚಕ ಅನುಭವ

ಮೈಸೂರು ಕರಗ ಮಹೋತ್ಸವದ ಅಂಗವಾಗಿ 55 ಜೊತೆ ನಾಡಕುಸ್ತಿ ಪಂದ್ಯಾವಳಿ



ಮೈಸೂರು ಕರಗ ಶತಮಾನೋತ್ಸವ ಅಂಗವಾಗಿ ನಡೆದ ನಾಡಕುಸ್ತಿ ಪಂದ್ಯಾವಳಿಯಲ್ಲಿ ಪೈಲ್ವಾನರು ಸೆಣಸಾಡುತ್ತಿರುವುದು.



ಬೆಳ್ಳಿಗದೆ ಜಯಿಸಿದ ನಂಜನಗೂಡು ಪೈ.ಸೂರ್ಯಕಾಂತ್

ಮಾರ್ಫಿಟ್ ರಣಾಂಗಣ...!
ನಾಡಕುಸ್ತಿ ಪಂದ್ಯಾವಳಿಯ ಕಡೆಯಲ್ಲಿ ಮಾರ್ಫಿಟ್ ಕುಸ್ತಿ ಪಂದ್ಯಗಳು ನಡೆದವು. ಹರಿಯಾಣ ಪೈ.ಮಂಜಿತ್ ಹಾಗೂ ಮಹಾರಾಷ್ಟ್ರ ಪೈ.ಮಹೇಂದ್ರ ಗಾಯಕ್‌ವಾಡ್, ದಾವಣಗೆರೆ ಪೈ.ಕಾರ್ತಿಕ್ ಕಾಟೆ ಹಾಗೂ ಹರಿಯಾಣ ಪೈ.ಸಮಿತ್ ಗುಳಿಯ ನಡುವೆ ಮಾರ್ಫಿಟ್ ಕುಸ್ತಿ ನಡೆಯಿತು. ಹಾಗೆಯೇ ದೆಹಲಿ ಪೈ.ವಿಕ್ಕಿ ಹಾಗೂ ಪಂಜಾಬ್ ಪೈ. ಶಂಭು ಸಿಂಗ್ ನಡುವೆ 30 ನಿಮಿಷಗಳ ಅವಧಿಯ ರೋಚಕ ಪಂದ್ಯ ನಡೆಯಿತು.

ಮೈಸೂರು, ಮೇ 19(ಎಂಕೆ)– ಜಡಿ ಮಳೆಯ ನಡುವೆ ರೋಮಾಂಚನ ಉಂಟುಮಾಡಿದ ನಾಡಕುಸ್ತಿ ಕಾಳಗ... ತೊಡೆ ತಟ್ಟಿ ಅಖಾಡದಲ್ಲಿ ಗೆಲುವಿಗೆ ಸೆಣಸಾಡಿದ ಪೈಲ್ವಾನರು...!

ಮೈಸೂರಿನ ಇಟ್ಟಿಗೆಗೂಡು ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮನವರ 100ನೇ ವರ್ಷದ ಮೈಸೂರು ಕರಗ ಶತಮಾನೋತ್ಸವ ಅಂಗವಾಗಿ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ 55 ಜೊತೆ ನಾಡಕುಸ್ತಿ ಪಂದ್ಯಾವಳಿಯಲ್ಲಿ ದೂಳೆಬ್ಬಿಸಿದ ಪೈಲ್ವಾನರು ಜಡಿ ಮಳೆಯ ನಡುವೆ ಪಟ್ಟು ಹಾಕಿ ಎದುರಾಳಿಯ ಮಣ್ಣು ಮುಕ್ಕಿಸಿದರು. ಮಳೆಯಿಂದಾಗಿ ತಡವಾಗಿ ಆರಂಭವಾದ ಕುಸ್ತಿ ಪಂದ್ಯಾವಳಿಯಲ್ಲಿ ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮ ದೇವಿಯ ಕರಗ ಉತ್ಸವದ ದರ್ಶನ ಪಡೆದು, ಅಖಾಡಕ್ಕೆ ಪೂಜೆ ಸಲ್ಲಿಸಿ, ನಿಂಬೆಹಣ್ಣು ತುಳಿದು ಅಖಾಡದಲ್ಲಿ ಬಲಾಬಲ ಪ್ರದರ್ಶನ ನೀಡಿದ ಪೈಲ್ವಾನರು ಭುಜಬಲ ಪರಾಕ್ರಮ ಮೆರೆದರು. ಮೈಸೂರಿನ ಪಕೀರ್ ಅಹಮದ್ ಗರಡಿಯ ಪೈ.ಮೈಕಲ್ ರಾಜ್ ವಿರುದ್ಧ ರಾಮನಗರದ ಪೈ.ಪವನ್, ಕನಕಪುರ ಪೈ.ಸ್ಮಿತಾ ವಿರುದ್ಧ ರಮ್ಮನಹಳ್ಳಿ ಪೈ.ಸಿಂಚನ, ಹಾರೋಹಳ್ಳಿ ಪೈ.ದರ್ಶನ್ ವಿರುದ್ಧ ರಮ್ಮನಹಳ್ಳಿ ಪೈ.ಕೃಷ್ಣ ಗೋಪಾಲ್, ಮೈಸೂರು ಪೈ.ಶಿವರಾಜ್ ವಿರುದ್ಧ ಕ್ಯಾತಮಾರನಹಳ್ಳಿ ಪೈ.ಸಂಜಯ್, ಪಡುವಾರಹಳ್ಳಿ ಪೈ.ರೋಹಿತ್ ವಿರುದ್ಧ ಯರಗನಹಳ್ಳಿ ಪೈ.ಹರ್ಷಿತ್ ಹಾಗೂ ವೀರನಗೆರೆ ಪೈ.ಭುವನ್ ವಿರುದ್ಧ ಬನ್ನೂರು ಪೈ.ಸಂಜಯ್ ವಿಜಯ ಪತಾಕೆ ಹಾರಿಸಿದರು.

ಬಹುತೇಕ ಸಮ: 55 ಜೊತೆ ನಾಡಕುಸ್ತಿ ಪಂದ್ಯಾವಳಿಯಲ್ಲಿ ಬಹುತೇಕ ಸೆಣಸಾಟ ಸಮಬಲದಲ್ಲಿ ಅಂತ್ಯವಾದವು. ಗೆಲ್ಲುವ ಛಲದೊಂದಿಗೆ ಅಖಾಡದಲ್ಲಿ ಮೆರೆದ ಪೈಲ್ವಾನರು ಪ್ರಬಲ ಪೈಪೋಟಿ ನೀಡಿದರು. 5 ರಿಂದ 15 ನಿಮಿಷದವರೆಗೆ ಸಮಯ ನೀಡಿದ್ದರೂ ಸೋಲೊಪ್ಪಿಕೊಳ್ಳದ ಪೈಲ್ವಾನರು ಸಮಬಲ ಸಾಧಿಸಿದರು. ಪಂದ್ಯದ ಬಳಿಕ ಕುಸ್ತಿಯಲ್ಲಿ ಭಾಗವಹಿಸಿದ ಪೈಲ್ವಾನರಿಗೆ ಗೌರವ ಧನ ನೀಡಿ ಪ್ರೋತ್ಸಾಹಿಸಲಾಯಿತು.

ಬೆಳ್ಳಿಗದೆ ಎತ್ತಿದ ಪೈಲ್ವಾನರು: ಪಾಂಡವಪುರ ಪೈ.ಸಂತೋಷ್ ವಿರುದ್ಧ 15 ನಿಮಿಷಗಳ ಜಿದ್ದಾಜಿದ್ದಿ ಕುಸ್ತಿಯ ಅಂತಿಮ ಹಂತದಲ್ಲಿ ಚಿತ್ ಮಾಡಿದ ನಂಜನಗೂಡು ಪೈ.ಸೂರ್ಯಕಾಂತ್ ಬೆಳ್ಳಿಗದೆ ಜಯಿಸಿದರು. ಅಲ್ಲದೆ ಪೈ.ಸೂರ್ಯಕಾಂತ್‌ಗೆ ಅಹಿಂದ ಜವರಪ್ಪ ಪ್ರಶಸ್ತಿ ನೀಡಿ ಗೌರವಿಸಿದರು.

ಜಮಾಯಿಸಿದ ಕುಸ್ತಿ ಅಭಿಮಾನಿಗಳು: ಮಳೆಯ ನಡುವೆಯೂ ಇಟ್ಟಿಗೆಗೂಡಿನ ನಿವಾಸಿಗಳು, ಕುಸ್ತಿ ಅಭಿಮಾನಿಗಳು ಅಖಾಡದ ಸುತ್ತಲೂ ಜಮಾಯಿಸಿದ್ದರು. ಕುಸ್ತಿ ಅಖಾಡಕ್ಕೆ ಮೇಲ್ಛಾವಣಿ ಇರುವುದರಿಂದ ಪಂದ್ಯಗಳನ್ನು ನಡೆಸಲು ಯಾವುದೇ ತೊಂದರೆಯಾಗಲಿಲ್ಲ. ಹೀಗಾಗಿ, ಹೊರಗಡೆ ಮಳೆ ಸುರಿಯುತ್ತಿದ್ದರೂ ಕುಸ್ತಿ ನಿರಾತಂಕವಾಗಿ ನಡೆಯಿತು. ಕುಳಿತು ವೀಕ್ಷಣೆ ಮಾಡುವ ಸ್ಥಳದಲ್ಲಿ ಅಖಾಡ ಸಮೀಪ ಸುತ್ತುವರಿದ ಕುಸ್ತಿ ಪ್ರಿಯರು, ಮಳೆಯ ನಡುವೆಯೇ ದೇಸಿ ಆಟದ ಸೊಬಗನ್ನು ಕಣ್ತುಂಬಿಕೊಂಡರು. ಕುತೂಹಲ, ಹಣಾಹಣಿಯಿಂದ ಕೂಡಿದ್ದ ಜಟ್ಟಿಗಳ ಸೆಣಸಾಟವು ರೋಚಕತೆ ಹೆಚ್ಚಿಸಿತು. ರಾತ್ರಿ 12 ಗಂಟೆಯವರೆಗೂ ಕುಸ್ತಿ ಪಂದ್ಯಗಳು ನಡೆದವು.

ಶಾಸಕರಾದ ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ, ಬಿಜೆಪಿ ಮುಖಂಡ ಕವೀಶ್‌ಗೌಡ, ಕಾಂಗ್ರೆಸ್ ಮುಖಂಡ ಎಸ್.ಆರ್.ರವಿಕುಮಾರ್ ಸೇರಿದಂತೆ ವಿವಿಧ ಪಕ್ಷದ ಮುಖಂಡರು ಕುಸ್ತಿ ಅಖಾಡಕ್ಕೆ ಭೇಟಿ ನೀಡಿ ಪೈಲ್ವಾನರನ್ನು ಪ್ರೋತ್ಸಾಹಿಸಿದರು. ಮೈಸೂರು ಕರಗ ಕುಸ್ತಿ ಸಮಿತಿಯ ಪೈ.ಮಧು, ಪೈ.ರಾಘವೇಂದ್ರ, ಪೈ.ಮಹೇಶ್, ವಕೀಲ ಗೋಕುಲ್ ಗೋವರ್ಧನ್, ಹರೀಶ್, ಮಹೇಶ್, ಧನ್‌ಪಾಲ್, ಮೋಹನ್, ಸ್ವಾಮಿ, ಶಿವು, ಗೋವಿಂದು, ರಾಜು, ಶಂಕರ್ ಮತ್ತಿತರರು ಉಪಸ್ಥಿತರಿದ್ದರು.



ಇಟ್ಟಿಗೆಗೂಡಿನಲ್ಲಿ ಕರಗ ಉತ್ಸವ ಸಂಭ್ರಮ: ಶ್ರದ್ಧಾಭಕ್ತಿಯಿಂದ ಪೂಜೆ ಸಲ್ಲಿಸಿದ ಅಪಾರ ಜನ

ಮೈಸೂರು, ಮೇ 19(ಎಂಕೆ)– ಮೈಸೂರಿನ ಇಟ್ಟಿಗೆಗೂಡು ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮನವರ 100ನೇ ವರ್ಷದ ಮೈಸೂರು ಕರಗ ಶತಮಾನೋತ್ಸವ ಶ್ರದ್ಧಾಭಕ್ತಿಯೊಂದಿಗೆ ಸಂಪನ್ನಗೊಂಡ ಬಳಿಕವೂ ಶಕ್ತಿ ದೇವಿಯರ ಆರಾಧನೆ ನಡೆಯಿತು. ಭಾನುವಾರ ಬೆಳಗ್ಗೆಯೇ ಕರಗ ಉತ್ಸವ ಸಂಪನ್ನವಾಗುತ್ತಿದ್ದಂತೆ ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮ ದೇವಿಗೆ ವಿಶೇಷ ಅಲಂಕಾರ ಮಾಡಿ ಪೂಜಾ ಕೈಂಕರ್ಯಗಳನ್ನು ಭಕ್ತಿ–ಭಾವದಿಂದ ನೆರವೇರಿಸಲಾಯಿತು. ಮನೆ ಮನೆಗೆ ಉತ್ಸವ ತೆರಳಿದಂತೆ ಅರಿಶಿನ ನೀರಿನ ಓಕುಳಿಯಾಟ ಆಚರಿಸಲಾಯಿತು.

ಮಧ್ಯಾಹ್ನ 12 ಗಂಟೆಗೆ ಅಂಬಲಿ ಪೂಜೆ, ಸಂಜೆ 4 ಗಂಟೆಯಿಂದ ದೇವಿಯರಿಗೆ ತಂಬಿಟ್ಟು ಆರತಿ ನಡೆಯಿತು. ರಾತ್ರಿ ವೇಳೆ ಮಹಾ ಮಂಗಳಾರತಿಯೊಂದಿಗೆ ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು. ಮೈಸೂರು ಕರಗ ಉತ್ಸವಕ್ಕೆ ನಾನಾ ಕಡೆಗಳಿಂದ ಇಟ್ಟಿಗೆಗೂಡಿಗೆ ಬಂದಿರುವ ಭಕ್ತರ ದಂಡು ಭಾನುವಾರ ದೇವಸ್ಥಾನದ ಆವರಣದಲ್ಲಿ ನೆರೆದಿತ್ತು. ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಜಡಿ ಮಳೆಯ ನಡುವೆಯೂ ಪೂಜೆ ಸಲ್ಲಿಸಿ, ಪ್ರಾರ್ಥಿಸಿದರು. ರಾತ್ರಿ ವೇಳೆ ಇಟ್ಟಿಗೆಗೂಡು ಗ್ರಾಮದ ರಸ್ತೆಗಳು ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸುತ್ತಿದ್ದು, ಹಬ್ಬದ ವಾತಾವರಣ ಮನೆ ಮಾಡಿತ್ತು.

ಮಹನೀಯರ ಆದರ್ಶಗಳ ಯುವ ಸಮೂಹ ಅಳವಡಿಸಿಕೊಳ್ಳುವ ಅನಿವಾರ್ಯತೆ ಇದೆ: ಜನ್ನಿ



ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಬಸವಣ್ಣ ಜಯಂತಿ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಪ್ರತಿಭಾವಂತರನ್ನು ಸನ್ಮಾನಿಸಲಾಯಿತು.

ಮೈಸೂರು, ಮೇ 19(ಎಸ್‌ಪಿಎನ್)– ಮಾನವೀಯ ಮೌಲ್ಯಗಳನ್ನು ನೆನೆಯುವ ಮಹನೀಯರ ತತ್ವಾದರ್ಶಗಳನ್ನು ಇಂದಿನ ಯುವ ಪೀಳಿಗೆ ಅಳವಡಿಸಿಕೊಳ್ಳುವುದು ಅತ್ಯವಶ್ಯಕ ಎಂದು ರಂಗಾಯಣ ಮಾಜಿ ನಿರ್ದೇಶಕ ಹೆಚ್.ಜನಾರ್ಧನ್ (ಜನ್ನಿ) ಸಲಹೆ ನೀಡಿದರು.

ಮೈಸೂರು ಪುರಭವನದಲ್ಲಿ ಜನಚೈತನ್ಯ ಫೌಂಡೇಶನ್ ವತಿಯಿಂದ ಡಾ.ಬಿ.ಆರ್. ಅಂಬೇಡ್ಕರ್ ಮತ್ತು ಬಸವಣ್ಣ ಜಯಂತಿ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಅಂಬೇಡ್ಕರ್, ಬಸವಣ್ಣ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಮಾತನಾಡಿದ ಅವರು, ಬುದ್ಧ, ಬಸವ, ಅಂಬೇಡ್ಕರ್ ಅವರನ್ನು ನೆನೆಯುವ ಕೆಲಸ ಶ್ಲಾಘನೀಯ. ಅಲ್ಲದೆ, ಇಂದಿನ ಯುವ ಸಮೂಹ ಮಹನೀಯರ ತತ್ವಗಳನ್ನು ಅರ್ಥ ಮಾಡಿಕೊಳ್ಳಬೇಕಿದೆ ಎಂದು ತಿಳಿಸಿದರು.

ನಂತರ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ತಳಸಮುದಾಯದ ಉತ್ತೇಜನಕ್ಕೆ ಪ್ರೋತ್ಸಾಹಿಸುವ ಕಾರ್ಯಕ್ರಮಗಳ ರೂಪಿಸುವುದು ಪ್ರಸ್ತುತ ಅವಶ್ಯ. ಅಂಬೇಡ್ಕರ್ ಪಾಲಿನ ಕಷ್ಟದ ದಿನಗಳನ್ನು ಇಂದಿನ ವಿದ್ಯಾರ್ಥಿಗಳು ಅರಿಯುತ್ತಿಲ್ಲ. ಈ ನಿಟ್ಟಿನಲ್ಲಿ ತಳ ಸಮುದಾಯದ ಯುವ ಸಮೂಹ ಅಂಬೇಡ್ಕರ್, ಬಸವಣ್ಣನವರ ಆದರ್ಶಗಳನ್ನು ಮೈಗೂಡಿಸಿಕೊಂಡು ಜೀವನ ಕಟ್ಟಿಕೊಳ್ಳುವಂತೆ ಸಲಹೆ ನೀಡಿದರಲ್ಲದೆ, ಒಳ್ಳೆಯ ಆಲೋಚನೆಗಳು ನಮ್ಮಲ್ಲಿ ಮೂಡಿದಾಗ ಮಾತ್ರ ನಮ್ಮನ್ನು ಎತ್ತರದ ಸ್ಥಾನಕ್ಕೆ ಕೊಂಡೊಯ್ಯುತ್ತವೆ ಎಂದು ತಿಳಿಸಿದರು.


ಈ ವೇಳೆ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ವೇದಿಕೆಯಲ್ಲಿ ಚಿಂತಕ ಪ್ರೊ.ಗೋವಿಂದಯ್ಯ, ಮಾಜಿ ಮೇಯರ್ ನಾರಾಯಣ್, ಫೌಂಡೇಶನ್ ಅಧ್ಯಕ್ಷ ಲಕ್ಷ್ಮಣ್ ಮತ್ತಿತರರು ಉಪಸ್ಥಿತರಿದ್ದರು.

ವೇದಿಕೆ ಕಾರ್ಯಕ್ರಮದ ನಂತರ ಅಂಬೇಡ್ಕರ್ ಹಾಗೂ ಬಸವಣ್ಣ ಅವರನ್ನು ನೆನೆಯುವ ಗೀತೆಗಳಾದ ನಿನಗಿದೋ ನಮನ ಜೈ ಭೀಮ, ಹೇ ಭುಮಿ ನೀ ಧನ್ಯಳಾದೆ, ಅಂಬೇಡ್ಕರರ ಜೀವನ ಕಥೆಯ ಭಾರತೀಯರೆ, ಓ ಭರತ ಸೂರ್ಯ ನಿನಗಿದೋ ವಂದನೆ, ಕಂದಾ ಕಂದಾ ಅಂಬೇಡ್ಕರರಂತಾಗು, ಬಹುಜನ ನಾಯಕ ಜೈಭೀಮ, ಜಯಹೇ ಭಾರತ ಭಾಗ್ಯವಿಧಾತ, ಭೀಮನಂತಾಗುವ ಆಸೆ, ನಾಡ ನಡುವಿನಿಂದ ಸಿಡಿದ ನೋವಿನ ಕೂಗೆ, ಕಡಲೊಳಗಿನ ಮುತ್ತಿನಂತೆ, ಗುಡಿಸಲು ಜ್ಯೋತಿ ಊರೂರ ಸುತ್ತಿ, ಎಲ್ಲೋ ಹುಡುಕಿದೆ ಇಲ್ಲದ ದೇವರ, ಮಾನವರಾಗೋಣ ನಾವು ಮಾನವರಾಗೋಣ, ಕಟ್ಟುತ್ತೇವ ನಾವು ಕಟ್ಟುತ್ತೇವ, ಅಂಬೇಡ್ಕರ್ ಹೇಳಿದ ಮಾತು, ಕಾಣದ ಕಡಲಿಗೆ ಹಂಬಲಿಸಿದೆ ಮನ, ನಿನ್ನ ಮೇಲೆ ಏನೋ ಮೋಹ ತಿಳಿಯದಾಗಿದೆ, ರಾಷ್ಟ್ರ ಸಂವಿಧಾನಕೆ ನೀನೆ ಸ್ಫೂರ್ತಿಯು, ಒಳಿತು ಮಾಡು ಮನುಸಾ ನೀನ್ ಇರೋದು ಮೂರು ದಿವಸ, ಜೈ ಭೀಮ ನೀವು ಭಾರತೀಯ ಎದೆಯಲಿ, ಉಳ್ಳವರು ಶಿವಾಲಯ ಮಾಡುವರು, ಕ್ರಾಂತಿಯೋಗಿ ಬಸವಣ್ಣ, ಬಂದನು ಬಸವಣ್ಣ ಈ ಧರೆಗೆ, ಮಹಾಶರಣ ಹರಳಯ್ಯ, ಬುದ್ಧನ ಬೆಳಕಿನಲಿ, ಮರೆಯೋದುಂಟೆ ಮೈಸೂರು ದೊರೆಯ, ಬುದ್ಧಂ ಶರಣಂ ಗಚ್ಛಾಮಿ, ಓ ನನ್ನ ಚೇತನ, ಝಣಝಣ ಕಾಂಚಾಣ, ದೇವರು ನಾನಲ್ಲ, ಸಮ್ಮ ಸಂಬುದ್ಧ, ಜ್ಞಾನ ಶೀಲ ಸ್ವಾಭಿಮಾನಿ, ಕೂಡಲ ಸಂಗಮನ ಸಾಕ್ಷಿಯಾದೆ, ಅಮ್ಮ ನಿನ್ನ ಹೇಗೆ ಮರೆಯಲಿ, ಏನೋ ಮೋಹ ತಿಳಿಯದಾಗಿದೆ ಗೀತೆಗಳನ್ನು ಗಾಯಕರಾದ ಆರ್.ಲಕ್ಷ್ಮಣ್, ಜಾಯ್ಸ್ ಪೀಟರ್, ಡಾ.ಎಸ್.ಆರ್.ತಿರುಮಲೇಶ್, ಎನ್.ಲೋಕೇಶ್, ಬಿ.ಸುರಭಿ, ಚಿತ್ತಾರ ರಮೇಶ್, ರಾಜೇಶ್ ಕಲ್ರೋ, ಶಿವಕುಮಾರ್ ಅವರು ಹಾಡುಗಳನ್ನು ಹಾಡಿ ಪ್ರೇಕ್ಷಕರನ್ನು ರಂಜಿಸಿದರು.

ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರದ ರಜತೋತ್ಸವ ಉದ್ಘಾಟನೆ

ಲೋಕ ಕಲ್ಯಾಣಾರ್ಥ ಶ್ರಮಿಸುತ್ತಿರುವ ಶ್ರೀ ಗಣಪತಿ ಸಚ್ಚಿದಾನಂದ ಶ್ರೀಗಳು

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ



ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರದಲ್ಲಿ ಭಾನುವಾರ ಕ್ಷೇತ್ರದ ರಜತೋತ್ಸವವನ್ನು ಸುತ್ತೂರು ಶ್ರೀಗಳು ಉದ್ಘಾಟಿಸಿದರು. ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಸೇರಿದಂತೆ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಮೇ 19(ಪಿಎಂ)– ಜನತೆಯ ಕ್ಷೇಮ ಮತ್ತು ಲೋಕ ಕಲ್ಯಾಣಕ್ಕಾಗಿ ಅವಧೂತ ದತ್ತಪೀಠದ ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಶ್ರಮಿಸುತ್ತಿದ್ದಾರೆ ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಮೈಸೂರಿನ ಊಟಿ ರಸ್ತೆಯ ದತ್ತನಗರದ ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕ್ಷೇತ್ರದ 25ನೇ ವಾರ್ಷಿಕೋತ್ಸವ (ರಜತೋತ್ಸವ) ಉದ್ಘಾಟಿಸಿ ಅವರು ಮಾತನಾಡಿದರು.

ಎಷ್ಟೇ ಕಷ್ಟ ಬಂದರೂ ದೇವರಲ್ಲಿ ನಂಬಿಕೆ–ವಿಶ್ವಾಸವಿಟ್ಟರೆ ಎಲ್ಲವೂ ಪರಿಹಾರವಾಗಲಿದೆ ಹಾಗಾಗಿಯೇ ದೇವರಲ್ಲಿ ನಂಬಿಕೆ ಮತ್ತು ವಿಶ್ವಾಸವನ್ನು ಜನತೆಯಲ್ಲಿ ಬೆಳೆಸಲು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಅವಿರತ ಶ್ರಮಿಸುತ್ತಿದ್ದಾರೆ. ಅವರು ಎಲ್ಲೇ ಹೋದರೂ ಜನತೆ ತಮ್ಮ ಸಂಕಷ್ಟ ನಿವಾರಣೆಗಾಗಿ ಅವರ ಮೊರೆ ಹೋಗುತ್ತಾರೆ. ಅಂದರೆ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ಸನಿಹಕ್ಕೆ ಬಂದರೆ ತಮ್ಮ ಕಷ್ಟಗಳಿಗೆ ಪರಿಹಾರ ದೊರೆಯುತ್ತದೆ ಎಂಬ ವಿಶ್ವಾಸವನ್ನು ಜನ ಸಾಮಾನ್ಯರ ಮನಸ್ಸಿನಲ್ಲಿ ಅವರು ಮೂಡಿಸಿದ್ದಾರೆ ಎಂದರು. ಮನುಷ್ಯನಿಗೆ ಭಗವಂತನಲ್ಲಿ ನಂಬಿಕೆ ಮತ್ತು ವಿಶ್ವಾಸ ಇರುವುದು ಮುಖ್ಯ. ನಂಬಿಕೆ ಇರುವೆಡೆ ಸಂಶಯ ಬರುವುದಿಲ್ಲ. ಸಂಶಯ ಇರುವೆಡೆ ನಂಬಿಕೆ ಬರುವುದಿಲ್ಲ. ದೇವರಲ್ಲಿ ನಂಬಿಕೆ ಸ್ಥಿರವಾಗಿ ಮನಸ್ಸಿನಲ್ಲಿ ಇದ್ದಾಗ ಎಲ್ಲವೂ ಒಳ್ಳೆಯದಾಗಲಿದೆ. ನಮ್ಮನ್ನು ಪರೀಕ್ಷೆ ಮಾಡಲು ದೇವರು ಕಷ್ಟ ಕಾರ್ಪಣ್ಯ ಕೊಡುತ್ತಾನೆ. ಆದರೆ ದೇವರಲ್ಲಿ ನಂಬಿಕೆ ಇಟ್ಟು ಏನಾದರೂ ಸರಿ ಎದುರಿಸುತ್ತೇನೆಂದು ನಿಂತರೇ ದೇವರು ಕೈಹಿಡಿಯುತ್ತಾನೆ. ಎಷ್ಟೋ ಸಂದರ್ಭದಲ್ಲಿ ಕಷ್ಟ ಬರುವುದು ನಮ್ಮ ಒಳ್ಳೆಯದಕ್ಕೇ ಆಗಿರುತ್ತದೆ ಎಂದು ಹೇಳಿದರು.

ಇಲ್ಲಿ ಗಣಪತಿ ಸಚ್ಚಿದಾನಂದ ಆಶ್ರಮ ಪ್ರಾರಂಭವಾಗಿ ಇನ್ನು ಎರಡು ವರ್ಷಕ್ಕೆ 50 ವರ್ಷಗಳು ಪೂರ್ಣಗೊಳ್ಳಲಿದ್ದು, ಆಗ ಸುವರ್ಣ ಮಹೋತ್ಸವದ ಸಂಭ್ರಮ ಮನೆ ಮಾಡಲಿದೆ. ಶ್ರೀ ಗಣಪತಿ ಸಚ್ಚಿದಾನಂದ ಶ್ರೀಗಳು 100ನೇ ವರ್ಷದ ಜನ್ಮದಿನ ಆಚರಿಸಿಕೊಳ್ಳುವಂತಾಗಲಿ ಎಂದು ಹಾರೈಸಿದರು. ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಮಾತನಾಡಿ, ಸಹಸ್ರಾಮ ಹಾಗೂ ಸುಪ್ರಭಾತಗಳನ್ನು ಕೇಳುವ ಅಭ್ಯಾಸ ಬೆಳೆಸಿಕೊಳ್ಳಬೇಕೆಂದು ಭಕ್ತರಿಗೆ ತಿಳಿಸಿದರು. ವಿಷ್ಣು ಸಹಸ್ರನಾಮವಾಗಲೀ, ಶಿವ ಸಹಸ್ರನಾಮವಾಗಲೀ ಕೇಳುತ್ತಲೇ ನಮಗೂ ಹಾಡಲು ತಂತಾನೆ ಬರುತ್ತವೆ. ಅವುಗಳಿಗೆ ಅಂತಹ ಶಕ್ತಿ ಇದೆ. ಹಾಗಾಗಿ ಕೇಳುವ ಅಭ್ಯಾಸವನ್ನು ನಾವು ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಭಗವಂತನ ಶಕ್ತಿ ಇಲ್ಲದೇ ನಾವು ಏನೂ ಮಾಡಲು ಸಾಧ್ಯವಿಲ್ಲ. ನಮ್ಮಲ್ಲಿ ಆತ್ಮಶಕ್ತಿ ಹಾಗೂ ಇಚ್ಛಾಶಕ್ತಿ ಮೂಡಲು ಭಗವಂತನ ಆಶೀರ್ವಾದ ಬೇಕಾಗುತ್ತದೆ. ದೇವರು ಕಾಣುವುದಿಲ್ಲ. ಒಂದು ವೇಳೆ ಕಂಡರೆ ದೇವರಾಗಿರಲು ಸಾಧ್ಯವಿಲ್ಲ. ದೇವರು ಕಾಣದಿದ್ದರೂ ದೈವದ ಶಕ್ತಿ ನಮ್ಮ ಅನುಭವಕ್ಕೆ ಬರಲು ಸಾಧ್ಯವಿದೆ ಎಂದರು.

ಶ್ರೀ ದತ್ತ ವೆಂಕಟೇಶ್ವರ ದೇವಸ್ಥಾನಕ್ಕೆ 25 ವರ್ಷಗಳಾಗಿವೆ ಎನ್ನುತ್ತೇವೆ. ಆದರೆ ನಿಜಕ್ಕೂ 25 ವರ್ಷಗಳಾಗಿರುವುದು ದೇವಸ್ಥಾನಕ್ಕಲ್ಲ, ನಾವು 25 ವರ್ಷಗಳನ್ನು ಕಳೆದಿದ್ದೇವೆ ಎಂದು ಸೂಚ್ಯವಾಗಿ ಹೇಳಿದ ಶ್ರೀಗಳು, ನಾವು ವೇಗವಾಗಿ ಹೋಗುತ್ತಿದ್ದೇವೆ. ವಯಸ್ಸು ಮುಂದೋಗುತ್ತಿದ್ದಂತೆ ಬುದ್ಧಿ ಮತ್ತು ವಿಶ್ವಾಸ ಬೆಳೆಯಬೇಕು. ಜೊತೆಗೆ ದಾನ–ಧರ್ಮದ ಮನೋಭಾವವೂ ಮೂಡಬೇಕು. ಆಧ್ಯಾತ್ಮದ ದೃಷ್ಟಿಯಿಂದ ನಾವು ದೇವಾಲಯಗಳನ್ನು ಪೋಷಿಸಬೇಕು. ಉತ್ಸಾಹದಿಂದ ದೇವಸ್ಥಾನಗಳಲ್ಲಿ ಸೇವೆ ಮಾಡಬೇಕು. ಕಳೆದ 25 ವರ್ಷಗಳಲ್ಲಿ ದತ್ತ ವೆಂಕಟೇಶ್ವರ ದೇವಸ್ಥಾನದ ಚರಿತ್ರೆ ಅವಲೋಕಿಸಿದರೆ ಸಂತೋಷ ಉಂಟಾಗುತ್ತದೆ ಎಂದು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಹರ್ಷ ವ್ಯಕ್ತಪಡಿಸಿದರು.

ಅವಧೂತ ದತ್ತಪೀಠದ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಮಾತನಾಡಿ, ಮೈಸೂರಿನ ಎಲ್ಲಾ ಭಕ್ತರು ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರದಲ್ಲಿ ಯಾವ್ಯಾವ ಸಂದರ್ಭದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತವೆ ಎಂದು ಕಾಯುತ್ತಿರುತ್ತಾರೆ. ಇಲ್ಲಿಗೆ ಸಹಸ್ರಾರು ಸಂಖ್ಯೆಯಲ್ಲಿ ಬರುವ ಭಕ್ತರ ಮುಖದಲ್ಲಿ ಕಾಣುವ ಆನಂದವನ್ನು ಕಂಡು ನಾವು ಸಂತೋಷಪಡುತ್ತೇವೆ. ಈ ಕ್ಷೇತ್ರಕ್ಕೆ ವಿಶೇಷವಾದ ಚರಿತ್ರೆ ಇದ್ದು, ಇದು ಚಂದ ವಸೂಲಿ ಮಾಡಿ ಕಟ್ಟಿರುವ ದೇವಸ್ಥಾನವಲ್ಲ. ಶ್ರೀ ವೆಂಕಟೇಶ್ವರ ಸ್ವಾಮಿಯೇ ಖುದ್ದು ಮನಸ್ಸು ಮಾಡಿ ತಾನಾಗಿಯೇ ಕಟ್ಟಿಸಿಕೊಂಡ ದೇವಾಲಯ ಎಂದು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಹೇಳುತ್ತಿರುತ್ತಾರೆ ಎಂದು ತಿಳಿಸಿದರು.

ಇದೇ ವೇಳೆ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರನ್ನು ಸನ್ಮಾನಿಸಿದ ಸುತ್ತೂರು ಶ್ರೀಗಳು, ಅವರ 82ನೇ ಜನ್ಮದಿನಕ್ಕೆ ಶುಭ ಕೋರಿದರು. ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ಆಪ್ತ ಕಾರ್ಯದರ್ಶಿ ಹೆಚ್.ವಿ.ಪ್ರಸಾದ್ ಪ್ರಾಸ್ತಾವಿಕವಾಗಿ ಮಾತನಾಡಿ, ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರ ನಡೆದು ಬಂದ ಹಾದಿಯನ್ನು ವಿವರಿಸಿದರು. ಗಣ್ಯರು ಹಾಗೂ ಅಪಾರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು.

ಮೇ 24ರವರೆಗೆ ವಿವಿಧ ಕಾರ್ಯಕ್ರಮ
ಮೇ 24ರವರೆಗೆ ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರದ 25ನೇ ವಾರ್ಷಿಕೋತ್ಸವದ ಅಂಗವಾಗಿ ಕ್ಷೇತ್ರದಲ್ಲಿ ವಿವಿಧ ಕಾರ್ಯಕ್ರಮಗಳು ನಡೆಯಲಿವೆ. ಮೇ 20ರಿಂದ 24ರವರೆಗೆ ಪ್ರತಿದಿನ ಬೆಳಗ್ಗೆ 7ರಿಂದ ಹೋಮ, ಪೂಜೆ, ವಿದ್ವಾಂಸರಿಂದ ಪ್ರವಚನ ಮತ್ತು ಸನ್ಮಾನ ಕಾರ್ಯಕ್ರಮಗಳು ನಡೆಯಲಿವೆ. ಸಂಜೆ 6ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಅವುಗಳೆಂದರೆ ಮೇ 20ರಂದು ಮೈಸೂರು ಕಲಾವಿದರಿಂದ ದಾಸ ಸಾಹಿತ್ಯ, ಮೇ 21ರಂದು ರಾಮಾಯಣ ನೃತ್ಯರೂಪಕ (ನಾದ ಮಂಟಪದಲ್ಲಿ), ಮೇ 22ರಂದು ಟಿಟಿಡಿ ಕಲಾವಿದರಿಂದ ಅನ್ನಮಾಚಾರ್ಯ ಸಂಕೀರ್ತನೆ, ಮೇ 23ರಂದು ತೆಪ್ಪೋತ್ಸವ, ಮೇ 24ರಂದು ಶ್ರೀ ಸ್ವಾಮೀಜಿಯವರಿಂದ ದಿವ್ಯನಾಮ ಸಂಕೀರ್ತನೆ ನಡೆಯಲಿವೆ. ಮೇ 25 ಮತ್ತು 26ರಂದು ಬೆಳಗ್ಗೆ 8ರಿಂದ ನಾದ ಮಂಟಪದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 82ನೇ ಜನ್ಮದಿನೋತ್ಸವ ಹಾಗೂ ನಾದ ಮಂಟಪದ 26ನೇ ವಾರ್ಷಿಕೋತ್ಸವ ಕಾರ್ಯಕ್ರಮಗಳು ನಡೆಯಲಿವೆ. 25ನೇ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರದ ಇಡೀ ಆವರಣ ತಳಿರು ತೋರಣಗಳಿಂದ ಶೃಂಗಾರಗೊಂಡಿದೆ. ಅಲ್ಲದೆ, ವಿದ್ಯುತ್ ದೀಪಗಳಿಂದ ಅಲಂಕೃತಗೊಂಡು ಕಂಗೊಳಿಸುತ್ತಿದೆ.

ಮೈಸೂರಲ್ಲಿ 61,000 ಆಸ್ತಿ ಮಾಲೀಕರು ಇನ್ನೂ ಆಸ್ತಿ ಕಾರ್ಡ್ ಪಡೆದಿಲ್ಲ

ಮೈಸೂರು, ಮೇ 19 (ಆರ್‌ಕೆ)– ಮೈಸೂರು ನಗರ ವ್ಯಾಪ್ತಿಯಲ್ಲಿ 61,000 ಆಸ್ತಿ ಮಾಲೀಕರು ಇನ್ನೂ ತಮ್ಮ ಆಸ್ತಿ ಕಾರ್ಡ್ (ಅರ್ಬನ್ ಪ್ರಾಪರ್ಟಿ ಓನರ್‌ಶಿಪ್ ರೆಕಾರ್ಡ್–ಯುಪಿಓಆರ್) ಪಡೆಯಬೇಕಾಗಿದೆ. ನಗರ ಭೂಮಾಪನಾ ಇಲಾಖೆಯು ಮೈಸೂರು ನಗರ ಹಾಗೂ ಹೊಂದಿಕೊಂಡಂತಿರುವ ಸುತ್ತಮುತ್ತಲ 42 ಗ್ರಾಮಗಳ 3,27,000 ಆಸ್ತಿಗಳನ್ನು ಆಧುನಿಕ ತಂತ್ರಜ್ಞಾನ ಬಳಸಿ ಸರ್ವೇ ಕಾರ್ಯ ಪೂರ್ಣಗೊಳಿಸಿದೆ. ಆ ಪೈಕಿ 1,66,000 ಆಸ್ತಿಗಳ ಕರಡು ಅಂತಿಮ ಪ್ರತಿ ಸಿದ್ಧವಾಗಿದ್ದರೂ ಇನ್ನೂ 61,900 ಮಂದಿ ಆಸ್ತಿ ಮಾಲೀಕರು ಆಸ್ತಿ ಕಾರ್ಡ್ ಪಡೆಯುವುದು ಬಾಕಿ ಇದೆ ಎಂದು ನಗರ ಭೂ ಮಾಪನ ಜಂಟಿ ನಿರ್ದೇಶಕ ಪ್ರಸಾದ್ ಕುಲಕರ್ಣಿ, 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಈಗಾಗಲೇ 1,04,100 ಮಂದಿಗೆ ಆಸ್ತಿ ಕಾರ್ಡ್ ವಿತರಿಸಲಾಗಿದ್ದು, ಉಳಿದ ಆಸ್ತಿ ಮಾಲೀಕರು ಅಗತ್ಯ ದಾಖಲೆಗಳೊಂದಿಗೆ ಮೈಸೂರಿನ ನಜರ್‌ಬಾದ್‌ನಲ್ಲಿರುವ ನಗರ ಮಾಪನ ಯೋಜನಾ ಜಂಟಿ ನಿರ್ದೇಶಕರ ಕಚೇರಿಯಲ್ಲಿ ಕೆಲಸದ ವೇಳೆ ಕಾರ್ಡ್ ಪಡೆದುಕೊಳ್ಳುವಂತೆಯೂ ಅವರು ತಿಳಿಸಿದ್ದಾರೆ. ಮನೆ, ಖಾಲಿ ನಿವೇಶನ, ವಾಣಿಜ್ಯ ಕಟ್ಟಡ, ಸರ್ಕಾರಿ ಕಚೇರಿ ಕಟ್ಟಡಗಳು ಇನ್ನಿತರ ಎಲ್ಲಾ ಬಗೆಯ ಆಸ್ತಿಗಳ ಸರ್ವೆ ಮಾಡಿ, ನಿಖರ ಮಾಹಿತಿಗಳನ್ನು ಡಿಜಿಟಲ್ ಪ್ರಕ್ರಿಯೆಯಲ್ಲಿ ಸಂಗ್ರಹಿಸಲಾಗಿದೆ. ಅದರಿಂದಾಗಿ ಪ್ರತಿಯೊಂದು ಆಸ್ತಿಯ ಸಂಪೂರ್ಣ ಮಾಹಿತಿ ಲಭ್ಯವಾಗಿದ್ದು, ಯುಪಿಓಆರ್ ಕಾರ್ಡ್‌ನಲ್ಲಿ ಮುದ್ರಿಸಿ ಮಾಲೀಕರಿಗೆ ನೀಡಲಾಗುತ್ತಿದೆ.



ಮೈಸೂರಿನ ನಜರ್‌ಬಾದ್ ಮಿನಿ ವಿಧಾನಸೌಧದ ಬಳಿ ಇರುವ ನಗರ ಮಾಪನ ಯೋಜನಾ ಕಚೇರಿ

ಇದರಿಂದಾಗಿ ಆಸ್ತಿಗಳ ನಕಲಿ ದಾಖಲೆ ಸೃಷ್ಟಿ, ಅಕ್ರಮ ಮಾರಾಟ, ಒತ್ತುವರಿ, ಅತಿಕ್ರಮ ಪ್ರವೇಶಗಳಂತಹ ಅಪರಾಧ ಕೃತ್ಯಗಳನ್ನು ನಿಯಂತ್ರಿಸಬಹುದಾಗಿದೆ. ಕೆರೆ, ಕಟ್ಟೆ, ಸ್ಮಶಾನ, ಕಾಲುವೆಗಳಂತಹ ಸರ್ಕಾರಿ ಸ್ವತ್ತು ಒತ್ತುವರಿ ಪರಭಾರೆಯನ್ನೂ ತಪ್ಪಿಸಬಹುದು ಎಂದು ಕುಲಕರ್ಣಿ ತಿಳಿಸಿದರು.

ಇಟಿಎಸ್, ಡಿಜಿಪಿಎಸ್ ತಂತ್ರಜ್ಞಾನ: ಖಾಲಿ ನಿವೇಶನ, ಪ್ಲಾಟ್‌ಗಳು ವಾಸದ ಮನೆ, ಬಹುಮಹಡಿ ಕಟ್ಟಡಗಳು, ಕಮರ್ಷಿಯಲ್ ಕಾಂಪ್ಲೆಕ್ಸ್, ಮಾಲ್, ಸಿನಿಮಾ ಮಂದಿರ, ಕಲ್ಯಾಣ ಮಂಟಪಗಳಂತಹ ಆಸ್ತಿಗಳನ್ನು ಎಲೆಕ್ಟ್ರಾನಿಕ್ ಟೋಟಲ್ ಸ್ಟೇಷನ್(ಇಟಿಎಸ್) ಮತ್ತು ಡಿಫರೆನ್ಸಿಯಲ್ ಗ್ಲೋಬಲ್ ಪೊಸಿಷನಿಂಗ್ ಸಿಸ್ಟಮ್(ಡಿಜಿಪಿಎಸ್) ನಂತಹ ವಿನೂತನ ತಂತ್ರಜ್ಞಾನ ಬಳಸಿ ಡಿಜಿಟಲೀಕರಣ ಮೂಲಕ ಸರ್ವೇ ಮಾಡಲಾಗಿದೆ ಎಂದು ಪ್ರಸಾದ ವಿ.ಕುಲಕರ್ಣಿ ಅವರು ತಿಳಿಸಿದರು. ಆಸ್ತಿಗಳ ಮೇಲೆ ಸಾಲ ಸೌಲಭ್ಯ ನೀಡುವಾಗ ಬ್ಯಾಂಕುಗಳಿಗೆ ಮೂಲ ದಾಖಲೆಗಳೊಂದಿಗೆ ಯುಪಿಓಆರ್ ಕಾರ್ಡ್ ಸಲ್ಲಿಸಿದರೆ ಅದರ ಸಂಪೂರ್ಣ ಮಾಹಿತಿ ಸಿಗುತ್ತದೆ. ಆಸ್ತಿಯ ಮಾಲೀಕತ್ವ, ವಿಸ್ತೀರ್ಣ, ಯಾವ ಸ್ಥಳದಲ್ಲಿದೆ ಎಂಬ ನಿರ್ದಿಷ್ಟ ಹಾಗೂ ನಿಖರತೆ ತಿಳಿಯುತ್ತದೆ.

ವಂಚನೆಯ ಪ್ರಕರಣಗಳಿಗೆ ಬ್ರೇಕ್: ಖಾಸಗಿ ವ್ಯಕ್ತಿಗಳ ಆಸ್ತಿಯ ಸಂರಕ್ಷಣೆ ಜೊತೆಗೆ ಗೋಮಾಳ, ಕಾಲುವೆ, ಪಾರ್ಕು, ಕೆರೆ ದಾರಿಗಳಂತಹ ಸರ್ಕಾರಿ ಆಸ್ತಿಗಳ ಪರಭಾರೆ, ಒತ್ತುವರಿಯಾಗಿದ್ದರೂ ತೆರವುಗೊಳಿಸಲು ಅಧಿಕಾರಿಗಳಿಗೆ ಯುಪಿಓಆರ್ ಯೋಜನೆಯು ಸಹಕಾರಿಯಾಗಲಿದೆ ಎಂದು ಅವರು ತಿಳಿಸಿದರು.

ಲ್ಯಾಂಡ್ ಮ್ಯಾಪಿಂಗ್, ರೆಕಾರ್ಡ್ ಮ್ಯೂಟೇಷನ್, ಭೂ ಸರ್ವೇ ಕಾರ್ಯವನ್ನು ಜಿಪಿಎಸ್ ಆಧಾರದಲ್ಲಿ ಮಾಡಿರುವುದರಿಂದ ಆಸ್ತಿಯ ಸಮಗ್ರ ಮಾಹಿತಿ ಸಂಗ್ರಹವಾಗಿದೆ. ಒಮ್ಮೆ ಯುಪಿಓಆರ್ ದಾಖಲೆ ಪಡೆದುಕೊಂಡರೆ, ಭವಿಷ್ಯದಲ್ಲಿ ವರ್ಗಾವಣೆ, ಮಾರಾಟ, ಬ್ಯಾಂಕ್ ಸಾಲ ಇನ್ನಿತರ ವಹಿವಾಟು ಮಾಡುವಾಗ ಯಾವುದೇ ತೊಂದರೆ, ವಿಳಂಬವಾಗುವುದಿಲ್ಲ ಎಂದರು. 2009ರಲ್ಲಿ ಸರ್ಕಾರವು ಈ ಯೋಜನೆಗೆ ಅಧಿಸೂಚನೆ ಹೊರಡಿಸಿತ್ತು. 2010ರಲ್ಲಿ ಪಿಪಿಪಿ ಮಾದರಿಯಲ್ಲಿ ಖಾಸಗಿ ಸಹಭಾಗಿತ್ವದೊಂದಿಗೆ ಜಾರಿ ಮಾಡಲಾಯಿತು, ಪ್ರಕ್ರಿಯೆ ಪೂರ್ಣಗೊಂಡಿದ್ದರೂ ಕೆಲ ಆಸ್ತಿ ಮಾಲೀಕರು ಪ್ರಾಪರ್ಟಿ ಕಾರ್ಡ್ ಪಡೆದಿಲ್ಲ ಎಂದು ಅವರು ತಿಳಿಸಿದರು.

ಪ್ರಾಪರ್ಟಿ ಕಾರ್ಡ್ ಪಡೆದುಕೊಳ್ಳಿ
ಮೈಸೂರಿನ ನಜರ್‌ಬಾದ್‌ನಲ್ಲಿರುವ ತಾಲೂಕು ಕಚೇರಿ (ಮಿನಿ ವಿಧಾನ ಸೌಧ) ಪಕ್ಕದಲ್ಲೇ ಇರುವ ನಗರ ಮಾಪನ ಯೋಜನಾ ಕಚೇರಿ(ಪ್ರೊಜೆಕ್ಟ್ ಆಫೀಸ್ ಸಿಟಿ ಸರ್ವೆ)ಯಲ್ಲಿ ಆಸ್ತಿ ಮಾಲೀಕರು ತಮ್ಮ ಆಧಾರ್ ಕಾರ್ಡ್, ಕ್ರಯ ಪತ್ರ ಇಸಿ ಇನ್ನಿತರ ದಾಖಲೆ ಪತ್ರಗಳೊಂದಿಗೆ ತಂಬ್ ಇಂಪ್ರೆಷನ್ ಕೊಟ್ಟು ತಮ್ಮ ಆಸ್ತಿಯ ಯುಪಿಓಆರ್ ಕಾರ್ಡ್ ಅನ್ನು ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ 7411088231 ಅಥವಾ 9632462492 ಮೊಬೈಲ್ ಸಂಖ್ಯೆ ಸಂಪರ್ಕಿಸಬಹುದು.
–ಪ್ರಸಾದ್ ಕುಲಕರ್ಣಿ, ಜಂಟಿ ನಿರ್ದೇಶಕ, ನಗರ ಭೂಮಾಪನ ಯೋಜನೆ

ನಕ್ಕರೆ ಅದೇ ಸ್ವರ್ಗ

ವೈದ್ಯರು : ನಿಮಗಿಷ್ಟವಾದ ಯಾವುದಾದರೂ ಹಣ್ಣನ್ನು ಸಿಪ್ಪೆಸಹಿತ ತಿಂದ್ರೆ ಒಳ್ಳೆಯದು. ಯಾಕಂದ್ರೆ ಸಿಪ್ಪೆಯಲ್ಲಿ ತುಂಬಾ ವಿಟಮಿನ್ಸ್ ಇರುತ್ತೆ

ರೋಗಿ : (ಸಪ್ಪಗಾಗಿ) ಆದ್ರೆ ಏನು ಮಾಡಲಿ ಡಾಕ್ಟ್ರೆ, ನನಗಿಷ್ಟವಾದ ಹಣ್ಣು ಹಲಸಿನ ಹಣ್ಣು''

ಮೈಸೂರು ಮಿತ್ರ

ಸೋಮವಾರ, 20 ಮೇ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಮುಗ್ಧತೆ ಹಾಗೂ ಆತ್ಮವಿಶ್ವಾಸ ಜೀವನದಲ್ಲಿ ಇರಬೇಕಾದ ಎರಡು ಅಂಶಗಳು. ಇವುಗಳಿಂದ ಜೀವನದಲ್ಲಿ ಯಶಸ್ಸು ನಿಶ್ಚಿತ. –ಮಾರ್ಕ್‌ಟ್ವೈನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ರೀತಿ ತಪ್ಪಿದರೂ ನೀತಿ ತಪ್ಪಬಾರದು

ನಿಮ್ಮ ಪತ್ರಗಳು

■ ಗ್ರಾಮಗಳಲ್ಲಿ ಅಧ್ಯಯನ ಕೊಠಡಿಗಳು ಸ್ಥಾಪನೆಯಾಗಲಿ

ಮಾನ್ಯರೆ,

ಇಂದು ವಿಶ್ವದಲ್ಲಿ ಜನಸಂಖ್ಯೆ ಏರಿಕೆಯ ಸ್ಥಾನದಲ್ಲಿ ಭಾರತ ದೇಶವು ದ್ವಿತೀಯ ಸ್ಥಾನ ಪಡೆದು, ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಒಂದಾಗಿದೆ. ದೇಶದ ಪ್ರಗತಿಗಾಗಿ ಶಿಕ್ಷಣ, ಉದ್ಯೋಗಗಳು ಪ್ರಮುಖವಾಗಿದೆ. ನಮ್ಮ ದೇಶದಲ್ಲಿ ಬಡತನ ಮತ್ತು ಮಧ್ಯಮ ವರ್ಗದ ಕುಟುಂಬಗಳು ಹೆಚ್ಚಾಗಿರುವ ಕಾರಣ ಅದರಂತೆ ದೇಶದಾದ್ಯಂತ ಶಿಕ್ಷಣ ಮುಗಿಸಿ ಸರ್ಕಾರಿ ಉದ್ಯೋಗಕ್ಕಾಗಿ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಆರ್ಥಿಕವಾಗಿ ಸಫಲರಾದವರು ತರಬೇತಿಗಳನ್ನು ಪಡೆದರೆ, ಆರ್ಥಿಕವಾಗಿ ಹಿಂದುಳಿದವರು ಕಷ್ಟಪಡುತ್ತಿದ್ದಾರೆ ಕೆಲವು ಕುಟುಂಬಗಳಲ್ಲಿ ಎಲ್ಲಾ ಸೌಲಭ್ಯಗಳಿದ್ದು ಓದುವಿಗಾಗಿ ಪ್ರತ್ಯೇಕ ಕೋಣೆಗಳಿಲ್ಲದೆ, ಓದುಗರು ಓದಿನ ಮೇಲೆ ಆಸಕ್ತಿ ಕಳೆದುಕೊಳ್ಳುವಂತಾಗಿದೆ.

ಇದೆಲ್ಲವನ್ನೂ ಗಮನಿಸಿ ಈ ಕೂಡಲೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳ ವತಿಯಿಂದ ಸಮಾಜಕ್ಕೆ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಸಾರ್ವಜನಿಕರಿಗೆ ನೀಡುವಂತೆ, ದೇಶದ ಪ್ರತಿ ಗ್ರಾಮಗಳಲ್ಲಿ ಒಂದು ಅಧ್ಯಯನ ಕೊಠಡಿಗಳನ್ನು ನಿರ್ಮಿಸಿ ಇದರಲ್ಲಿ ಮಹಿಳೆಯರಿಗೆ ಮತ್ತು ಪುರುಷರಿಗೆ ಪ್ರತ್ಯೇಕ ಕೋಣೆಗಳನ್ನು ನಿರ್ಮಾಣ ಮಾಡಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಧ್ಯಯನ ತಯಾರಿ ನಡೆಸುವವರಿಗೆ ಅನುಕೂಲ ಮಾಡಿಕೊಡಲು ಮುಂದಾಗಿ ಹೆಚ್ಚು ಪ್ರಮಾಣದಲ್ಲಿ ಓದುಗರಿಗೆ ಮತ್ತು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಧ್ಯಯನ ಮಾಡುತ್ತಿರುವವರಿಗೆ ಬಹಳ ಅನುಕೂಲವಾಗುತ್ತದೆ. ಆದ್ದರಿಂದ ರಾಜಕೀಯ ನಾಯಕ / ನಾಯಕಿಯರು ಮತ್ತು ಈವಿಷಯಕ್ಕೆ ಸಂಬಂಧಪಟ್ಟವರು ತಡಮಾಡದೆ ಅನುಕೂಲ ಮಾಡಲು ಮುಂದಾಗಬೇಕು.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

■ ಹ್ಯಾಂಡ್‌ಪೋಸ್ಟ್ ಸರ್ಕಲ್ ಬಳಿ ಬಸ್ ತಂಗುದಾಣ ನಿರ್ಮಿಸಿ

ಮಾನ್ಯರೆ,

ಹೆಚ್.ಡಿ.ಕೋಟೆ ತಾಲೂಕಿನ ಹ್ಯಾಂಡ್‌ಪೋಸ್ಟ್ ಸರ್ಕಲ್‌ನಲ್ಲಿ ಬಸ್ ತಂಗುದಾಣ ಇಲ್ಲದೆ ಪ್ರಯಾಣಿಕರಿಗೆ ತುಂಬಾ ತೊಂದರೆಯಾಗುತ್ತಿದೆ. ಹ್ಯಾಂಡ್‌ಪೋಸ್ಟ್ ಸರ್ಕಲ್ ಮಾರ್ಗದ ಮೂಲಕವೇ ಪ್ರಯಾಣಿಕರು ಮೈಸೂರು, ಹೆಚ್.ಡಿ.ಕೋಟೆ, ಸರಗೂರು ಹಾಗೂ ಮಾನಂದವಾಡಿಗೆ ಹೋಗುವುದು. ಆದರೆ ಈ ಮಾರ್ಗಗಳಿಗೆ ಹೋಗಲು ನಿಲ್ಲಬೇಕಾದ ಸ್ಥಳಗಳಲ್ಲಿ ಯಾವುದೇ ರೀತಿಯ ಬಸ್ ತಂಗುದಾಣವಿಲ್ಲದೆ ಸಾರ್ವಜನಿಕರು, ವಿದ್ಯಾರ್ಥಿಗಳೂ ಗಂಟೆಗಟ್ಟಲೆ ಬಿಸಿಲು ಮತ್ತು ಮಳೆಯಲ್ಲಿ ನೆನೆಯುತ್ತಾ ಬಸ್ಸುಗಳಿಗೆ ಕಾಯಬೇಕಾಗಿದೆ. ಪ್ರಯಾಣಿಕರು ಬೇರೆ ಬೇರೆ ಕಡೆಗೆ ಕುಳಿತುಕೊಳ್ಳಲು ಹೋಗಿ ಬಸ್ ಬಂದಾಗ ಓಡಿ ಬರುವಾಗ ಅಪಘಾತಗಳು ಕೂಡ ಸಂಭವಿಸಿವೆ. ಮಾನಂದವಾಡಿಗೆ ಹೋಗುವ ಮಾರ್ಗದಲ್ಲಿ ಮಾತ್ರ ಹಳೆಯದೊಂದು ಬಸ್ ತಂಗುದಾಣವಿದ್ದು ಅದು ಕಸ, ಧೂಳು ಮಾತ್ರವಲ್ಲದೆ ಕೆಲ ಅನಾಗರಿಕರು ಗಲೀಜು ಮಾಡಿರುವುದರಿಂದ ತಂಗುದಾಣ ಆಶ್ರಯಿಸುವವರಿಗೆ ಮುಜುಗರವಾಗುತ್ತಿದೆ. ಆದ್ದರಿಂದ ಈ ಸ್ಥಳದಲ್ಲಿ ಹೊಸದೊಂದು ಬಸ್ ತಂಗುದಾಣದ ಅವಶ್ಯಕತೆ ಇದ್ದು ಅದನ್ನು ನಿರ್ಮಿಸಿದರೆ ಅಲ್ಲಿನ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳಿಗೆ ತುಂಬಾ ಅನುಕೂಲವಾಗುತ್ತದೆ. ಈ ಸಂಬಂಧವಾಗಿ ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಗಮನಹರಿಸಬೇಕಿದೆ. **–ಐಶ್ವರ್ಯ, ಮಹಾರಾಣಿ ಮಹಿಳಾ ಕಲಾ ಕಾಲೇಜು.**

■ ಪ್ರಜ್ವಲ್ ರೇವಣ್ಣ ಕೇಸು ಮುಕ್ತಾಯ ಯಾವಾಗ..?

ಮಾನ್ಯರೆ,

ಪ್ರಜ್ವಲ್ ರೇವಣ್ಣ ಹಾಸನ ಜಿಲ್ಲೆಯ ಸಂಸದರಾಗಿ ಒಬ್ಬ ಜನಪ್ರತಿನಿಧಿಯಾಗಿ, ರಾಜ್ಯದಿಂದ ರಾಷ್ಟ್ರದ ಮಟ್ಟದಲ್ಲಿ ಗುರುತಿಸಿಕೊಂಡು ಸಾಮಾನ್ಯ ಜನರಿಗೆ ಸಾರ್ವಜನಿಕ ವಲಯದಲ್ಲಿ ಅನೇಕ ಅಭಿವೃದ್ಧಿ ಕೆಲಸ ಕಾರ್ಯಗಳ ಬಗ್ಗೆ ಯೋಚನೆ ಮಾಡುವ ಒಬ್ಬ ವ್ಯಕ್ತಿ, ಇಂದು ಎರಡು ಸಾವಿರಕ್ಕೂ ಹೆಚ್ಚು ಮಹಿಳೆಯರ ಲೈಂಗಿಕ ದೌರ್ಜನ್ಯ ಮಾಡಿ ಇಂದು ದೇಶವನ್ನು ತೊರೆದು ಭಾರತ ಜನರಿಗೆ ಕಣ್ತಪ್ಪಿಸಿಕೊಂಡು ಬದುಕುತ್ತಿದ್ದಾರೆ. ಈಗಾಗಲೇ ಕಾನೂನು ಕ್ರಮ ಕೈಗೊಂಡ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಎಸ್‌ಐಟಿ ತನಿಖೆ ನಡೆಸಲು ಆದೇಶ ಹೊರಡಿಸಿದೆ. ಆದರೆ ಕಳೆದ ಇಪ್ಪತ್ತು ದಿನಗಳಿಂದ ಪ್ರತಿನಿತ್ಯ ಹೆಚ್ಚಾಗಿ ಪ್ರಜ್ವಲ್ ರೇವಣ್ಣ ಮತ್ತು ತಂದೆ ಹೆಚ್.ಡಿ.ರೇವಣ್ಣರ ಬಗ್ಗೆ ದೃಶ್ಯ ಮಾಧ್ಯಮಗಳ ನ್ಯೂಸ್ ಚಾನಲ್‌ನಲ್ಲಿ ಬರುವುದರಿಂದ, ಪ್ರತಿನಿತ್ಯ ಕುಟುಂಬ ಸದಸ್ಯರು ತಂದೆ ತಾಯಿ ಮಕ್ಕಳು, ಅಜ್ಜ ಅಜ್ಜಿ ಕುಟುಂಬದ ಮಹಿಳೆಯರು ಒಟ್ಟಾಗಿ ಕುಳಿತು ದೂರದರ್ಶನ ವೀಕ್ಷಿಸಲು ಮುಂದಾದರೆ ಸಾಕು ಇದೆ ಸುದ್ದಿ ಮತ್ತು ಕೆಲವು ಚಾನಲ್‌ಗಳಲ್ಲಿ ಪ್ರಚೋದನಕಾರಿಯಾಗಿ ಹೇಳುವುದರಿಂದ ಬಹಳ ಕಿರಿಕಿರಿಯಾಗುತ್ತಿದೆ. ಆದ್ದರಿಂದ ಕೂಡಲೇ ಸಂಬಂಧಪಟ್ಟ ದೃಶ್ಯ ಮಾಧ್ಯಮಗಳು ಕೆಲವು ಪ್ರಚೋದನಾಕಾರಿ ದೃಶ್ಯಗಳು ಮತ್ತು ಸಂಭಾಷಣೆಗಳನ್ನು ಕೈಬಿಟ್ಟು ಮುಂದುವರೆಸಬೇಕು. ಒಬ್ಬ ಸಾಮಾನ್ಯ ಪ್ರಜೆ ತಪ್ಪು ಮಾಡಿದರೆ ಕೆಲವೆ ಸಮಯಗಳಲ್ಲಿ ಬಂಧಿಸುವರು, ಇಂದು ರಾಜಕೀಯ ಶಕ್ತಿ ಬಳಸಿ ದೇಶದ ನಮ್ಮ ದೇಶದ ಹೆಣ್ಣು ಮಕ್ಕಳಿಗೆ ದೌರ್ಜನ್ಯ ಎಸಗಿರುವ ಪ್ರಜ್ವಲ್ ರೇವಣ್ಣರನ್ನು ಶೀಘ್ರದಲ್ಲೇ ಬಂಧಿಸಿ, ಸಂತ್ರಸ್ತ ಮಹಿಳೆಯರಿಗೆ ನ್ಯಾಯ ಒದಗಿಸಲು ಈ ಮೂಲಕ ಮನವಿ. **–ನಾಗೇಶ್, ಮಾನಸಗಂಗೋತ್ರಿ, ಮೈಸೂರು**

■ ಕೋಟೆಹುಂಡಿ ರಸ್ತೆ ದುರಸ್ತಿಗೊಳಿಸಿ

ಮಾನ್ಯರೆ,

ಮೈಸೂರು ಮಾನಂದವಾಡಿ ರಸ್ತೆಯಲ್ಲಿ ದಿನನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ಕೋಟೆಹುಂಡಿ ಗೇಟ್‌ನಿಂದ ಕಳವಾಡಿ ಗೇಟ್‌ವರೆಗೆ ರಸ್ತೆಯು ಹದಗೆಟ್ಟಿದ್ದು, ವಾಹನ ಸವಾರರಿಗೆ ದುಸ್ತರವಾಗಿದೆ. ಮೈಸೂರಿನ ಜಯಪುರ ಹೋಬಳಿಯ ನೂರಾರು ಜನರು ದಿನ ಕೆಲಸ ಅರಸಿ ಮೈಸೂರಿಗೆ ಇದೇ ರಸ್ತೆಯಲ್ಲಿ ಸಂಚರಿಸುತ್ತಾರೆ. ರಾತ್ರಿ ಸಮಯ ಹಾಗೂ ಮಳೆ ಬಿದ್ದ ಸಮಯದಲ್ಲಿ ರಸ್ತೆಯ ಗುಂಡಿಗಳು ಅಪಘಾತಕ್ಕೆ ದಾರಿ ಮಾಡಿಕೊಡುತ್ತವೆ. ದಯಮಾಡಿ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ ರಸ್ತೆಯನ್ನು ಜನರ ಓಡಾಟಕ್ಕೆ ಸುಗಮವಾಗುವಂತೆ ಮಾಡಬೇಕಾಗಿ ವಿನಂತಿ. **–ಮಂಜೇಶ್ ದೇವಾಳ್ಳಿ, ಮೈಸೂರು**



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಬೆರಗು

ಆರಡಿ ಮೂರಡಿ ವೈರಾಗ್ಯದಲ್ಲಿಯೇ ಬದುಕಬೇಡಿ!

ಮನುಷ್ಯ ಜನಿಸಿದಾಕ್ಷಣ ಅವನ ನಡಿಗೆ ಸಾವಿನ ಕಡೆಗೆ. ಪ್ರತಿದಿನವೂ ಮನುಷ್ಯ ಸಾವಿಗೆ ಹತ್ತಿರವಾಗುತ್ತಿರುತ್ತಾನೆ, ಅದು ಅಂತಿಮ ಸತ್ಯ. ಕೊನೆಗೆ ಸಾಯುವುದು ಇದ್ದೇ ಇರುತ್ತದೆ. ಅದಕ್ಕೇಕೆ ದಿನವೂ ಸಾಯಬೇಕು. ಮನುಷ್ಯ ನಿತ್ಯವೂ ಬದುಕಬೇಕೆ ವಿನಃ ನಿತ್ಯವೂ ಸಾಯಬಾರದು. ಪ್ರತಿಯೊಂದು ಪ್ರಾಣಿಪಕ್ಷಿಯೂ ಹುಟ್ಟಿದಾಕ್ಷಣ ಹೋರಾಟ ಮಾಡುವುದು ಬದುಕುವುದಕ್ಕಾಗಿಯೇ ಹೊರತು ಸಾಯಲು ಹೋರಾಟ ಮಾಡುವುದಿಲ್ಲ. ಬಹುಶಃ ಸಾಯಲು ಪ್ರಯತ್ನಿಸುವುದು ಮನುಷ್ಯ ಜೀವಿ ಮಾತ್ರ ಎನಿಸುತ್ತದೆ. ಎಷ್ಟೋ ಜೀವಿಗಳಿಗೆ ಸಾವಿನ ಬಗ್ಗೆ ಚಿಂತೆಯೇ ಇರುವುದಿಲ್ಲ. ಏಕೆಂದರೆ ಅವುಗಳಿಗೆ ಸಾವಿನ ಅರಿವೇ ಇರುವುದಿಲ್ಲ. ಮನುಷ್ಯನಿಗೆ ಇರುವ ಅರಿವು ಕೆಲವೊಮ್ಮೆ ವರ ಎನಿಸಿದರೆ ಮತ್ತೆ ಕೆಲವೊಮ್ಮೆ ಅದೇ ಶಾಪ ಎನಿಸುತ್ತದೆ. ಮನುಷ್ಯನ ಅರಿವು ಅವನ ಬದುಕನ್ನು ಸುಂದರವಾಗಿ ರೂಪಿಸುವ ಶಿಲ್ಪಿಯಾಗಬೇಕೆ ವಿನಃ ವೈರಾಗ್ಯ ಮೂರ್ತಿಯಾಗಿ ರೂಪಿಸಲು ಅಲ್ಲ.

ಎಂದೋ ಒಂದು ದಿನ ಚಿರನಿದ್ರೆಗೆ ಜಾರುತ್ತೇವೆ ಎಂಬ ಅಳುಕಿನಿಂದ ನಿತ್ಯ ನಿದ್ರೆ ಕೆಡಿಸಿಕೊಳ್ಳಬೇಕಿಲ್ಲ. ಸತ್ತಮೇಲೆ ಆರಡಿ ಮೂರಡಿ ಜಾಗದಲ್ಲಿ ಶಾಶ್ವತವಾಗಿ ಮಲಗಬೇಕು ಎಂಬ ಮಾತು ಸತ್ಯವಾದರೂ, ಬದುಕಿದ್ದಾಗ ಆರಡಿ ಮೂರಡಿ ಜಾಗದಲ್ಲಿ ಬದುಕಲು ಸಾಧ್ಯವಿಲ್ಲ ಅಲ್ಲವೇ? ಅನೇಕ ಮಹಾತ್ಮರು ವೈರಾಗ್ಯದ ನುಡಿಗಳನ್ನಾಡುವ ಭರದಲ್ಲಿ ಈ ಮಾತುಗಳನ್ನು ಹೇಳುತ್ತಾರೆ ನಿಜ. ಆದರೆ ವಾಸ್ತವದ ಬದುಕಿನ ಚಿತ್ರಣವೇ ಬೇರೆ ಇರುತ್ತದೆ. ಮನುಷ್ಯ ಬೇಕಾದರೆ ಬದುಕನ್ನು ಸರಳಗೊಳಿಸಿಕೊಳ್ಳಲಿ, ಆದರೆ ಇರುವ ಸುಂದರ, ಸುಮಧುರ ಬದುಕನ್ನು ನಿರಾಕರಿಸಿ, ವಿರೂಪಗೊಳಿಸಿ ವೈರಾಗ್ಯದ ಬದುಕನ್ನು ಹೇರಿಕೊಳ್ಳುವುದು ಹೇಯ ಕೃತ್ಯ. ತಾನಷ್ಟೇ ಅಲ್ಲದೆ ತನ್ನ ಮನೆಯವರಿಗೂ ಯಾತನೆ ನೀಡುವ ಅನೇಕ ವೈರಾಗ್ಯ ಮೂರ್ತಿಗಳನ್ನು ನಾವು ಕಾಣಬಹುದಾಗಿದೆ.

ಬದಲಾವಣೆ ಜಗದ ನಿಯಮ ಎನ್ನುವ ಮಾತನ್ನು ಒಪ್ಪಿಕೊಂಡ ಮೇಲೆ ಕೆಲವು ತತ್ವ ಹಾಗೂ ಸಿದ್ಧಾಂತಗಳು ಕಾಲ ಕಾಲಕ್ಕೆ ಬದಲಾವಣೆ ಆಗುತ್ತಲೇ ಇರುತ್ತವೆ. 'ಆಸೆಯೇ ದುಃಖಕ್ಕೆ ಮೂಲ' ಎಂದು ಬುದ್ಧ ಹೇಳಿದ ಮಾತು ಸಾರ್ವಕಾಲಿಕ ಸತ್ಯವಾದುದು ಎನಿಸುತ್ತದೆ. ಆದರೆ ಆಸೆಯೇ ಇರದಿದ್ದರೆ ಮನುಷ್ಯನ ಬದುಕಿನಲ್ಲಿ ಸ್ವಾರಸ್ಯವೇ ಇರದು. ಆಸೆಯನ್ನೇ ತ್ಯಜಿಸಿ ಎಲ್ಲರೂ ಸಂನ್ಯಾಸಿಗಳಂತೆ ಬದುಕಲು ಆಗದು. ಏನಾದರೂ ಒಂದು ಕಸುಬು ಅಥವಾ ಕೆಲಸ ಮಾಡಿಯೇ ಮನುಷ್ಯ ಬದುಕಬೇಕು. ಆಸೆಯೇ ಬದುಕಿನ ಇಂಧನ. ಆದ್ದರಿಂದ ಇಂದಿನ ಕಾಲಘಟ್ಟಕ್ಕೆ 'ದುರಾಸೆಯೇ ದುಃಖಕ್ಕೆ ಮೂಲ' ಎಂದು ಬುದ್ಧನ ಮಾತನ್ನು ಮಾರ್ಪಾಡು ಮಾಡಿಕೊಳ್ಳುವುದು ಸೂಕ್ತ. ಭೂಮಿಯ



ಮೇಲೆ ಎಲ್ಲರೂ ವೈರಾಗ್ಯ ತಾಳಿದರೆ ಇಂದು ಭೂಲೋಕ ಒಂದು ಸುಂದರ ಹೂತೋಟದಂತೆ ನಳನಳಿಸದೆ ಹಾಳು ಸ್ಮಶಾನದಂತೆ ಭಣಗುಡುತ್ತಿತ್ತು.

ಒಂದು ದಿನ ಸಾಯುವುದು ಇದ್ದೇ ಇದೆ ಎಂದು ಭಾವಿಸಿ ಯಾರೂ ಯಾವುದನ್ನು ಆಸೆ ಪಡದೆ ಇದ್ದರೆ ನಿತ್ಯ ಬೆಳಗ್ಗೆ ಎದ್ದು ಏನಾದರೊಂದು ಕೆಲಸ ಮಾಡಲು ಸ್ಫೂರ್ತಿಯೇ ಇರುವುದಿಲ್ಲ. ಮನುಷ್ಯ ಸತ್ತ ಮೇಲೆ ಮಲಗಿದಂತೆ ಬದುಕಿದ್ದಾಗಲೂ ಮಲಗಿರಬೇಕಾಗಿರುತ್ತಿತ್ತು. ಮನುಷ್ಯ ಮಲಗಲು ಸೃಷ್ಟಿಯಾದವನಲ್ಲ, ಬದಲಿಗೆ ತನ್ನ ಶಕ್ತಿ ಹಾಗೂ ಯುಕ್ತಿಯಿಂದ ಚಲನ ಶಕ್ತಿಯಿಂದ ಬದುಕನ್ನು ಸುಂದರವಾಗಿಸಿಕೊಳ್ಳಲು ಜನಿಸಿದವನು. ಒಂದು ದಿನ ಸಾಯೋದು ಇದ್ದೇ ಇದೆ. ಹಾಗಂದ ಮಾತ್ರಕ್ಕೆ ಅವಿಶ್ರಾಂತವಾಗಿ ದುಡಿದು ಬದುಕಬೇಕು ಅಂತಲ್ಲ. ಬದುಕಲು ದುಡಿಯಬೇಕೆ ವಿನಃ ದುಡಿಯಲು ಬದುಕಬಾರದು.

ವೈರಾಗ್ಯದ ಮಾತುಗಳನ್ನು ಆಲಿಸಲು ಚೆನ್ನಾಗಿರುತ್ತದೆ. ಆದರೆ ಅನುಸರಿಸಲು ಕಷ್ಟವಾಗುತ್ತದೆ. ಸರಳ ಜೀವನವನ್ನು ರೂಢಿಸಿಕೊಳ್ಳಿ ಎಂದು ಹೇಳುವ ಎಷ್ಟೋ ಜನ ಬಾಬಾಗಳು ಕೋಟಿ ರೂಪಾಯಿ ಕಾರಿನಲ್ಲಿ ತಿರುಗಾಡುತ್ತಿರುತ್ತಾರೆ, ಖಾಸಗಿ ವಿಮಾನ ಹಾಗೂ ಹೆಲಿಕಾಪ್ಟರ್ ಹೊಂದಿರುತ್ತಾರೆ. ಉಪದೇಶಗಳಂತೆ ಬದುಕು ಸಾಗಿಸಲು ಯತ್ನಿಸಿದರೆ ಉಪವಾಸ ಇರಬೇಕಾಗುತ್ತದೆ ಅಷ್ಟೆ. ಸ್ವಸ್ಥ ಜೀವನಕ್ಕೆ ಉಪನ್ಯಾಸ, ಪ್ರವಚನಗಳನ್ನು ಕೇಳಬೇಕು. ಒಬ್ಬರ ಮನಸ್ಸು ಉಪದೇಶ ಕೇಳಿ ಎಷ್ಟೇ ಪ್ರಫುಲ್ಲವಾದರೂ, ಅವರ ದೇಹ ಪ್ರಫುಲ್ಲವಾಗುವುದು ಹೊಟ್ಟೆ ತುಂಬಿದಾಗ ಮಾತ್ರ ಹಾಗಾಗಿ ಸಂತೋಷದ ಜೀವನಕ್ಕೆ ಸರ್ವ ಸಂಗ ಪರಿತ್ಯಾಗಿಗಳಂತೆ ನಿತ್ಯವೂ ಬದುಕಬೇಕಿಲ್ಲ. ಸಂಸಾರಿಯು ಸುಖವಾಗಿರಬಲ್ಲ, ಸಂತೋಷವಾಗಿರಬಲ್ಲ.

ಬದುಕು ಒಬ್ಬೊಬ್ಬರಿಗೆ ಒಂದೊಂದು ರೀತಿ ಕಾಣುತ್ತದೆ. ಒಬ್ಬರ ಅನುಭವಕ್ಕೆ ಬಂದ ಬದುಕು ಮತ್ತೊಬ್ಬರಿಗೆ ಅದೇ ರೀತಿ ಇರದು. ಅಷ್ಟೇನೂ ಸ್ಥಿತಿವಂತರಲ್ಲದವರು ಅದಮ್ಯ ಜೀವನ ಪ್ರೀತಿಯನ್ನು ಹೊಂದಿ, ನಿತ್ಯ ಜೀವನದ ಸಣ್ಣ ಸಣ್ಣ ಸಂತೋಷಗಳನ್ನು ಸಂಭ್ರಮಿಸುತ್ತಿರುತ್ತಾರೆ. ಆದರೆ ಅನೇಕ ಶ್ರೀಮಂತರು ಎಲ್ಲವೂ ಇದ್ದರೂ, ಹರ್ಷಪಡಲು ಹತ್ತು ಕಾರಣಗಳಿದ್ದರೂ, ಬದುಕಿನಲ್ಲಿ ಏನೋ ಕಳೆದುಕೊಂಡವರಂತೆ ನೀರಸ ಬದುಕನ್ನು ರೂಢಿಸಿಕೊಂಡಿರುತ್ತಾರೆ. ಅಯ್ಯೋ, ಅಂತಹ ಶ್ರೀಮಂತರೇ ಹಾಗಿದ್ದಾರೆ ಎಂದು ಅವರನ್ನು ಅನುಸರಿಸುವುದು ತಪ್ಪು. ಯೋಗಿ ತಂದದ್ದು ಯೋಗಿಗೆ, ಭೋಗಿ ತಂದದ್ದು ಭೋಗಿಗೆ ಎಂದು ಭಾವಿಸಿ ನಮಗೆ ಇರುವ ಸವಲತ್ತುಗಳಲ್ಲೇ ಅತ್ಯಾನಂದವನ್ನು ಕಾಣುವುದನ್ನು ಕಂಡುಕೊಂಡವನೇ ಜಾಣನಾಗುತ್ತಾನೆ.

ಬದುಕು ಸುಖ, ಸಂತೋಷ, ನೋವು, ದುಃಖಗಳನ್ನು ಮಾರುವ ಸಂತೆ. ನಾವು ಬಯಸುವ ಸುಖಸಂತೋಷಗಳನ್ನು ದುಬಾರಿಯಾದರೂ ಕೊಳ್ಳಬೇಕೆ ವಿನಃ ಕಡಿಮೆ ಬೆಲೆಗೆ ಸಿಗುತ್ತದೆ ಎನ್ನುವ ಕಾರಣಕ್ಕೆ ನೋವು, ದುಃಖಗಳನ್ನು ಖರೀದಿಸಬಾರದು. ಅನೇಕರು ತಮ್ಮ ಜೀವನದ ಪ್ರಮುಖ ಘಟ್ಟಗಳಲ್ಲಿ ಆದ ಸಂತೋಷವನ್ನು ಮತ್ತೆ ಮತ್ತೆ ನೆನೆದು ಸಂಭ್ರಮಿಸುವ ಅಭ್ಯಾಸ ಹೊಂದಿಲ್ಲ. ಆದರೆ ನೋವಿನ ಸಂಗತಿಗಳನ್ನು ನೆನೆ ನೆನೆದು ಕಣ್ಣೀರಿಡುವುದನ್ನು ಕೆಲವರು ಅಭ್ಯಾಸ ಮಾಡಿಕೊಂಡಿರುತ್ತಾರೆ. ಸಂತೋಷಪಡುವ ಯೋಗ ಹಾಗೂ ಯೋಗ್ಯತೆ ಎರಡೂ ಇದ್ದರೂ ದುಃಖಪಡಲು ಹಾತೊರೆಯುತ್ತಿರುತ್ತಾರೆ. ಅಷ್ಟೇ ಅಲ್ಲ ತಮ್ಮ ಸುತ್ತ ಇರುವ ಅನೇಕರನ್ನು ದುಃಖದ ಕಡಲಲ್ಲಿ ಮುಳುಗಿಸಲು ಪ್ರಯತ್ನಿಸುತ್ತಿರುತ್ತಾರೆ. ನಮ್ಮ ಹತ್ತಿರದವರ ನೋವು ನಮ್ಮನ್ನು ಹಲವು ದಿನಗಳ ಕಾಲ ಬಾಧಿಸುತ್ತಿರುತ್ತದೆ. ಅಂದಮಾತ್ರಕ್ಕೆ ಜೀವನ ಪರ್ಯಂತ ಅವರನ್ನು ನೆನೆದು ರೋದಿಸಬೇಕಿಲ್ಲ. 'ಸರಸ ಜನನ, ವಿರಸ ಮರಣ, ಸಮರಸವೇ ಜೀವನ' ಎಂಬ ಕವಿವಾಣಿಯಂತೆ ಬದುಕನ್ನು ಬಂದಹಾಗೆ ಸ್ವೀಕರಿಸಿ, ಅರ್ಥಪೂರ್ಣವಾಗಿ ಕಳೆಯುವುದರಲ್ಲಿ ಸಾರ್ಥಕತೆ ಇರುತ್ತದೆ.

ಋಣಾತ್ಮಕ ಆಲೋಚನೆಗಳಿರುವ ನಮ್ಮ ಸುತ್ತ ಅನೇಕರು ಇರುತ್ತಾರೆ. ಅವರು ತಮಗೆ ದಕ್ಕದೇ ಇದ್ದದನ್ನು 'ದ್ರಾಕ್ಷಿ ಹುಳಿ ಎಂದ ನರಿಯಂತೆ' ಯಾವಾಗಲು ಬದುಕು ನಿಸ್ಸಾರ ಎಂದೇ ಹೇಳುತ್ತಿರುತ್ತಾರೆ. ಅವರ ಮಾತನ್ನು ಕೇಳುತ್ತಿದ್ದರೆ ಆದಷ್ಟು ಬೇಗ ಸಾವಿಗೆ ಶರಣಾಗುವುದೇ ಸೂಕ್ತ ಎಂಬ ಭಾವ ಮೂಡುತ್ತದೆ. ಬದುಕಿನಲ್ಲಿ ಸುಂದರ ಸ್ವಪ್ನಗಳು ಮೂಡುವವರಿಗೆ ದುಃಸ್ವಪ್ನಗಳು

> "
> ಬದುಕು ಸುಖ, ಸಂತೋಷ, ನೋವು, ದುಃಖಗಳನ್ನು ಮಾರುವ ಸಂತೆ. ನಾವು ಬಯಸುವ ಸುಖಸಂತೋಷಗಳನ್ನು ದುಬಾರಿಯಾದರೂ ಕೊಳ್ಳಬೇಕೆ ವಿನಃ ಕಡಿಮೆ ಬೆಲೆಗೆ ಸಿಗುತ್ತದೆ ಎನ್ನುವ ಕಾರಣಕ್ಕೆ ನೋವು, ದುಃಖಗಳನ್ನು ಖರೀದಿಸಬಾರದು. ಅನೇಕರು ತಮ್ಮ ಜೀವನದ ಪ್ರಮುಖ ಘಟ್ಟಗಳಲ್ಲಿ ಆದ ಸಂತೋಷವನ್ನು ಮತ್ತೆ ಮತ್ತೆ ನೆನೆದು ಸಂಭ್ರಮಿಸುವ ಅಭ್ಯಾಸ ಹೊಂದಿಲ್ಲ. ಆದರೆ ನೋವಿನ ಸಂಗತಿಗಳನ್ನು ನೆನೆನೆನೆದು ಕಣ್ಣೀರಿಡುವುದನ್ನು ಕೆಲವರು ಅಭ್ಯಾಸ ಮಾಡಿಕೊಂಡಿರುತ್ತಾರೆ. ಸಂತೋಷಪಡುವ ಯೋಗ ಹಾಗೂ ಯೋಗ್ಯತೆ ಎರಡೂ ಇದ್ದರೂ ದುಃಖಪಡಲು ಹಾತೊರೆಯುತ್ತಿರುತ್ತಾರೆ. ಅಷ್ಟೇ ಅಲ್ಲ ತಮ್ಮ ಸುತ್ತ ಇರುವ ಅನೇಕರನ್ನು ದುಃಖದ ಕಡಲಲ್ಲಿ ಮುಳುಗಿಸಲು ಪ್ರಯತ್ನಿಸುತ್ತಿರುತ್ತಾರೆ. ನಮ್ಮ ಹತ್ತಿರದವರ ನೋವು ನಮ್ಮನ್ನು ಹಲವು ದಿನಗಳ ಕಾಲ ಬಾಧಿಸುತ್ತಿರುತ್ತದೆ. ಅಂದಮಾತ್ರಕ್ಕೆ ಜೀವನ ಪರ್ಯಂತ ಅವರನ್ನು ನೆನೆದು ರೋದಿಸಬೇಕಿಲ್ಲ. 'ಸರಸ ಜನನ, ವಿರಸ ಮರಣ, ಸಮರಸವೇ ಜೀವನ' ಎಂಬ ಕವಿವಾಣಿಯಂತೆ ಬದುಕನ್ನು ಬಂದಹಾಗೆ ಸ್ವೀಕರಿಸಿ, ಅರ್ಥಪೂರ್ಣವಾಗಿ ಕಳೆಯುವುದರಲ್ಲಿ ಸಾರ್ಥಕತೆ ಇರುತ್ತದೆ.

ಬಂದು ಕಾಡುವಂತೆ ವೈರಾಗ್ಯದ ಮಾತುಗಳನ್ನಾಡಿ ಮರಳು ಮಾಡಿಬಿಡುತ್ತಾರೆ. ಅಂಥವರಿಂದ ಆರೋಗ್ಯಕರ ಅಂತರ ಕಾಪಾಡಿಕೊಳ್ಳುವುದು ಮಾನಸಿಕ ಆರೋಗ್ಯಕ್ಕೆ ಕ್ಷೇಮಕರ.

ಭೂಮಿಯ ಮೇಲೆ ನಿತ್ಯ ನೂತನವಾಗಿ ಕಾಣುವ ಪ್ರಕೃತಿ ಸೊಬಗನ್ನು ಅನುಭವಿಸುತ್ತಾ, ನಿಸರ್ಗದಲ್ಲಿ ಸಿಗುವ ಫಲಗಳನ್ನು ಸವಿಯುತ್ತಾ ಬದುಕನ್ನು ಸುಂದರ ಪಯಣವಾಗಿಸಲು ಅವಕಾಶ ಎಲ್ಲರಿಗೂ ಇದೆ. ಆದರೆ ಅವುಗಳನ್ನೆಲ್ಲಾ ಬದಿಗೊತ್ತಿ ಸಾಯುವವರೆವಿಗೂ ಬದುಕು ಎಂಬುದು ಅನುಭವಿಸಲು ಬೇಕಾದ ಯಾತನೆ ಎಂದು ಭ್ರಮಿಸಿ ನಿತ್ಯ ನರಕ ಅನುಭವಿಸುವವರು ಇದ್ದಾರೆ. ಮನುಷ್ಯ ನಿಧನ ಹೊಂದಿದ ಮೇಲೆ ಸ್ವರ್ಗಕ್ಕೆ ಹೋಗುತ್ತಾನೋ, ನರಕಕ್ಕೆ ಹೋಗುತ್ತಾನೋ ಯಾರಿಗೂ ತಿಳಿಯದು. ಆದರೆ ಭೂಮಿಯ ಮೇಲೆ ಸ್ವರ್ಗ ಸದೃಶ ಬದುಕನ್ನು ಕಟ್ಟಿಕೊಳ್ಳುವ ಅವಕಾಶ ಎಲ್ಲರಿಗೂ ಇರುತ್ತದೆ. ಆದರೆ ಅದನ್ನು ನರಕವನ್ನಾಗಿಸಿ ನಿತ್ಯವೂ ನೋವು ತಿನ್ನುವವರಿಗೆ ಬುದ್ಧಿ ಹೇಳುವವರು ಯಾರು?

ಬದುಕು ಸುಂದರವಾಗಿ ಕಾಣಲು ನಮ್ಮ ದೃಷ್ಟಿಕೋನವನ್ನು ಬದಲಿಸಬೇಕು. ನಮ್ಮ ಪಕ್ಕದಲ್ಲಿಯೇ ಸುಂದರ ಝರಿ, ನದಿಗಳು ಹರಿಯುತ್ತಿದ್ದರೂ, ಅವುಗಳನ್ನು ನೋಡದೆ, ಅದರಲ್ಲಿ ಇಳಿದು ಆಟವಾಡದೇ, ಮೋರಿ ನೀರನ್ನು ನೋಡಿ ಮೂಗು ಮುಚ್ಚಿಕೊಂಡು ದೂರ ಹೋಗುವಂತೆ ಅನೇಕ ಜನರು ಒಳ್ಳೆಯದನ್ನು ನೋಡದೆ ಸದಾ ಕೆಟ್ಟದ್ದನ್ನೇ ನೋಡುತ್ತಾ ಇಡೀ ಪ್ರಪಂಚವೇ ಹೀಗೆ, ಇವುಗಳನ್ನು ನೋಡುವುದು ನಮ್ಮ ಕರ್ಮ ಎಂದು ಭಾವಿಸುವವರು ಇದ್ದಾರೆ. ಬದುಕೊಂದು ಸುಂದರ ಹೂದೋಟ. ಅದನ್ನು ನೋಡದೆ ಹೊರಟರೆ ಬದುಕೆಲ್ಲ ಬೆದಕಾಟ.


ಮನುಷ್ಯ ಜನ್ಮ ಎಂಬುದು ಪೂರ್ವ ಜನ್ಮದ ಕರ್ಮಫಲ ಎಂದು ಬಿಂಬಿಸುವ, ನಂಬಿಸುವ ಕೆಲವರು ಇದ್ದಾರೆ. ಆದರೆ ಮನುಷ್ಯ ಜನ್ಮ ಪೂರ್ವ ಜನ್ಮದ ಧರ್ಮ ಫಲ ಎಂದು ಭಾವಿಸಬೇಕು. ಇಂದು ಕಷ್ಟವಿದೆ ಎಂದ ಕಾರಣಕ್ಕೆ ಸಾಯುವವರೆವಿಗೂ ಕಷ್ಟವೇ ಇರುವುದಿಲ್ಲ. 'ಯಾವುದೂ ಶಾಶ್ವತವಲ್ಲ, ಎಲ್ಲವೂ ಸರಿದು ಹೋಗುತ್ತವೆ, ನಮ್ಮ ಕಷ್ಟಗಳು ಸಹ' ಎಂದು ಜಗತ್ತು ಕಂಡ ಹಾಸ್ಯ ಕಲಾವಿದ ಚಾರ್ಲಿ ಚಾಪ್ಲಿನ್‌ನ ಹೇಳಿದ್ದಾರೆ. ಹಾಗೆ ಸುಖ ಸಂತೋಷಗಳು ಸಹ ಸರಿದು ಹೋಗುತ್ತವೆ. ಕರಗಿ ಹೋಗುವ ಮುನ್ನ ಐಸ್ ಕ್ಯಾಂಡಿಯನ್ನು ಸವಿಯುವಂತೆ ಸರಿದು ಹೋಗುವ ಮುನ್ನ ಸುಖ ಸಂತೋಷಗಳನ್ನು ಅನುಭವಿಸಿ ಸಂಭ್ರಮಿಸಬೇಕು.

ಹೇಳುವವರು ಸಾವಿರ ಹೇಳಲಿ. ಈ ಬದುಕು ನಮ್ಮದು, ಅದನ್ನು ಅನುಭವಿಸುವ ಹಕ್ಕು ಸಹ ನಮ್ಮದೇ, ಯಾರದೋ ಹೇಳಿಕೆಗೆ ನಮ್ಮ ಬದುಕನ್ನು ಬಲಿಕೊಡಬಾರದು. ದುರಾಲೋಚನೆ, ದುಷ್ಕೃತ್ಯ, ದುರಾಸೆ, ದುರಾಚಾರದಿಂದ ಬದುಕದೆ ಪ್ರಜ್ಞಾವಂತಿಕೆಯಿಂದ ಸ್ವಸ್ಥ ಸಮಾಜ ನಿರ್ಮಾಣಕ್ಕೆ ಶ್ರಮಿಸುವಂತೆ ಬದುಕಲು ಪ್ರವಚನ, ಉಪನ್ಯಾಸ, ಉಪದೇಶಗಳನ್ನು ಆಲಿಸಬೇಕು. 'ಬರುವಾಗಲು ಬೆತ್ತಲೆ, ಹೋಗುವಾಗಲು ಬೆತ್ತಲೆ' ಎಂಬ ವೇದಾಂತ ಕೇಳಲು ಬಲುಚೆನ್ನ. ಆದರೆ ಬದುಕಿರುವಾಗ ಬೆತ್ತಲೆ ಇರಲು ಸಾಧ್ಯವಿಲ್ಲ ಅಲ್ಲವೇ? ಹಾಗಾಗಿ ಬದುಕಿನ ಸೌಖ್ಯಕ್ಕೆ ಎಷ್ಟು ಬೇಕೋ ಅಷ್ಟು ದುಡಿದು ನೆಮ್ಮದಿಯ ಬದುಕನ್ನು ಕಂಡುಕೊಳ್ಳಬೇಕು. ಎಲ್ಲವನ್ನೂ ತ್ಯಜಿಸಿ, ಸಂತೋಷಮಯವಾದ ಬದುಕಿಗೆ ಬೆನ್ನುಮಾಡಿ ವೈರಾಗ್ಯದಿಂದ ಬದುಕುವುದು ಅಗತ್ಯವಿಲ್ಲ. ಉಪದೇಶ ನೀಡುವವರು ಸಹ ಜನರು ಸಂತೋಷದಿಂದ ಬದುಕಲು ಅಗತ್ಯವಾದ ಜೀವನ ಕ್ರಮ ರೂಢಿಸಿಕೊಳ್ಳಲು ತಿಳಿಸಬೇಕು.

ಪದ ತಾಂಬೂಲ:

ತಿಳಿದಿದ್ದರೆ ಬದುಕುವ ಕಲೆ,
ನಿತ್ಯ ಸಿಗುವುದು ಸಂತೋಷದ ಸೆಲೆ

ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಸಾಂಗವಾಗಿ ನೆರವೇರಿದ ಸಾಮೂಹಿಕ ಶ್ರೀ ಸತ್ಯನಾರಾಯಣ ವ್ರತ





ಮೈಸೂರು, ಮೇ 19–ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಭಾನುವಾರ ಸಾಮೂಹಿಕ ಶ್ರೀ ಸತ್ಯನಾರಾಯಣ ವ್ರತ ಸಾಂಗವಾಗಿ ನೆರವೇರಿತು.

ಆಶ್ರಮದ ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರದ ರಜತೋತ್ಸವ ಪ್ರಯುಕ್ತ ನಡೆದ ಶ್ರೀ ಸತ್ಯನಾರಾಯಣ ವ್ರತದಲ್ಲಿ ಮೈಸೂರು ಸೇರಿದಂತೆ ರಾಜ್ಯ, ಹೊರ ರಾಜ್ಯಗಳಿಂದ ಬಂದಿದ್ದ ಸಾವಿರಕ್ಕೂ ಅಧಿಕ ದಂಪತಿಗಳು ಪಾಲ್ಗೊಂಡಿದ್ದರು.

ಬೆಳಗ್ಗೆ ಗಣಪತಿ ಹೋಮದೊಂದಿಗೆ ಸತ್ಯನಾರಾಯಣ ವ್ರತವನ್ನು ಪ್ರಾರಂಭಿಸಲಾಯಿತು. ಅವಧೂತದತ್ತ ಪೀಠದ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಅವರು ಜ್ಯೋತಿ ಬೆಳಗಿಸಿ ಸಾಮೂಹಿಕ ಸತ್ಯನಾರಾಯಣ ಪೂಜಾಕಾರ್ಯಕ್ಕೆ ಚಾಲನೆ ನೀಡಿದರು. ಸಂತೋಷ್ ಘನಪಾಟಿ ಮತ್ತು ಅವರ ಶಿಷ್ಯರ ನೇತೃತ್ವದಲ್ಲಿ ವ್ರತ ಯಶಸ್ವಿಯಾಗಿ ನೆರವೇರಿತು. ಅವಧೂತ ದತ್ತಪೀಠದ ವತಿಯಿಂದಲೇ ಉಚಿತವಾಗಿ ಸತ್ಯನಾರಾಯಣ ವ್ರತವನ್ನು ಶಾಸ್ತ್ರೋಕ್ತವಾಗಿ ಏರ್ಪಡಿಸಿದ್ದಲ್ಲದೆ, ಈ ಪುಣ್ಯಕಾರ್ಯಕ್ಕೆ ಬೇಕಾದಂತಹ ಸಕಲ ಪೂಜಾ ಸಾಮಗ್ರಿಗಳು ಮತ್ತು ಪ್ರಸಾದವನ್ನು ಕೂಡ ಒದಗಿಸಿದುದು ನಿಜಕ್ಕೂ ವಿಶೇಷವಾಗಿತ್ತು.

ಈ ವೇಳೆ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಆಶೀರ್ವಚನ ನೀಡಿ, ಶ್ರೀ ಸತ್ಯನಾರಾಯಣ ವ್ರತ ಆಚರಿಸುವುದರಿಂದ ಮನುಷ್ಯರ ದುಃಖ–ದುಮ್ಮಾನಗಳು ದೂರವಾಗಲಿವೆ ಎಂದು ನುಡಿದರು.

ಮೇ 20ರಿಂದ 28ರವರೆಗೂ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಪ್ರತಿದಿನ ಶ್ರೀಚಕ್ರ ಪೂಜೆ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿ ಕೊಳ್ಳಲಾಗಿದೆ.

ಸಂಸಾರದಲ್ಲಿ ಸುಖ– ದುಃಖ ಎರಡೂ ಇರಬೇಕು. ಸದಾ ಸತ್ಯವನ್ನೇ ನುಡಿಯಬೇಕು. ಸಾಧ್ಯವಾದಷ್ಟೂ ಒಳಿತನ್ನೇ ಮಾಡಬೇಕು ಎಂದು ಹೇಳಿದರು.

ಪ್ರಪಂಚದಲ್ಲಿ ನಮ್ಮ ಆಶ್ರಮಗಳು ಬಹಳಷ್ಟು ಇವೆ. ಆದರೆ ನನಗೆ ನಮ್ಮ ಮೈಸೂರಿನ ಕಾವೇರಿ ನದಿ ಬಿಟ್ಟು ಹೋಗಲು ಮನಸ್ಸಿಲ್ಲ. ಆದರೆ ಕೆಲವರು ಕಾವೇರಿ ನದಿಯಲ್ಲಿ ನೀರೇ ಇಲ್ಲ ಎನ್ನುತ್ತಾರೆ. ಈಗ ಒಳ್ಳೆಯ ಮಳೆ ಆಗುತ್ತಿದೆ. ಎಲ್ಲಾ ಕಷ್ಟಗಳು ದೂರವಾಗಲಿವೆ ಎಂದು ಗಣಪತಿ ಸಚ್ಚಿದಾನಂದ ಸ್ವಾಮೀಜಿ ಆಶಿಸಿದರು.

ಪ್ರತಿ ವರ್ಷ ಈ ರೀತಿಯ ಸಾಮೂಹಿಕ ಸತ್ಯನಾರಾಯಣ ಪೂಜೆ ನಡೆಯಬೇಕು. ಹಾಗೆಯೇ ಆಶ್ರಮದಲ್ಲಿ ಪ್ರತಿದಿನ ಸಂಜೆ ಸತ್ಸಂಗ ನಡೆಯಬೇಕು ಎಂಬ ಆಶಯವಿದೆ. ಇದೆಲ್ಲದರಲ್ಲೂ ಹೆಚ್ಚು ಹೆಚ್ಚು ಭಕ್ತರು ಭಾಗವಹಿಸಬೇಕು ಎಂದರು.

ಹಿಂದುಗಳಲ್ಲಿ ಹಣೆಗೆ ಕುಂಕುಮದ ಬೊಟ್ಟು ಇಡುವ ಅಭ್ಯಾಸವಿದೆ. ಇದು ಅತ್ಯಂತ ಒಳ್ಳೆಯ ಪದ್ಧತಿ. ಹೀಗೆ ಕುಂಕುಮವನ್ನು ಹಣೆಯಲ್ಲಿ ಇಡುವುದರಿಂದ ಸದಾ ದೇವರ ಆಶೀರ್ವಾದ ನಿಮ್ಮ ಮೇಲಿರುತ್ತದೆ ಎಂದು ಶ್ರೀಗಳು ಸಲಹೆ ನೀಡಿದರು.

ಸಂಜೆ 6.30ಕ್ಕೆ ಶ್ರೀ ದತ್ತ ವೆಂಕಟೇಶ್ವರ ಸ್ವಾಮಿಗೆ ಪುಷ್ಪಾಲಂಕಾರ, ಶೇಷ ವಾಹನೋತ್ಸವ, ಶಾಂತಿಪಾಠ ಮತ್ತು ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರದ ರಜತ ಮಹೋತ್ಸವ ನಡೆಯಿತು. ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 82ನೇ ಜನ್ಮದಿನೋತ್ಸವ ಮತ್ತು ನಾದಮಂಟಪದ 26ನೇ ವಾರ್ಷಿಕೋತ್ಸವ ಕೂಡ ನಡೆಯಲಿದ್ದು, ಇದರ ಪ್ರಯುಕ್ತ ಅವಧೂತ ದತ್ತ ಪೀಠದಲ್ಲಿ ಇಂದಿನಿಂದ ವಿವಿಧ ಪೂಜಾ ಕಾರ್ಯಕ್ರಮಗಳು ಪ್ರಾರಂಭವಾದವು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಸಾಹಿತಿಗಳು ಅಕ್ಷರವ ಅಹಂಕಾರದ ಆಯುಧವಾಗಿ ಬಳಸದೇ ಅರಿವು ವಿಸ್ತರಿಸುವ ಅಂತಃಕರಣವಾಗಿ ಬಳಸಬೇಕು

- ಹಿರಿಯ ಸಾಹಿತಿ ಬರಗೂರು ರಾಮಚಂದ್ರಪ್ಪ ಕಿವಿಮಾತು
- ಪ್ರೊ.ಸಿ.ಪಿ.ಸಿದ್ಧಾಶ್ರಮರ ಮೂರು ಕೃತಿಗಳ ಲೋಕಾರ್ಪಣೆ



ಮೈಸೂರಿನ ವಿಜಯನಗರದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಭಾನುವಾರ ಪ್ರೊ.ಸಿ.ಪಿ.ಸಿದ್ಧಾಶ್ರಮ ಅವರ '110 ಆಧುನಿಕ ವಚನಗಳು', 'ನೆಲದ ಮರೆಯ ನಿಧಾನ', 'ನಾನೆಂಬುದು ನಾನಲ್ಲ' ಕೃತಿಗಳನ್ನು ವಿದ್ವಾಂಸ ಪ್ರೊ.ರಾಮೇಗೌಡ(ರಾಗೌ) ಬಿಡುಗಡೆ ಮಾಡಿದರು.

ಮೈಸೂರು,ಮೇ 19(ಎಂಟಿವೈ)– ಸಾಹಿತಿಗಳು ಅಕ್ಷರವನ್ನು ಸಾಮಾಜಿಕ ಕಳಕಳಿಯಿಂದ ನೋಡಬೇಕು. ಯಾರೇ ಆಗಲೀ ಅಕ್ಷರವನ್ನು ಅಹಂಕಾರದ ಆಯುಧವಾಗಿ ಬಳಸದೇ, ಅರಿವು ವಿಸ್ತರಿಸುವ ಅಂತಃಕರಣವಾಗಿ ಬಳಸಬೇಕು ಎಂದು ಹಿರಿಯ ಸಾಹಿತಿ ಬರಗೂರು ರಾಮಚಂದ್ರಪ್ಪ ಸಲಹೆ ನೀಡಿದ್ದಾರೆ.

ಮೈಸೂರಿನ ವಿಜಯನಗರದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಭಾನುವಾರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ರಚನ ಪ್ರಕಾಶನದ ಸಹಯೋಗದಲ್ಲಿ ಆಯೋಜಿಸಿದ್ದ ಪ್ರೊ.ಸಿ.ಪಿ.ಸಿದ್ಧಾಶ್ರಮ ಅವರ '110 ಆಧುನಿಕ ವಚನಗಳು', 'ನೆಲದ ಮರೆಯ ನಿಧಾನ', 'ನಾನೆಂಬುದು ನಾನಲ್ಲ' ಕೃತಿಗಳ ಬಿಡುಗಡೆ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಅಕ್ಷರಕ್ಕೆ ತನ್ನದೇ ಆದ ಮಹತ್ವ ಇದೆ. ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ಚಳವಳಿಗಳ ಪರಿಣಾಮ, ಶೋಷಿತ ಸಮುದಾಯ, ತಳ ಸಮುದಾಯದ ಜನ ಅಕ್ಷರ ಕಲಿಯುವುದಕ್ಕೆ ಅವಕಾಶ ಸಿಕ್ಕಿತು. ಹಾಗಾಗಿ ಅಕ್ಷರವು ಅರಿವು ಪಸರಿಸುವುದಕ್ಕೆ ಬಳಸಬೇಕು ಎಂದರು.

ಇತ್ತೀಚಿನ ದಿನಗಳಲ್ಲಿ ಮೇಷ್ಟ್ರು(ಶಿಕ್ಷಕರು) ಸ್ಥಾನ ಕಡಿಮೆಯಾಗಿ ಪ್ರಾಧ್ಯಾಪಕರ ಮಾನ ಹೆಚ್ಚಾಗಿದೆ. ಆ ಕಾರಣದಿಂದ ಪ್ರಾಧ್ಯಾಪಕರ ಹುದ್ದೆಗಾಗಿ ಪೈಪೋಟಿ ಏರ್ಪಟ್ಟಿದೆ. ಶಿಕ್ಷಣ ಕ್ಷೇತ್ರ ಸೇವಾ ಕ್ಷೇತ್ರವಾಗಿ ಉಳಿಯದೇ ಉದ್ಯಮವಾಗಿ ಮಾರ್ಪಟ್ಟಿದೆ. ಗ್ಯಾಟ್ ಒಪ್ಪಂದದ ಪ್ರಕಾರ ಶಿಕ್ಷಣ ಕ್ಷೇತ್ರವನ್ನು ಉದ್ದಿಮೆಯಾಗಿ ದಾಖಲು ಮಾಡಲಾಗಿದೆ. ಪ್ರಾಧ್ಯಾಪಕರು ಶೈಕ್ಷಣಿಕ ಕಾರ್ಖಾನೆಯ ಕೆಲಸಗಾರರು, ವಿದ್ಯಾರ್ಥಿಗಳು ಗ್ರೈಡ್ ಎಂಬಂತಾಗಿದೆ ಇದು ವರ್ತಮಾನದ ಶಿಕ್ಷಣದ ಪರಿಸ್ಥಿತಿ ಎಂದು ಬೇಸರ ವ್ಯಕ್ತಪಡಿಸಿದರು.

ಲೇಖಕರಿಗೆ ಶ್ರೇಷ್ಠತೆಯ ಸೊಕ್ಕು ಇದ್ದರೆ ಹೊಸ ನೋಟ ದಕ್ಕುವುದಿಲ್ಲ. ಮ್ಯಾಕ್ಸಿಂ ಗಾರ್ಕಿ ಲೇಖಕ ತನ್ನ ಕಾಲದ ಕಿವಿ, ಕಣ್ಣು, ಹೃದಯವಾಗಬೇಕು ಎಂದಿದ್ದಾನೆ. ಆದರೆ, ಇವತ್ತು ಕಿವಿ, ಕಣ್ಣು, ಹೃದಯ ಇಲ್ಲವಾಗಿ ನಾಲಿಗೆ ದೊಡ್ಡದಾಗಿ, ನಾಗನ ನಾಲಿಗೆ ಕಾಣುತ್ತಿದ್ದೇವೆ. ಲೇಖಕನಿಗೆ ಅಂತರ್ಶಿಸ್ತೀಯ ಅಧ್ಯಯನ ಅವಶ್ಯ ರಾಜಕೀಯ ಪ್ರಜ್ಞೆಯೂ ಇರಬೇಕು. ಚರಿತ್ರೆಯೂ ಗೊತ್ತಿರಬೇಕು. ಮಾನವ ಶಾಸ್ತ್ರ, ಸಮಾಜಶಾಸ್ತ್ರ, ಸಾಮಾ ಜಿಕತೆ ಒಳಗೊಂಡ ಬದುಕೇ ಸಾಹಿತ್ಯ. ಸಾಮಾಜಿಕ ಅಂತಃಕರಣ ಅವಶ್ಯ ಎಂದು ತಿಳಿಸಿದರು.

ಪ್ರೊ.ಸಿ.ಪಿ. ಸಿದ್ಧಾಶ್ರಮರನ್ನು ಶ್ರದ್ಧಾಶ್ರಮ ಎಂದು ಕರೆಯುತ್ತೇನೆ. ಯಾವುದೇ ಕೆಲಸ ಒಪ್ಪಿಕೊಂಡರೂ ಪೂರ್ಣ ಶ್ರದ್ಧೆ ತೋರುತ್ತಾರೆ. ಕಾವ್ಯ ಸ್ವರೂಪಿಯಾದ ಅವರ ಬರವಣಿಗೆಯಲ್ಲಿ ಸಾಮಾಜಿಕ ಕಾಳಜಿ–ಕಳಕಳಿ ಇದೆ. ಪ್ರೊ.ಸಿ.ಪಿ.ಸಿದ್ಧಾಶ್ರಮ ಅವರು ಸಮಾಜವಾದ ಮತ್ತು ವಿಚಾರವಾದಿಗಳನ್ನು ಟೀಕಿಸಿದ್ದಾರೆ. ಎಲ್ಲ ಸಮಾಜವಾದಿಗಳನ್ನು ಒಂದೇ ದೃಷ್ಟಿಕೋನದಲ್ಲಿ ಅಳತೆ ಮಾಡುವ ಅಗತ್ಯವಿಲ್ಲ. ಇಂದು ಸಮಾಜವಾದ ಸಂವಿಧಾನದಲ್ಲಿ ಮಾತ್ರ ಉಳಿದಿದೆ. ಮಾನವೀಯತೆ–ಮತೀಯತೆ ಹೆಚ್ಚಾಗುತ್ತಿದೆ. ಸಾಮಾಜಿಕ ವಿವೇಕ ಆರ್ಥಿಕ ವಿವೇಕವಾಗಿದೆ ಸತ್ಯ ಸುಳ್ಳನ್ನು ಆಮಿಸಿದೆ ಜಾತಿ ವಿನಾಶದ ಬದಲು ವಿಕಾಸವಾಗುತ್ತಿದೆ. ಪ್ರಜಾಪ್ರಭುತ್ವ ಸರ್ವಾಧಿಕಾರವಾಗುತ್ತಿದೆ. ಈ ಸಂಕಟ ಕಾಲದಲ್ಲಿ ಸೈದ್ಧಾಂತಿಕವಾಗಿ ಎಚ್ಚರವಾಗಿರುವುದು ಅವಶ್ಯ ಎಂದು ಸಲಹೆ ನೀಡಿದರು.

ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ವಿದ್ವಾಂಸ ಪ್ರೊ.ರಾಮೇಗೌಡ(ರಾಗೌ) ಪ್ರೊ.ಸಿ.ಪಿ. ಸಿದ್ಧಾಶ್ರಮ ಅವರ ನಾಲ್ಕು ಕೃತಿಗಳನ್ನು ಬಿಡುಗಡೆ ಮಾಡಿದರು. ಕಾರ್ಯಕ್ರಮದಲ್ಲಿ ಪ್ರೊ.ಎಂ.ಎಚ್.ರುದ್ರಮುನಿ, ಡಾ.ಆರ್.ಗುರುಸ್ವಾಮಿ, ಡಾ.ಅನಿತಾ ಎಂ.ಎಸ್ ಕೃತಿ ಕುರಿತು ಮಾತನಾಡಿದರು. ಸಾಹಿತಿ ಪ್ರೊ.ಕೆ. ತಿಮ್ಮಯ್ಯ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ, ಪ್ರಕಾಶಕ ಕೆ.ಸಿ. ಓಂಕಾರಪ್ಪ ಇದ್ದರು. ಡಾ.ವಾದಪ್ಪ ಜಿ ನಿರೂಪಿಸಿದರು. ಶೇಷಣ್ಣ ಮತ್ತು ತಂಡದವರು ಪ್ರಾರ್ಥಿಸಿದರು.

ಸ್ಕೂಟಿಯಲ್ಲಿ ಹೋಗುತ್ತಿದ್ದ ಮಹಿಳೆ ಕೆಳಗೆ ಬೀಳಿಸಿ ಮಾಂಗಲ್ಯ ಸರ ಕದ್ದೊಯ್ದ ಖದೀಮರು

ಮೈಸೂರು, ಮೇ 19(ಎಸ್‌ಬಿಡಿ)– ಇಬ್ಬರು ಖದೀಮರು ಸ್ಕೂಟಿ ಅಡ್ಡಗಟ್ಟಿ, ಮಹಿಳೆ ಮೇಲೆ ಹಲ್ಲೆ ನಡೆಸಿ ಮಾಂಗಲ್ಯ ಸರವನ್ನು ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಮೈಸೂರಿನ ಉತ್ತನಹಳ್ಳಿ ರಿಂಗ್ ರಸ್ತೆಯಲ್ಲಿ ಶನಿವಾರ ರಾತ್ರಿ ನಡೆದಿದೆ.

ಮೈಸೂರು ಹೊರವಲಯದ ಹೊಸಹುಂಡಿ ಗ್ರಾಮದ ನಮಿತಾ(29) ಅವರ ಸುಮಾರು 50 ಗ್ರಾಂ ಚಿನ್ನದ ಮಾಂಗಲ್ಯ ಸರ ಖದೀಮರ ಪಾಲಾಗಿದೆ. ಲಲಿತಾದ್ರಿಪುರ ರಸ್ತೆಯಲ್ಲಿನ ಖಾಸಗಿ ಆಯುರ್ವೇದಿಕ್ ಸೆಂಟರ್‌ನಲ್ಲಿ ರಿಸೆಪ್ಷನಿಸ್ಟ್ ಆಗಿರುವ ಅವರು ಕೆಲಸ ಮುಗಿಸಿಕೊಂಡು ಶನಿವಾರ ರಾತ್ರಿ 7.15ರ ಸುಮಾರಿಗೆ ಸ್ಕೂಟಿಯಲ್ಲಿ ಹೊಸಹುಂಡಿಗೆ ತೆರಳುತ್ತಿದ್ದಾಗ ಈ ಘಟನೆ ನಡೆದಿದೆ.

ನಮಿತಾ ಅವರು ಮಾರ್ವೆಲ್ ಪಿಯು ಕಾಲೇಜಿನ ಜಂಕ್ಷನ್‌ನಲ್ಲಿ ರಿಂಗ್‌ರಸ್ತೆ ಕಡೆಗೆ ತಿರುಗಿ, ಉತ್ತನಹಳ್ಳಿ ಕಡೆಗೆ ಹೋಗುವ ರಿಂಗ್ ರಸ್ತೆಗೆ ತಿರುವು ಪಡೆಯುವ ವೇಳೆ ಇಬ್ಬರು ಖದೀಮರು ಬೈಕ್‌ನಲ್ಲಿ ಹಿಂಬಾಲಿಸಿದ್ದಾರೆ. ಸ್ವಲ್ಪ ದೂರ ಸಾಗುತ್ತಿದ್ದಂತೆ ಸರ್ವೀಸ್ ರಸ್ತೆಯಲ್ಲಿ ನಮಿತಾ ಸ್ಕೂಟಿಗೆ ಅಡ್ಡಬಂದಿದ್ದಾರೆ. ಇದರಿಂದ ಹೆದರಿದ ನಮಿತಾ ವೇಗವಾಗಿ ವಾಹನ ಓಡಿಸಲು ಮುಂದಾದಾಗ ಬೈಕ್ ಹಿಂಬದಿಯಲ್ಲಿದ್ದ ಖದೀಮ ಕೆಳಗಿಳಿದು ಸ್ಕೂಟಿಗೆ ಕಾಲಿನಿಂದ ಒದ್ದಿದ್ದಾನೆ ಇದರಿಂದ ನಮಿತಾ ಸರ್ವೀಸ್ ರಸ್ತೆಯ ಚರಂಡಿ ಪಕ್ಕ ಬಿದ್ದಿದ್ದಾರೆ. ಈ ವೇಳೆ ಏಕಾಏಕಿ ಅವರ ಕೊರಳಲ್ಲಿದ್ದ ಮಾಂಗಲ್ಯ ಸರವನ್ನು ಕಿತ್ತುಕೊಂಡು ಸಹಚರ ನಿಲ್ಲಿಸಿ ಕೊಂಡಿದ್ದ ಬೈಕ್ ಹತ್ತಿ ಪರಾರಿಯಾಗಿದ್ದಾನೆ ಈ ಸಂಬಂಧ ನಮಿತಾ ನೀಡಿರುವ ದೂರಿ ನನ್ವಯ ಆಲನಹಳ್ಳಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಖದೀಮರ ಪತ್ತೆಗೆ ಶೋಧ ನಡೆಸಿದ್ದಾರೆ

'ಪುಟ್ಟಕ್ಕನ ಮಕ್ಕಳು' ಧಾರಾವಾಹಿ ದೃಶ್ಯಕ್ಕೆ ಹೋಲಿಸಿ ನಿಂದನೆ: ಪತಿ, ಅತ್ತೆ–ಮಾವನ ವಿರುದ್ಧ ದೂರು

ಮೈಸೂರು, ಮೇ 19(ಎಸ್‌ಪಿಎನ್)– ಸಿರಿಯಲ್ ಒಂದರ ದೃಶ್ಯಕ್ಕೆ ಹೋಲಿಸಿ ಪತ್ನಿಯನ್ನು ಹಂಗಿಸಿ, ಹಲ್ಲೆ ನಡೆಸಿದ ಪತಿ ಹಾಗೂ ಅತ್ತೆ–ಮಾವನ ವಿರುದ್ಧ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ಗುರುರಾಜ ಬಡಾವಣೆಯ ನಿವಾಸಿ ವಸಂತಕುಮಾರಿ ಎಂಬುವರು ತನ್ನ ಪತಿ ಗಿರೀಶ್, ಅತ್ತೆ ಲಲಿತಮ್ಮ ಹಾಗೂ ಮಾವ ವೆಂಕಟೇಶ ವಿರುದ್ಧ ದೂರು ದಾಖಲಿಸಿದ್ದಾರೆ. ಕೆಲಸ ಮಾಡದೆ ಮನೆಯಲ್ಲಿರುವ ತನ್ನ ಪತಿ ಗಿರೀಶ್, ಮಾನಸಿಕವಾಗಿ ಕಿರುಕುಳ ನೀಡುವುದಲ್ಲದೆ ಜೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುವ ಪುಟ್ಟಕ್ಕನ ಮಕ್ಕಳು ಸಿರಿಯಲ್ ದೃಶ್ಯಕ್ಕೆ ನನ್ನ ಹೋಲಿಸಿ, ಹಂಗಿಸಿ ಹಲ್ಲೆ ಮಾಡಿದ್ದು ಅದಕ್ಕೆ ನನ್ನ ಅತ್ತೆ–ಮಾವ ಕೂಡ ಸಹಕರಿಸಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಬಿಭವ್ ಕುಮಾರ್‌ಗೆ 5 ದಿನಗಳ ಪೊಲೀಸ್ ಕಸ್ಟಡಿ

ನವದೆಹಲಿ: ಆಮ್ ಆದ್ಮಿ ಪಕ್ಷದ ಸಂಸದೆ ಸ್ವಾತಿ ಮಾಲೀವಾಲ್ ಮೇಲಿನ ಹಲ್ಲೆ ಪ್ರಕರಣದಲ್ಲಿ ದೆಹಲಿ ಸಿಎಂ ಕೇಜ್ರಿವಾಲ್ ಅವರ ಆಪ್ತ ಬಿಭವ್ ಕುಮಾರ್‌ಗೆ 5 ದಿನಗಳ ಪೊಲೀಸ್ ಕಸ್ಟಡಿ ವಹಿಸಲಾಗಿದೆ. ಪ್ರಕರಣದಲ್ಲಿ ಪೊಲೀಸ್ ರಿಮ್ಯಾಂಡ್ ಅಗತ್ಯವಿದೆ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ. ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಗೌರವ್ ಗೋಯಲ್ ದೆಹಲಿ ಪೊಲೀಸ್ ಅರ್ಜಿ ವಿಚಾರಣೆ ನಡೆಸಿದೆ. ಪೊಲೀಸ್ ಅಧಿಕಾರಿಗಳು ಬಿಭವ್‌ಕುಮಾರ್ ಅನ್ನು 7 ದಿನಗಳ ಕಸ್ಟಡಿಗೆ ಕೇಳಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23





ಮೈಸೂರು ಮಿತ್ರ ಸೋಮವಾರ 20 ಮೇ 2024

ಮಂಡ್ಯದಲ್ಲಿ ನನ್ನ ಗೆಲುವು ನಿಶ್ಚಿತ

ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು ಅತೀವ ವಿಶ್ವಾಸ

ಕೆ.ಆರ್.ಪೇಟೆ,ಮೇ.19: ಮಂಡ್ಯ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಾ ಕಣದಲ್ಲಿದ್ದ ನಾನು ಗೆಲ್ಲುವುದು ನಿಶ್ಚಿತವಾಗಿದೆ. ರಾಜ್ಯ ಸರ್ಕಾರವು ಅನುಷ್ಠಾನಗೊಳಿಸಿರುವ ಪಂಚ ಗ್ಯಾರಂಟಿ ಕಾರ್ಯಕ್ರಮಗಳು ನನ್ನ ಭರ್ಜರಿ ಗೆಲುವಿಗೆ ಶ್ರೀರಕ್ಷೆಯಾಗಿವೆ. ರಾಜಕೀಯ ರಂಗಕ್ಕೆ ಹೊಸದಾಗಿ ಪಾದಾರ್ಪಣೆ ಮಾಡಿರುವ ನನಗೆ ರಾಜಕಾರಣದ ಒಳ-ಹೊರಗುಗಳು ಗೊತ್ತಿಲ್ಲ. ಜಿಲ್ಲೆಯ ಜನತೆ ಒಂದು ಅವಕಾಶ ನೀಡಿದರೆ ಪ್ರಾಮಾಣಿಕವಾಗಿ ಜನರ ಸೇವೆ ಮಾಡಿ ಜಿಲ್ಲೆಯನ್ನು ಮಾದರಿ ಜಿಲ್ಲೆಯನ್ನಾಗಿ ಮಾಡಿ ಅಭಿವೃದ್ಧಿಪಡಿಸಿ ಸಾಧಿಸಿ ತೋರಿಸುತ್ತೇನೆ ಎಂದು ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಹೇಳಿದರು.

ಅವರು ಕೆ.ಆರ್.ಪೇಟೆ ತಾಲೂಕಿನ ಸಂತೇಬಾಚಹಳ್ಳಿ ಹೋಬಳಿಯ ಆದಿಹಳ್ಳಿ ಗ್ರಾಮದಲ್ಲಿ ನಡೆದ ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮನ್ನು ಭೇಟಿಯಾದ ಪತ್ರಕರ್ತರೊಂದಿಗೆ ಮಾತನಾಡಿ, ತಮ್ಮ ಗೆಲುವಿನ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದರು.

ರಾಜಕಾರಣದಲ್ಲಿ ಯಾರೂ ಶಾಶ್ವತವಾದ ಶತ್ರುಗಳಲ್ಲ, ಹಾಗೆಯೇ ಯಾರೂ ಮಿತ್ರರಲ್ಲ ಎಂಬ ಸತ್ಯವು ನನಗೆ ಚೆನ್ನಾಗಿ ಗೊತ್ತಿದೆ. ಮಾಜಿ ಮುಖ್ಯಮಂತ್ರಿ ಹೆಚ್.ಡಿ.



ತಾಲೂಕಿನ ಸಂತೇಬಾಚಹಳ್ಳಿ ಹೋಬಳಿಯ ಆದಿಹಳ್ಳಿ ಗ್ರಾಮದಲ್ಲಿ ನಡೆದ ಖಾಸಗಿ ಕಾರ್ಯಕ್ರಮದಲ್ಲಿ ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್‌ಚಂದ್ರು ಭಾಗವಹಿಸಿದ್ದರು.

ಕುಮಾರಸ್ವಾಮಿ ಅವರೊಂದಿಗೆ ಆತ್ಮೀಯ ಒಡನಾಟ ಹೊಂದಿರುವ ನಾನು ಅವರ ಗಮನಕ್ಕೆ ತಂದೇ ಮಂಡ್ಯ ಲೋಕಸಭಾ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡಿದೆ. ನಾನು ಭೇಟಿ ಮಾಡಿದಾಗ ನೀವು ಸ್ಪರ್ಧೆ ಮಾಡಿ ನಾನಾಗಲೀ ಅಥವಾ ನನ್ನ ಮಗ ನಿಖಿಲ್ ಆಗಲಿ ಮಂಡ್ಯದಿಂದ ಸ್ಪರ್ಧೆ ಮಾಡಲ್ಲ. ಹೊಸದಾಗಿ ರಾಜಕಾರಣಕ್ಕೆ ಪಾದಾರ್ಪಣೆ ಮಾಡುತ್ತಿದ್ದೀರಿ ಎಂದು ನನಗೆ ಶುಭವಾಗಲಿ ಎಂದು ಹರಸಿ ಆಶೀರ್ವದಿಸಿ ಕಳಿಸಿದರು. ದಿನಕಳೆದಂತೆ ಜಿಲ್ಲೆಯ ರಾಜಕೀಯ ಚಿತ್ರಣವೇ ಬದಲಾಗಿ ಹೋಯಿತು. ನಾನು ಸ್ಪರ್ಧೆ ಮಾಡಲ್ಲ ಎಂದು ಹೇಳಿದ್ದ ಕುಮಾರಣ್ಣ ಬಿಜೆಪಿ-ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಅಖಾಡಕ್ಕಿಳಿದರು. ಆ ವೇಳೆಗಾಗಲೇ ನನ್ನ ಹೆಸರು ಮಂಡ್ಯ ಕ್ಷೇತ್ರಕ್ಕೆ ಕಾಂಗ್ರೆಸ್ ಪಕ್ಷದಿಂದ ಘೋಷಣೆಯಾಗಿತ್ತು. ಮಂಡ್ಯ ಲೋಕಸಭಾ ಕ್ಷೇತ್ರದ ವ್ಯಾಪ್ತಿಯ ಎಲ್ಲಾ 8 ವಿಧಾನಸಭಾ ಕ್ಷೇತ್ರಗಳಲ್ಲಿ ಸಂಚಾರ ಮಾಡಿ, ನನ್ನ ಪರಿಚಯ ಮಾಡಿಕೊಂಡು ಪ್ರಚಾರ ಕಾರ್ಯವನ್ನು ಅರ್ಧ ಮಾಡಿ ಆಗಿತ್ತು. ಇಂತಹ ಸಂದರ್ಭದಲ್ಲಿ ನಾನು ಸ್ಪರ್ಧೆಯಿಂದ ಹಿಂದೆ ಸರಿಯುವ ಪ್ರಶ್ನೆಯೇ ಇರಲಿಲ್ಲ. ಸೋಲು-ಗೆಲುವುಗಳನ್ನು ಲೆಕ್ಕಾಚಾರ ಹಾಕಿಕೊಂಡೇ ಚುನಾವಣೆಗೆ ಸ್ಪರ್ಧೆ ಮಾಡಿದ್ದೇನೆ. ಚುನಾವಣೆಯಲ್ಲಿ ಸ್ಪರ್ಧೆ ಮಾಡಿದವರೆಲ್ಲರೂ ಗೆಲ್ಲಲು ಆಗುವುದಿಲ್ಲ. ಅಂತೆಯೇ ಮುಖ್ಯಮಂತ್ರಿ ಸಿದ್ಧರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಜಿಲ್ಲಾ ಉಸ್ತುವಾರಿ ಮಂತ್ರಿ ಎನ್.ಚೆಲುವರಾಯಸ್ವಾಮಿ ಅವರ ಶ್ರೀರಕ್ಷೆ, ಕೆಆರ್.ಪೇಟೆ ಹೊರತುಪಡಿಸಿ ಕೆ.ಆರ್.ನಗರ, ಮಂಡ್ಯ, ಶ್ರೀರಂಗಪಟ್ಟಣ, ಮದ್ದೂರು, ಮಳವಳ್ಳಿ, ಮೇಲುಕೋಟೆ, ನಾಗಮಂಗಲ ವಿಧಾನಸಭಾ ಕ್ಷೇತ್ರಗಳ ಶಾಸಕರು ಹಾಗೂ ವಿಧಾನಪರಿಷತ್ ಸದಸ್ಯರ ಸಂಪೂರ್ಣ ಬೆಂಬಲದ ಜೊತೆಗೆ ರಾಜ್ಯ ಸರ್ಕಾರದ ಗ್ಯಾರಂಟಿ ಕಾರ್ಯಕ್ರಮಗಳು ನನ್ನ ಗೆಲುವಿನ ಹಾದಿಯನ್ನು ಸುಗಮಗೊಳಿಸಿದವು. ಮಂಡ್ಯ ಲೋಕಸಭೆ ಕ್ಷೇತ್ರದಾದ್ಯಂತ ಜನತೆ ತೋರಿಸಿದ ಪ್ರೀತಿ, ಅಭಿಮಾನವು ನನ್ನ ಗೆಲುವಿನ ಯಾನವನ್ನು ಖಾತ್ರಿಪಡಿಸಿದೆ. ಜೂನ್ 4ರಂದು ಪ್ರಕಟವಾಗುವ ಫಲಿತಾಂಶವು ನನ್ನ ಪರವಾಗಿ ಬರಲಿದೆ. ಮಹಿಳೆಯರು, ಮುಸ್ಲಿಂ, ಹಾಲುಮತ ಕುರುಬ ಸಮಾಜದ ಬಂಧುಗಳು ಸೇರಿದಂತೆ ಹಿಂದುಳಿದ ವರ್ಗಗಳ ಮತಗಳು ಸಾರಾಸಗಟಾಗಿ ಕಾಂಗ್ರೆಸ್ ಪಕ್ಷದ ಪರವಾಗಿ ಚಲಾವಣೆಯಾಗಿವೆ ಎಂಬ ವಿಶ್ವಾಸವಿದೆ. ಆದ್ದರಿಂದ ಗೆಲುವು ನನ್ನದೇ ಎಂದು ಸ್ಟಾರ್‌ಚಂದ್ರು ಹೇಳಿದರು.

ಈ ಸಂದರ್ಭದಲ್ಲಿ ಮಂಡ್ಯ ಜಿಲ್ಲಾ ಕಾಂಗ್ರೆಸ್ ವಕ್ತಾರ ಎಂ.ಎಸ್.ಚಿದಂಬರ್, ತಾಲೂಕು ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಆದಿಹಳ್ಳಿ ಮೀನಾಕ್ಷಿ ರಮೇಶ್ ಮತ್ತಿತರರು ಉಪಸ್ಥಿತರಿದ್ದರು.

ಸಮಸಮಾಜ ಪರಿಕಲ್ಪನೆಯಲ್ಲೇ ಸಂವಿಧಾನ ರಚನೆ

ಸಾಮಾಜಿಕ ಚಿಂತಕ ರಂಜಾನ್‌ದರ್ಗಾ ಅಭಿಮತ

ಮಂಡ್ಯ,ಮೇ19- ಸರ್ವರನ್ನೂ ಒಳಗೊಂಡ ಸಮಸಮಾಜದ ಪರಿಕಲ್ಪನೆಯ ಬಸವ ತತ್ವದ ಆಧಾರದಲ್ಲೇ ಡಾ.ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನ ರಚಿಸಿದ್ದಾರೆಂದು ಸಾಮಾಜಿಕ ಚಿಂತಕ ರಂಜಾನ್‌ದರ್ಗಾ ಪ್ರತಿಪಾದಿಸಿದರು.

ಭಾನುವಾರ ನಗರದ ಗಾಂಧಿಭವನದಲ್ಲಿ ಬಸವ ಜಯಂತಿ ಆಚರಣೆ ಅಂಗವಾಗಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ವೇದಿಕೆ ವತಿಯಿಂದ ಏರ್ಪಡಿಸಿದ್ದ ಬಸವ ತತ್ವ ರಕ್ಷಣೆಯಲ್ಲಿ ಸಂವಿಧಾನ ಕುರಿತ ವಿಚಾರ ಚಿಂತನೆ ಮತ್ತು ಬಸವಶ್ರೀ ಪುರಸ್ಕಾರ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಬಸವಣ್ಣನವರ ಇವ ನಮ್ಮವ ಇವ ನಮ್ಮವ ಎಂಬ ಎಲ್ಲರನ್ನೂ ನಮ್ಮವರೆಂದು ಕಾಣುವ ಸೂತ್ರವನ್ನು ಸಂವಿಧಾನದ ಪೀಠಿಕೆಯಲ್ಲೇ ಕಾಣಿಸಲಾಗಿದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಮಾಜಿ ಸಚಿವೆ ಬಿ.ಟಿ.ಲಲಿತಾನಾಯಕ್ ಮಾತನಾಡಿ, ಕಸುಬಿನ ಆಧಾರದಲ್ಲಿ ಜಾತಿ ಮಾಡಲಾಗಿದೆ. ಆದರೆ ಇಂದು ಅದೇ ಜಾತಿಗಳನ್ನು ರಾಜಕೀಯ ಲಾಭಕ್ಕೆ ಬಳಸಲಾಗುತ್ತಿದೆ. ಪರಿಣಾಮ ಜಾತಿ ಮತ, ಧರ್ಮಾಚರಣೆಗಳು ಗಟ್ಟಿಯಾಗಿ ಬೇರೂರುತ್ತಿವೆ. ಇಂದಿನ ಆಧುನಿಕ ದಿನಮಾನಗಳಲ್ಲೂ ಜಾತಿ ಎಂಬುದು ಎಷ್ಟು ಗಟ್ಟಿಯಾಗಿದೆ ಎಂಬುದಕ್ಕೆ ಇತ್ತೀಚೆಗೆ ಮಂಡ್ಯದಂತಹ ನೆಲದಲ್ಲಿ ನಡೆದಿರುವ ಮರ್ಯಾದಾ ಹತ್ಯೆಗಳೇ ಸಾಕ್ಷಿ ಎಂದರು.



ವಿವಿಧ ಕಾಯಕ ವರ್ಗಗಳ 12 ಮಂದಿ ಸಾಧಕರನ್ನು ಗೌರವಿಸಲಾಯಿತು

ಇಂತಹ ಕಾಲಘಟ್ಟದಲ್ಲಿ ಸಮಾಜವನ್ನು ಸರಿದಾರಿಗೆ ತರಬೇಕಾದ ಮಠಮಾನ್ಯಗಳೂ ಕೂಡ ರಾಜಕಾರಣಕ್ಕೆ ಇಳಿದುಬಿಟ್ಟಿವೆ. ಹಾಗಾಗಿ ಇಲ್ಲಿ ಧನಿಕನಿಗೊಂದು ನ್ಯಾಯ ಬಡವನಿಗೊಂದು ನ್ಯಾಯ ಎಂಬಂತಾಗಿದೆ. ಹಣಬಲ ಮತ್ತು ಜಾತಿಬಲದ ಮೇಲೆ ರಾಜಕೀಯ ನಿಂತಿದೆ. ಹಾಗಾಗಿ ಸಾಮಾಜಿಕ ನ್ಯಾಯ ಎಂಬುದು ಮರೀಚಿಕೆಯಾಗುತ್ತಿದೆ ಎಂದು ವಿಷಾದಿಸಿದರು.

ಪ್ರಾಸ್ತಾವಿಕ ನುಡಿಯಾಡಿದ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ವೇದಿಕೆ ಅಧ್ಯಕ್ಷ ಎಲ್.ಸಂದೇಶ್, ಇಂದಿನ ಆಧುನಿಕ ಯುಗದಲ್ಲೂ ಜಾತೀಯತೆ, ಕೋಮುವಾದ, ಮಹಿಳಾ ಶೋಷಣೆ ಮುಂದುವರೆದಿದೆ. ಶೋಷಿತರು ಮತ್ತು ತಬ್ಬಲಿ ಸಮಾಜಗಳು ಉಳಿವಿನ ಹೋರಾಟ ನಡೆಸುತ್ತಿವೆ. ಈ ವ್ಯವಸ್ಥೆಯ ಸುಧಾರಣೆಗೆ ಬಸವ ತತ್ವವೊಂದೇ ಪರಿಹಾರ ಮಾರ್ಗ ಎಂದರು.

ಬಳಿಕ ಜಿಲ್ಲೆಯ ವಿವಿಧ ಕಾಯಕ ವರ್ಗಗಳ 12 ಮಂದಿ ಸಾಧಕರಿಗೆ ಬಸವಶ್ರೀ ಪ್ರಶಸ್ತಿ ಹಾಗೂ ಕಾಯಕಯೋಗಿ ಪ್ರತಿಷ್ಠಾನದ ವತಿಯಿಂದ ಸಾಮಾಜಿಕ ಚಿಂತಕ ರಂಜಾನ್‌ದರ್ಗಾ ಅವರಿಗೆ ಕಾಯಕಯೋಗಿ ಪುರಸ್ಕಾರ ನೀಡಿ ಗೌರವಿಸಲಾಯಿತು.

ವೇದಿಕೆಯಲ್ಲಿ ಮೈಶುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಕಾಯಕಯೋಗಿ ಪ್ರತಿಷ್ಠಾನದ ಎಂ.ಶಿವಕುಮಾರ್, ಬಾಬುನಾಯಕ್, ಸುರೇಶ್‌ಬಾಬು ಮತ್ತಿತರರು ಪಾಲ್ಗೊಂಡಿದ್ದರು.

ಮಣಿಗೆರೆ ಗ್ರಾಮದಲ್ಲಿ ಡೇರಿ ಕಟ್ಟಡ ಕಾಮಗಾರಿಗೆ ಚಾಲನೆ



ಭಾರತೀನಗರ,ಮೇ19-ಇಲ್ಲಿಗೆ ಸಮೀಪದ ಮಣಿಗೆರೆ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಮುಂದುವರೆದ ಕಟ್ಟಡ ಕಾಮಗಾರಿಗೆ ಮನ್ಮುಲ್ ನಿರ್ದೇಶಕ ಎಸ್.ಪಿ.ಸ್ವಾಮಿ ಗುದ್ದಲಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿ, ತಾಲೂಕಿನಲ್ಲಿರುವ ಎಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘದ ಕಟ್ಟಡ ಕಾಮಗಾರಿಗಳು ಅಭಿವೃದ್ಧಿಗೊಂಡಿವೆ. ಆದರೆ ಇಲ್ಲಿನ ಡೇರಿ ಮಾತ್ರ ಅಭಿವೃದ್ಧಿಯಲ್ಲಿ ಹಿನ್ನಡೆ ಇದೆ. ಹಾಗಾಗಿ ಮನ್‌ಮುಲ್ ವತಿಯಿಂದ 2 ಲಕ್ಷ ಸಹಾಯ ಧನದ ಜೊತೆಗೆ ಇಲ್ಲಿಯ ಡೇರಿಯ ಲಾಭಾಂಶದ ಹಣದಿಂದ ಕಾಮಗಾರಿಯನ್ನು ಅಭಿವೃದ್ಧಿ ಪಡಿಸಲು ಸೂಚನೆ ನೀಡಿದ್ದೇನೆಂದು ವಿವರಿಸಿದರು.

ಗುಣಮಟ್ಟ ಹಾಲು ಸರಬರಾಜು ಮಾಡಿದರೆ ಸಂಘ ಅಭಿವೃದ್ಧಿಗೊಳ್ಳುತ್ತದೆ. ಜೊತೆಗೆ ನಾವು ಸಹ ಸೌಲಭ್ಯಗಳನ್ನು ನೀಡಬಹುದು ಎಂದರು.

ಪ್ರಸ್ತುತ ಸಂದರ್ಭ ಬರಗಾಲದಿಂದ ರೈತರು ತತ್ತರಿಸಿದ್ದು, ಮಳೆಯಿಲ್ಲದೆ ರೈತರು ಯಾವುದೇ ಬೆಳೆಗಳನ್ನು ಒಡ್ಡಿಲ್ಲ. ಭತ್ತದ ಬೆಳೆಯನ್ನು ಬೆಳೆದಿದ್ದರೆ ಒಣ ಹುಲ್ಲು ಸಿಗುತ್ತಿತ್ತು. ಸಕಾಲದಲ್ಲಿ ಮಳೆ ಬಿದ್ದಿದ್ದರೆ ಹಸಿರು ಮೇವಿನ ಕೊರತೆಯೂ ನೀಗುತ್ತಿತ್ತು. ಆದರೆ ಮಳೆಯೇ ಇಲ್ಲದೆ ಪಶುಗಳ ಸಾಕಣೆ ಮಾಡುವಲ್ಲಿ ರೈತರು ಹರಸಾಹಸಪಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಮಣಿಗೆರೆ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಕೆಂಪರಾಜು ಮಾತನಾಡಿ, ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಕಟ್ಟಡ ಕಾಮಗಾರಿಯನ್ನು ಅಭಿವೃದ್ಧಿ ಪಡಿಸಲು ನನ್ನ ಅವಧಿಯಲ್ಲಿ ಮುಂದಾಗಿದ್ದೇನೆ. ಇದಕ್ಕೆ ಮನ್‌ಮುಲ್ ನಿರ್ದೇಶಕ ಎಸ್.ಪಿ. ಸ್ವಾಮಿ ಮತ್ತು ಸಂಘದ ನಿರ್ದೇಶಕರು ಸಾಥ್ ನೀಡಿದ್ದಾರೆ. ಹಾಗಾಗಿ ಕಟ್ಟಡದ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಸಂಘದ ವತಿಯಿಂದ ಮನ್ಮುಲ್ ನಿರ್ದೇಶಕ ಎಸ್.ಪಿ. ಸ್ವಾಮಿ ಅವರನ್ನು ಅಭಿನಂದಿಸಲಾಯಿತು.

ಇದೇ ವೇಳೆ ಮುಖಂಡರಾದ ಮಣಿಗೆರೆ ಪ್ರಕಾಶ್, ಕುಬ್ಬಾಳಯ್ಯ, ಗುತ್ತಿಗೆದಾರ ಜಗದೀಶ್, ಸಂಘದ ಕಾರ್ಯದರ್ಶಿ ಪುಟ್ಟಲಿಂಗು, ಉಪಾಧ್ಯಕ್ಷ ವೆಂಕಟೇಶ್, ನಿರ್ದೇಶಕರಾದ ಎಂ.ಎಲ್.ರಮೇಶ್, ಬಿಳಿಯಯ್ಯ, ಸಿದ್ದೇಗೌಡ, ಕೆಂಪಮ್ಮ ಸೇರಿದಂತೆ ಹಲವರಿದ್ದರು.

ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಕೆ.ಆರ್.ಪೇಟೆ: ಕೆ.ಆರ್.ಪೇಟೆ ಪಟ್ಟಣದ ಹೊರವಲಯದ ತೇಗನಹಳ್ಳಿಯ ಆಶೀರ್ವಾದ ಪ್ರೌಢ ಶಾಲೆಯ ವಿದ್ಯಾರ್ಥಿ ಎಸ್.ರಕ್ಷನ್ ಅರವಿಂದ್ ಅವರು ಎಸ್‌ಎಸ್‌ಎಸ್‌ಸಿಯಲ್ಲಿ 586 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈತ ಪಟ್ಟಣದ ಪತ್ರಿಕಾ ವಿತರಕರಾದ ನೇಕಾರ ತೊಗಟವೀರ ಸಮಾಜದ ಮುಖಂಡರಾದ ಕೆ.ಶ್ರೀನಿವಾಸ್ ಅವರ ಪುತ್ರ.

ಕುಂದು ಕೊರತೆ ಸಭೆ

ಮಂಡ್ಯ, ಮೇ 19 -ಮಂಡ್ಯ ಲೋಕಾಯುಕ್ತ ವಿಭಾಗದ ಅಧಿಕಾರಿಗಳು ಮೇ 22ರಂದು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕು ಕಚೇರಿ ಆವರಣದಲ್ಲಿ ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 1.30 ರವರೆಗೆ ಸಾರ್ವಜನಿಕರ ಕುಂದು ಕೊರತೆ ಸಭೆಯನ್ನು ಆಯೋಜಿಸಿದ್ದಾರೆ.

ಪಾಂಡವಪುರ ಪಿಎಲ್‌ಡಿ ಬ್ಯಾಂಕ್ ಉಪಾಧ್ಯಕ್ಷರಾಗಿ 99 ವರ್ಷದ ಚಿಕ್ಕಮರಳಿ ಪೂಜಾರಿ ಎಂ.ಚನ್ನಯ್ಯ ಅವಿರೋಧ ಆಯ್ಕೆ

ಪಾಂಡವಪುರ,ಮೇ.19- ಪಾಂಡವಪುರ ಪಿಎಲ್‌ಡಿ ಬ್ಯಾಂಕ್‌ನ ಉಪಾಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತರಾದ 99ವರ್ಷದ ಚಿಕ್ಕಮರಳಿ ಪೂಜಾರಿ ಎಂ.ಚನ್ನಯ್ಯ ಶನಿವಾರ ಅವಿರೋಧವಾಗಿ ಆಯ್ಕೆಯಾದರು.

ಪಿಎಲ್‌ಡಿ ಬ್ಯಾಂಕ್‌ನ ಹಿಂದಿನ ಉಪಾಧ್ಯಕ್ಷೆ ಗೌರಮ್ಮ ಅವರ ರಾಜೀನಾಮೆಯಿಂದ ತೆರವಾಗಿದ್ದ ಉಪಾಧ್ಯಕ್ಷ ಸ್ಥಾನಕ್ಕೆ ಶನಿವಾರ ಚುನಾವಣೆಯ ನಿಗದಿಯಾಗಿತ್ತು.

ಉಪಾಧ್ಯಕ್ಷ ಸ್ಥಾನಕ್ಕೆ ಜೆಡಿಎಸ್ ಬೆಂಬಲಿತ ನಿರ್ದೇಶಕ ಎಂ.ಚನ್ನಯ್ಯ ಹೊರತುಪಡಿಸಿ ಯಾವೊಬ್ಬ ನಿರ್ದೇಶಕರೂ ನಾಮಪತ್ರವನ್ನು ಸಲ್ಲಿಸದ ಹಿನ್ನೆಲೆಯಲ್ಲಿ ಬ್ಯಾಂಕ್‌ನ ನೂತನ ಉಪಾಧ್ಯಕ್ಷರನ್ನಾಗಿ ಎಂ.ಚನ್ನಯ್ಯ ಅವರನ್ನು ಅವಿರೋಧವಾಗಿ ಆಯ್ಕೆಮಾಡಲಾಗಿದೆ ಎಂದು ಚುನಾವಣಾಧಿಕಾರಿ ನಿರ್ಮಲ ಅವರು ಘೋಷಿಸಿದರು.

ಪೂಜಾರಿ ಎಂ.ಚನ್ನಯ್ಯ ಉಪಾಧ್ಯಕ್ಷರಾಗಿ ಅವಿರೋಧ ಆಯ್ಕೆಯಾಗುತ್ತಿದ್ದಂತೆಯೇ ಅವರ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.ಎಂ.ಚನ್ನಯ್ಯ ಅವರನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಸೇರಿದಂತೆ ಬ್ಯಾಂಕ್ ಅಧ್ಯಕ್ಷರು, ಮಾಜಿ ಅಧ್ಯಕ್ಷರು, ನಿರ್ದೇಶಕರು ಮುಖಂಡರು ಅಭಿನಂದಿಸಿದರು.



ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ಪೂಜಾರಿ ಎಂ.ಚನ್ನಯ್ಯನವರು 99 ವರ್ಷದ ಇಳಿ ವಯಸ್ಸಿನಲ್ಲೂ ಸಾಕಷ್ಟು ಉತ್ಸಾಹದಿಂದ ಕೆಲಸ ಮಾಡುತ್ತಿದ್ದು, ಮುಂದಿನ ದಿನಗಳಲ್ಲಿ ಬ್ಯಾಂಕ್‌ನ ಉಪಾಧ್ಯಕ್ಷರಾಗಿ ಉತ್ತಮವಾಗಿ ಬ್ಯಾಂಕ್ ಅಭಿವೃದ್ಧಿಗೆ ಕೆಲಸ ಮಾಡಲಿ ಎಂದು ಹಾರೈಸಿದರು.

ಸಂದರ್ಭದಲ್ಲಿ ಟಿಎಪಿಸಿಎಂಎಸ್ ನಿರ್ದೇಶಕ ರಾಮಕೃಷ್ಣೇಗೌಡ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎನ್.ಮುರಳಿ, ಮಾಜಿ ಅಧ್ಯಕ್ಷರು, ಹಾಲಿ ನಿರ್ದೇಶಕರಾದ ಎಂ.ಸಿ. ಯಶ್ವಂತ್ ಕುಮಾರ್, ಸಿ.ಪ್ರಕಾಶ್, ರತ್ನಮ್ಮ, ಡಿ.ಎನ್.ಸೋಮಶೇಖರ್, ಶಿವಣ್ಣ, ನಾಗಶೆಟ್ಟಿ, ಗೌರಮ್ಮ, ನಾಗೇಗೌಡ, ಕಾರ್ಯದರ್ಶಿ ಹುಚ್ಚೇಗೌಡ, ಮುಖಂಡರಾದ ಬಕೋಡಿ, ಹೇಮಣ್ಣ, ಚಿಕ್ಕಮರಳಿ ಗ್ರಾಮದ ರಮೇಶ್, ಚಂದ್ರ ಶೇಖರ್, ಸ್ವಾಮೀಗೌಡ ಶಿವಣ್ಣ, ಕುಮಾರ್ ಮರಿಚನ್ನಯ್ಯ, ಮಧುಸೂದನ್, ಪುನಿ, ಸ್ವಾಮಿ, ನಂದೀಶ್ ಸೇರಿದಂತೆ ಹಲವರು ಹಾಜರಿದ್ದರು.

ಅಪ್ರಾಪ್ತೆಯ ವಿವಾಹ; ಯುವಕನ ವಿರುದ್ಧ ಪ್ರಕರಣ ದಾಖಲು

ಮೈಸೂರು, ಮೇ 19(ಎಸ್‌ಪಿಎನ್)- ಹದಿನಾಲ್ಕು ವರ್ಷದ ಅಪ್ರಾಪ್ತೆಯನ್ನು ಮದುವೆ ಮಾಡಿಕೊಂಡ ಯುವಕನ ವಿರುದ್ಧ ಮೈಸೂರು ವಿದ್ಯಾರಣ್ಯಪುರಂ ಠಾಣೆಯಲ್ಲಿ ಬಾಲ್ಯವಿವಾಹ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ನಂಜನಗೂಡು ಬದನವಾಳು ಗ್ರಾಮದ ಅರ್ಜುನ್ ಎಂಬಾತನೇ ಅಪ್ರಾಪ್ತೆಯನ್ನು ಮದುವೆಯಾದ ಯುವಕ. ಈತ, ಸುತ್ತೂರಿನ ಯಾವುದೋ ಸ್ಥಳಕ್ಕೆ ಕರೆದೊಯ್ದು ಅರಿಸಿನ ಕೊಂಬು ಕಟ್ಟಿ ಮದುವೆಯಾಗಿರುವುದಾಗಿ ತಿಳಿಸಿದ್ದಾನೆ.

ಕನಕಗಿರಿಯ ಮನೆಗೆ ಆಗಾಗ ತಂದೆ ಜೊತೆಯಲ್ಲಿ ಬರುತ್ತಿದ್ದ ಅರ್ಜುನ, ಅಪ್ರಾಪ್ತೆಗೆ ಪರಿಚಯವಾಗಿದ್ದಾನೆ. ಈ ವೇಳೆ ಅಪ್ರಾಪ್ತೆಯನ್ನು ಆಕೆಯ ತಂದೆ-ತಾಯಿಗೆ ತಿಳಿಯದಂತೆ ಅಪ್ರಾಪ್ತೆಯನ್ನು ಮದುವೆ ಆಗುವುದಾಗಿ ಪುಸಲಾಯಿಸಿ ಕರೆದೊಯ್ದಿದ್ದಾನೆ.

ಮೂರು ದಿನಗಳ ನಂತರ ಮನೆಗೆ ಹಿಂದಿರುಗಿದ ಬಾಲಕಿಯ ಕುತ್ತಿಗೆಯಲ್ಲಿ ಅರಿಶಿನ ಕೊಂಬು ಇರುವುದನ್ನು ಕಂಡ ಪೋಷಕರು, ಮಗಳನ್ನು ಕೂಲಂಕಷವಾಗಿ ವಿಚಾರಿಸಿದಾಗ ನಡೆದ ಘಟನೆಯನ್ನು ವಿವರಿಸಿದ್ದು, ಬಾಲ್ಯ ವಿವಾಹ ಮಾಡಿಕೊಂಡ ಅರ್ಜುನನ ವಿರುದ್ಧ ಕ್ರಮ ಕೈಗೊಳ್ಳುವಂತೆ ವಿದ್ಯಾರಣ್ಯಪುರಂ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಪಂಜಾಬ್ ಕದನ ಗೆದ್ದು 2ನೇ ಸ್ಥಾನಕ್ಕೇರಿದ ಎಸ್‌ಆರ್‌ಹೆಚ್



ಹೈದರಾಬಾದ್, ಮೇ 19- ಅಭಿಷೇಕ್ ಶರ್ಮಾ ಅರ್ಧಶತಕ, ಹೆನ್ರಿಚ್ ಕ್ಲಾಸೆನ್ ಅವರ ಅಬ್ಬರದ ಬ್ಯಾಟಿಂಗ್ ನೆರವಿನಿಂದ ಪಂಜಾಬ್ ಕಿಂಗ್ಸ್ ವಿರುದ್ಧ ಸನ್‌ರೈಸರ್ಸ್ ಹೈದರಾಬಾದ್ 4 ವಿಕೆಟ್‌ಗಳ ಜಯ ಸಾಧಿಸಿತು.

ಆ ಮೂಲಕ ಆಡಿರುವ 14 ಪಂದ್ಯಗಳಲ್ಲಿ 17 ಅಂಕಗಳೊಂದಿಗೆ ಹೈದರಾಬಾದ್ ಅಂಕಪಟ್ಟಿಯಲ್ಲಿ 2ನೇ ಸ್ಥಾನಕ್ಕೆ ಜಿಗಿದರೆ, ಮತ್ತೊಂದೆಡೆ ಪಂಜಾಬ್ ಕಿಂಗ್ಸ್ ಸೋಲಿನೊಂದಿಗೆ ಟೂರ್ನಿಗೆ ವಿದಾಯ ಹೇಳಿತು.

ಇಲ್ಲಿನ ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ಸ್ಟೇಡಿಯಂನಲ್ಲಿ ಭಾನುವಾರ ಮಧ್ಯಾಹ್ನ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಪಂಜಾಬ್ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 214ರನ್‌ಗಳ ಬೃಹತ್ ಮೊತ್ತ ಪೇರಿಸಿತು. 215 ರನ್ ಗುರಿ ಬೆನ್ನತ್ತಿದ ಹೈದರಾಬಾದ್ 19.1 ಓವರ್‌ಗೆ 6 ವಿಕೆಟ್ ನಷ್ಟಕ್ಕೆ 215 ರನ್ ಗಳಿಸಿ ಗೆಲುವು ದಾಖಲಿಸಿತು.

ಇದಕ್ಕೂ ಮುನ್ನಾ, ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ ಉತ್ತಮ ಆರಂಭ ಪಡೆಯಿತು. ಆರಂಭಿಕರಾದ ಅಥರ್ವ ತೈಡೆ ಹಾಗೂ ಪ್ರಭ್‌ಸಿಮ್ರನ್ ಸಿಂಗ್ ಮೊದಲ ವಿಕೆಟ್‌ಗೆ 9.1 ಓವರ್‌ಗಳಲ್ಲಿ 97 ರನ್ ಗಳಿಸಿ ಉತ್ತಮ ಅಡಿಪಾಯ ಹಾಕಿದರು. ಆದರೆ 2 ಸಿಕ್ಸರ್, 5 ಬೌಂಡರಿ ಒಳಗೊಂಡ 46 ರನ್ ಗಳಿಸಿದ್ದ ಅಥರ್ವ ತೈಡೆ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ 7 ಫೋರ್, 4 ಸಿಕ್ಸರ್ ಒಳಗೊಂಡ 71 ರನ್ ಗಳಿಸಿ ಪ್ರಭ್‌ಸಿಮ್ರನ್ ಸಿಂಗ್ ನಿರ್ಗಮಿಸಿದರು. ನಂತರ ಬಂದ ರಿಲಿ ರಾಸ್ಸೋ 49 ರನ್ ಗಳಿಸಿ ಕಮಿನ್ಸ್‌ಗೆ ವಿಕೆಟ್ ಒಪ್ಪಿಸಿ ಅರ್ಧ ಶತಕ ವಂಚಿತರಾಗಿ ಹೊರ ನಡೆದರು. ನಾಯಕ ಜಿತೇಶ್ ಶರ್ಮಾ 32 ರನ್ ಬಾರಿಸಿ ತಂಡ ಸವಾಲಿನ ಮೊತ್ತ ಪೇರಿಸಲು ನೆರವಾದರು. ಹೈದರಾಬಾದ್ ಪರ ಟಿ.ನಟರಾಜನ್ 2 ಹಾಗೂ ಪ್ಯಾಟ್ ಕಮಿನ್ಸ್, ವಿಜಯಕಾಂತ್ ವ್ಯಾಸಕಾಂತ್ ತಲಾ ಒಂದೊಂದು ವಿಕೆಟ್ ಗಳಿಸಿದರು.

ಪಂಜಾಬ್ ನೀಡಿದ 215 ರನ್‌ಗಳ ಗುರಿ ಬೆನ್ನತ್ತಿದ ಹೈದರಾಬಾದ್ ಇನ್ನಿಂಗ್ಸ್ ಮೊದಲ ಎಸೆತದಲ್ಲೇ ಟ್ರಾವಿಸ್ ಹೆಡ್ ವಿಕೆಟ್ ಕಳೆದುಕೊಂಡಿತು. ಈ ವೇಳೆ ಜೊತೆಯಾದ ಅಭಿಷೇಕ್ ಶರ್ಮಾ ಹಾಗೂ ರಾಹುಲ್ ತ್ರಿಪಾಠಿ 72 ರನ್ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಆದರೆ ತ್ರಿಪಾಠಿ 33 ರನ್ ಗಳಿಸಿ ನಿರ್ಗಮಿಸಿದರು. ಮತ್ತೊಂದೆಡೆ ಮಿಂಚಿನ ಬ್ಯಾಟಿಂಗ್ ಮಾಡಿದ ಅಭಿಷೇಕ್ ಶರ್ಮಾ 28 ಎಸೆತಗಳಲ್ಲಿ 6 ಸಿಕ್ಸ್, 5 ಬೌಂಡರಿ ಒಳಗೊಂಡ 66 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ನಿತೀಶ್ ಕುಮಾರ್ ರೆಡ್ಡಿ 37, ಹೆನ್ರಿಕ್ ಕ್ಲಾಸೆನ್ 42, ಅಬ್ದುಲ್ ಸಮದ್ 11 ರನ್‌ಗಳಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು. ಪಂಜಾಬ್ ಪರ ಅರ್ಷದೀಪ್ ಸಿಂಗ್ ಹಾಗೂ ಹರ್ಷಲ್ ಪಟೇಲ್ ತಲಾ 2 ವಿಕೆಟ್ ಕಿತ್ತರು. ಹರ್‌ಪ್ರೀತ್ ಬ್ರಾರ್ ಮತ್ತು ಶಶಾಂಕ್ ಸಿಂಗ್ ತಲಾ 1 ವಿಕೆಟ್ ಗಳಿಸಿದರು. ಸ್ಫೋಟಕ ಬ್ಯಾಟಿಂಗ್ ನಡೆಸಿದ ಅಭಿಷೇಕ್ ಶರ್ಮಾ ಪಂದ್ಯಶ್ರೇಷ್ಠ ಗೌರವಕ್ಕೆ ಭಾಜನರಾದರು.

ಕೋಲ್ಕತ್ತಾ, ರಾಜಸ್ಥಾನ ಪಂದ್ಯ ಮಳೆಗಾಹುತಿ

ಗುವಾಹಟಿ: ರಾಜಸ್ಥಾನ್ ರಾಯಲ್ಸ್ ಹಾಗೂ ಕೋಲ್ಕತ್ತಾ ನಡುವೆ ಶನಿವಾರ ರಾತ್ರಿ ನಡೆಯಬೇಕಿದ್ದ ಪಂದ್ಯ ಮಳೆಗೆ ಆಹುತಿಯಾಗಿದೆ. ಗುವಾಹಟಿಯಲ್ಲಿ ಸಂಜೆಯಿಂದ ಆರಂಭವಾದ ಮಳೆ ನಿರಂತರವಾಗಿ ಸುರಿದಿದ್ದರಿಂದ ಪಂದ್ಯವನ್ನು ರದ್ದುಗೊಳಿಸಿ ಉಭಯ ತಂಡಗಳಿಗೂ ಒಂದೊಂದು ಅಂಕವನ್ನು ನೀಡಲಾಯಿತು. ಈ ಫಲಿತಾಂಶ ಕೆಕೆಆರ್‌ಗೆ ಯಾವುದೆ ನಷ್ಟವನ್ನುಂಟು ಮಾಡದಿದ್ದರೂ, ಕೊನೆ ಪಂದ್ಯ ಗೆದ್ದು ಅಂಕಪಟ್ಟಿಯಲ್ಲಿ 2ನೇ ಸ್ಥಾನಕ್ಕೇರುವ ರಾಜಸ್ಥಾನ್ ಆಸೆಗೆ ಮಳೆ ತಣ್ಣೀರೆರಚಿದೆ.

ಪ್ಲೇ ಆಫ್‌ಗೆ ಕೆಕೆಆರ್, ಎಸ್‌ಆರ್‌ಹೆಚ್, ಆರ್‌ಆರ್, ಆರ್‌ಸಿಬಿ ಎಂಟ್ರಿ

ಬೆಂಗಳೂರು: ಪ್ರಸಕ್ತ 17ನೇ ಆವೃತ್ತಿಯ ಐಪಿಎಲ್ ಪಂದ್ಯಾವಳಿಯ ಲೀಗ್ ಹಂತದ ಎಲ್ಲಾ ಪಂದ್ಯಗಳು ಮುಕ್ತಾಯವಾಗಿದ್ದು, ಕೋಲ್ಕತ್ತಾ ನೈಟ್ ರೈಡರ್ಸ್, ಸನ್‌ರೈಸರ್ಸ್ ಹೈದರಾಬಾದ್, ರಾಜಸ್ಥಾನ್ ರಾಯಲ್ಸ್ ಹಾಗೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳು ಅಂತಿಮವಾಗಿ ಪ್ಲೇ ಆಫ್ ತಲುಪಿವೆ.

ಒಟ್ಟು 14 ಪಂದ್ಯಗಳಿಂದ 20 ಅಂಕಗಳೊಂದಿಗೆ ಕೋಲ್ಕತ್ತಾ ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದರೇ, ರಾಜಸ್ಥಾನ್ ಹಾಗೂ ಹೈದರಾಬಾದ್ ತಲಾ 17 ಅಂಕಗಳನ್ನು ಹೊಂದಿವೆ. ಆದರೆ ನೆಟ್ ರನ್‌ರೇಟ್‌ನಲ್ಲಿ ಹೈದರಾಬಾದ್(+0.414) ರಾಜಸ್ಥಾನ್‌ಗಿಂತ (+0.273) ಮುಂದಿರುವುದರಿಂದ ಅಂಕಪಟ್ಟಿಯಲ್ಲಿ 2ನೇ ಸ್ಥಾನ ಗಿಟ್ಟಿಸಿಕೊಂಡಿದೆ. ಹಾಗಾಗಿ ಮೇ 22ರಂದು ನಡೆಯಲಿರುವ ಎಲಿಮಿನೇಟರ್‌ನಲ್ಲಿ ರಾಜಸ್ಥಾನ್ ರಾಯಲ್ಸ್ 4ನೇ ಸ್ಥಾನದಲ್ಲಿರುವ ಆರ್‌ಸಿಬಿ ವಿರುದ್ಧ ಸೆಣಸಾಡಲಿದೆ.

ಟೂರ್ನಿಯಲ್ಲಿ ಮೊದಲೆರಡು ಸ್ಥಾನ ಪಡೆದಿರುವ ಕೆಕೆಆರ್ ಮತ್ತು ಹೈದರಾಬಾದ್ ಮೊದಲ ಕ್ವಾಲಿಫೈಯರ್‌ನಲ್ಲಿ ಕಣಕ್ಕಿಳಿಯಲಿವೆ. ಮೇ 21ರಂದು ಈ ಪಂದ್ಯ ನಡೆಯಲಿದ್ದು, ಗೆದ್ದ ತಂಡ ನೇರ ಫೈನಲ್ ಪ್ರವೇಶಿಸಲಿದೆ. ಸೋಲುವ ತಂಡ ಮೇ 24ರಂದು ಆರ್‌ಸಿಬಿ-ಆರ್‌ಆರ್ ನಡುವೆ ಮೇ 22ರಂದು ನಡೆಯಲಿರುವ ಎಲಿಮಿನೇಟರ್ ಪಂದ್ಯದ ವಿಜೇತ ತಂಡವನ್ನು ಎದುರಿಸಲಿದೆ. ಮೇ 26 ಭಾನುವಾರದಂದು ಫೈನಲ್ ಪಂದ್ಯ ನಡೆಯಲಿದೆ.

ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್‌ವೇನಲ್ಲಿ ವಾಹನ ಚಾಲನೆ ವೇಳೆ ಮೊಬೈಲ್ ಬಳಸಿದರೆ ದಂಡದ ಬರೆ

- ಸಂಚಾರ ನಿಯಮ ಉಲ್ಲಂಘಿಸುವವರ ಫೋಟೋ ನಿಖರವಾಗಿ ಸೆರೆಹಿಡಿಯುತ್ತಿರುವ ಕೃತಕ ಬುದ್ಧಿಮತ್ತೆಯ ಕ್ಯಾಮರಾಗಳು!
- ಸಂಚಾರ ವಿಭಾಗದ ಎಡಿಜಿಪಿ ಅಲೋಕ್‌ಕುಮಾರ್ ಟ್ವೀಟ್ ಮೂಲಕ ವಾಹನ ಚಾಲಕರಿಗೆ ಬುದ್ಧಿ ಮಾತು

ಕೆಎಸ್‌ಆರ್‌ಟಿಸಿ ಬಸ್ ಚಾಲಕನ ಫೋಟೋ ಸಹಿತ ವೈರಲ್

ಮೈಸೂರು,ಮೇ.19-ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಸುಮಾರು 60 ಕಡೆ ಸ್ವಯಂಚಾಲಿತ ಕೃತಕ ಬುದ್ಧಿಮತ್ತೆಯ ಸಿಸಿ ಕ್ಯಾಮರಾಗಳನ್ನು ಅಳವಡಿಸಿರುವುದರಿಂದ ಈ ರಸ್ತೆಯಲ್ಲಿ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳು ವ್ಯಾಪಕವಾಗಿರುವುದು ಬೆಳಕಿಗೆ ಬರುತ್ತಿವೆ.

ಕೇವಲ 15 ದಿನಗಳಲ್ಲಿ ಈ ರಸ್ತೆಯಲ್ಲಿ 12,192 ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳು ಪತ್ತೆಯಾಗಿದ್ದು, ಸಂಬಂಧಪಟ್ಟವರಿಗೆ ನೋಟಿಸ್ ರವಾನಿಸಿ, ದಂಡ ವಸೂಲಿ ಪ್ರಕ್ರಿಯೆ ನಡೆಯುತ್ತಿದೆ. ಕೇವಲ ಅತಿವೇಗ ಮಾತ್ರವಲ್ಲದೇ, ನಿಯಮಬಾಹಿರವಾಗಿ ಲೇನ್ ಬದಲಾವಣೆ, ವಾಹನ ಚಾಲನೆ ವೇಳೆ ಮೊಬೈಲ್ ಬಳಕೆ, ಹೈವೇನಲ್ಲಿ ಸಂಚಾರಕ್ಕೆ ಅವಕಾಶವಿಲ್ಲದ ವಾಹನಗಳ ಸಂಚಾರ ಸೇರಿದಂತೆ ನಾನಾ ರೀತಿಯ ಸಂಚಾರ ನಿಯಮ ಉಲ್ಲಂಘನೆಯ ಎಲ್ಲಾ ರೀತಿಯ ಅಪರಾಧಗಳನ್ನೂ ಈ ಕ್ಯಾಮರಾಗಳು ದಾಖಲಿಸುತ್ತಿರುವುದು ವಿಶೇಷ.



ಅಲೋಕ್ ಕುಮಾರ್

ಕೇವಲ ನೋಟಿಸ್ ನೀಡಿ ದಂಡ ವಸೂಲಿಗಷ್ಟೇ ಸೀಮಿತವಾಗದೇ, ರಾಜ್ಯ ಸಂಚಾರ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡುವ ಮೂಲಕ ಇದರ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ಕೆ ಮುಂದಾಗಿದ್ದಾರೆ.

ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಮೊಬೈಲ್‌ನಲ್ಲಿ ಮಾತನಾಡುತ್ತಾ ಬಸ್ ಚಾಲನೆ ಮಾಡಿದ ಕೆಎಸ್‌ಆರ್‌ಟಿಸಿ ಬಸ್ ಚಾಲಕನ ವಿರುದ್ಧ ಕ್ರಮ ಕೈಗೊಳ್ಳಿ ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ರಾಜ್ಯ ಸಂಚಾರ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ಆಗ್ರಹಿಸಿದ್ದಾರೆ.







ಚಾಲಕನ ಅಜಾಗರೂಕತೆ ಹಾಗೂ ಅಶಿಸ್ತಿನ ನಡವಳಿಕೆ ಕುರಿತು ಅಲೋಕ್ ಕುಮಾರ್ ಅವರು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ನಮ್ಮ ಎಲ್ಲಾ ಸಿಸಿಟಿವಿಗಳು ಅವುಗಳ ಕೆಲಸವನ್ನು ಅಚ್ಚುಕಟ್ಟಾಗಿ ಮಾಡುತ್ತಿವೆ. ಮೇ 11 ರಂದು ಚನ್ನಪಟ್ಟಣ ಬಳಿ ಕೆಎಸ್‌ಆರ್‌ಟಿಸಿ ಚಾಲಕ ಮೊಬೈಲ್‌ನಲ್ಲಿ ಮಾತನಾಡುತ್ತಾ ಬಸ್ ಚಾಲನೆ ಮಾಡಿದ್ದಾರೆ ಎಂದು ಫೋಟೋ ಸಮೇತ ಮಾಹಿತಿ ಹಂಚಿಕೊಂಡಿದ್ದಾರೆ.

ಹೈವೇನಲ್ಲಿ ನಮ್ಮ ಪೊಲೀಸ್ ಕ್ಯಾಮರಾಗಳು ತಮ್ಮ ಕೆಲಸ ಮಾಡುತ್ತಿವೆ. ಕೇವಲ 15 ದಿನದಲ್ಲಿ 12,192 ಸಂಚಾರ ನಿಯಮ ಉಲ್ಲಂಘನೆಗಳನ್ನು ಸೆರೆ ಹಿಡಿದಿವೆ. ಸಂಚಾರ ನಿಯಮ ಉಲ್ಲಂಘನೆಯಿಂದ ಅಪಘಾತವಾದರೆ ಅದನ್ನು ಕುಟುಂಬದವರು ಸಹಿಸಿಕೊಳ್ಳಲು ಸಾಧ್ಯವೇ? ಒಮ್ಮೆ ಯೋಚಿಸಿ ಎಂದು ಟ್ವೀಟ್ ಮಾಡಿದ್ದಾರೆ. ಅಲ್ಲದೆ, ಕೆಎಸ್‌ಆರ್‌ಟಿಸಿ ಚಾಲಕನ ವಿರುದ್ಧ ಸಂಸ್ಥೆ ಕ್ರಮ ಕೈಗೊಳ್ಳಬೇಕು ಎಂದು ಬಸ್‌ನ ವಿವರ ಹಾಗೂ ದಂಡದ (ರೂ.1,500) ವಿವರಗಳನ್ನು ಅಲೋಕ್‌ಕುಮಾರ್ ಹಂಚಿಕೊಂಡಿದ್ದಾರೆ. ಅದರ ಜೊತೆಗೆ ಮೊಬೈಲ್‌ನಲ್ಲಿ ಮಾತನಾಡುತ್ತಾ ಕಾರು ಚಾಲನೆ ಮಾಡುತ್ತಾ ಹೋಗುತ್ತಿರುವ ಇತರ ಕೆಲವರ ಫೋಟೋಗಳನ್ನೂ ಹಂಚಿ ಕೊಂಡಿದ್ದಾರೆ ಈ ಮೂಲಕ ಯಾವುದೇ ಸಂಚಾರ ನಿಯಮ ಉಲ್ಲಂಘನೆಯನ್ನೂ ನಾವು ಸಹಿಸುವುದಿಲ್ಲ ಎಂದು ಅವರು ವಾಹನ ಸವಾರರಿಗೆ ಖಡಕ್ ಎಚ್ಚರಿಕೆ ಕೊಟ್ಟಿದ್ದಾರೆ.

ಅಲೋಕ್‌ಕುಮಾರ್ ಅವರ ಈ ಆಗ್ರಹಕ್ಕೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಪ್ರತಿಕ್ರಿಯೆ ನೀಡಿದ್ದು, ಸಲಹೆಗಾಗಿ ಧನ್ಯವಾದಗಳು ಸರ್, ನಿಯಮ ಉಲ್ಲಂಘಿಸಿದ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಡಿಪೋ ಮತ್ತು ವಿಭಾಗಕ್ಕೆ ಸೂಚಿಸಲಾಗಿದೆ ಎಂದು ಹೇಳಿದೆ.

ಇದು ಮಾತ್ರವಲ್ಲದೇ ಸಿದ್ದಲಿಂಗಪುರ ಬಳಿ ಕಾರು (ಕೆಎ05 ಎಎಸ್6353) ಚಾಲಕ ಮೇ.17ರಂದು ಮೊಬೈಲ್‌ನಲ್ಲಿ ಮಾತನಾಡುತ್ತಾ ಕಾರು ಚಾಲನೆ ಮಾಡುತ್ತಿರುವ ಚಿತ್ರವನ್ನು ಕ್ಯಾಮರಾ ಸ್ಪಷ್ಟವಾಗಿ ಸೆರೆಹಿಡಿದಿದ್ದು, ಅದನ್ನು ಅಲೋಕ್ ಕುಮಾರ್ ಪೋಸ್ಟ್ ಮಾಡುವ ಮೂಲಕ ಸ್ವಯಂ ಚಾಲಿತ ಬುದ್ಧಿಮತ್ತೆ ಕ್ಯಾಮರಾ ಹೇಗೆ ನಿಖರವಾಗಿ ಸಂಚಾರ ನಿಯಮ ಉಲ್ಲಂಘನೆಯನ್ನು ಸೆರೆಹಿಡಿಯುತ್ತದೆ ಎಂಬುದನ್ನು ಉದಾಹರಣೆ ಮೂಲಕ ತೋರಿಸಿದ್ದಾರೆ.

ಅಲ್ಲದೇ ಎಕ್ಸ್‌ಪ್ರೆಸ್ ವೇನಲ್ಲಿ ಎಎನ್‌ಪಿಆರ್ (ನಂಬರ್ ಪ್ಲೇಟ್ ರೆಕಗ್ನೇಷನ್) ಕ್ಯಾಮರಾಗಳನ್ನು ಕೂಡ ಅಳವಡಿಸಿದ್ದು ಈ ಕ್ಯಾಮರಾಗಳು ವಾಹನ ಎಷ್ಟೇ ವೇಗವಾಗಿ ಚಲಿಸುತ್ತಿದ್ದರೂ ನಂಬರ್ ಪ್ಲೇಟನ್ನು ನಿಖರವಾಗಿ ಸೆರೆಹಿಡಿಯುತ್ತವೆ.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಭಾನುವಾರ	80.52 ಅಡಿ
ಒಳಹರಿವು	1000 ಕ್ಯೂಸೆಕ್
ಹೊರಹರಿವು	269 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಭಾನುವಾರ	2823.30 ಅಡಿ
ಒಳ ಹರಿವು	277 ಕ್ಯೂಸೆಕ್
ಹೊರ ಹರಿವು	200 ಕ್ಯೂಸೆಕ್

ಹವಾಮಾನ ಇಲಾಖೆಯಿಂದ ಕೊಡಗಿನಲ್ಲಿ ಉತ್ತಮ ಮಳೆ ಮುನ್ಸೂಚನೆ

ಮಳೆಗಾಲ ಎದುರಿಸಲು ಜಿಲ್ಲಾಡಳಿತ ಸನ್ನದ್ಧ

ಮಡಿಕೇರಿ, ಮೇ 19–ಕೊಡಗು ಜಿಲ್ಲೆಯಾದ್ಯಂತ ಪೂರ್ವ ಮುಂಗಾರು ಚುರುಕು ಪಡೆಯುತ್ತಿದ್ದು, ಕೆಲ ಕಡೆಗಳಲ್ಲಿ ಗುಡುಗು ಮಿಂಚು ಸಹಿತ ವ್ಯಾಪಕ ಮಳೆಯಾಗಿರುವ ಬಗ್ಗೆ ವರದಿಯಾದ ಹಿನ್ನೆಲೆಯಲ್ಲಿ ಕೊಡಗು ಜಿಲ್ಲಾಡಳಿತ ಮಳೆಗಾಲ ಎದುರಿಸಲು ಸನ್ನದ್ಧವಾಗುತ್ತಿದೆ.

ಹವಾಮಾನ ಇಲಾಖೆ ಉತ್ತಮ ಮಳೆಯಾಗುವ ಮುನ್ಸೂಚನೆ ನೀಡಿದ್ದು, ಭಾರೀ ಮಳೆ ಸುರಿದಲ್ಲಿ ಕಾವೇರಿ ಸೇರಿದಂತೆ ಅದರ ಉಪ ನದಿಗಳಲ್ಲಿ ಪ್ರವಾಹ ಉಂಟಾಗುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಸಿದ್ಧತೆ ನಡೆಸುತ್ತಿದೆ.

ಸಿಬ್ಬಂದಿಗೆ ಪೂರ್ವ ತರಬೇತಿ: ಮುನ್ನೆಚ್ಚರಿಕೆಯಾಗಿ ಕೊಡಗು ಜಿಲ್ಲಾ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಸಿಬ್ಬಂದಿಗೆ ಕೂಟುಹೊಳೆ ಹಿನ್ನೀರಿನಲ್ಲಿ ಪ್ರವಾಹ ರಕ್ಷಣಾ ಕ್ರಮಗಳ ಕುರಿತು ತರಬೇತಿ ನೀಡಲಾಗಿದೆ.

ರ‍್ಯಾಫ್ಟ್ ಬೋಟ್ ಮೂಲಕ ಹಿನ್ನೀರಿನಲ್ಲಿ ಅಭ್ಯಾಸ ನಡೆಸಿದ ಸಿಬ್ಬಂದಿ ಪ್ರವಾಹ ಎದುರಾದ ಸಂದರ್ಭ ಸ್ಥಳಕ್ಕೆ ಧಾವಿಸುವುದು, ನದಿ ನೀರಿನ ಪ್ರವಾಹಕ್ಕೆ ಎದುರಾಗಿ ಬೋಟ್ ಚಲಾಯಿಸುವುದು, ಜಾನುವಾರುಗಳ ರಕ್ಷಣೆ ಮಾಡುವುದು, ಹಗ್ಗದ ಸಹಾಯದಿಂದ ಜನರನ್ನು ರಕ್ಷಿಸುವುದು ಸೇರಿದಂತೆ ವಿವಿಧ ಕಸರತ್ತು ನಡೆಸುವ ಮೂಲಕ ಸಿಬ್ಬಂದಿಗೆ ಮಳೆಗಾಲದ ವಿಪತ್ತು ಎದುರಿಸಲು ಸಿದ್ಧಗೊಳಿಸಿದೆ.



ರಕ್ಷಣಾ ಉಪಕರಣ ಸನ್ನದ್ಧ: ಜಿಲ್ಲಾ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಕಚೇರಿಯಲ್ಲಿ ಒಟ್ಟು 24 ಸಿಬ್ಬಂದಿಯಿದ್ದು, ಅಗತ್ಯ ತುರ್ತು ರಕ್ಷಣಾ ಉಪಕರಣಗಳನ್ನು ಈಗಾಗಲೇ ಸನ್ನದ್ಧ ಸ್ಥಿತಿಯಲ್ಲಿಡಲಾಗಿದೆ. 2 ರ‍್ಯಾಫ್ಟ್ ಬೋಟ್‌ಗಳು, 1 ಬೋಟ್ ಮೋಟಾರ್, 40 ಜೀವ ರಕ್ಷಕ ಜಾಕೆಟ್‌ಗಳು, 25 ಲೈಫ್ ಬಾಯ್ ರಿಂಗ್‌ಗಳು, ಮರ ಕತ್ತರಿಸುವ ಯಂತ್ರಗಳು, ಭೂ ಕುಸಿತ ಸಂಭವಿಸಿ ರಸ್ತೆ ಬಂದ್ ಆಗುವ ಸಂದರ್ಭ ಉಪಕರಣಗಳನ್ನು ಸಿದ್ಧತೆಗೊಳಿಸಲಾಗಿದೆ.

ಜೊತೆಗೆ ಮಿನಿ ಜನರೇಟರ್, ಕಬ್ಬಿಣ ಕತ್ತರಿಸುವ ಯಂತ್ರಗಳು, ರಾತ್ರಿ ಕಾರ್ಯಾಚರಣೆ ಸಂದರ್ಭ ಬಳಸುವ ಮೊಬೈಲ್ ರೆಸ್ಕ್ಯೂ ವಾಹನವೂ ಸಿದ್ಧವಾಗಿದೆ. ಜಿಲ್ಲಾಡಳಿತದ ಕೋರಿಕೆ ಮೇರೆಗೆ ಕೇಂದ್ರೀಯ ಮೀಸಲು ಪಡೆಯ ಎನ್‌ಡಿಆರ್‌ಎಫ್ ಯೋಧರ ತಂಡ, ರಾಜ್ಯ ಸರ್ಕಾರದ ಎಸ್‌ಡಿಆರ್‌ಎಫ್ ತಂಡ ಕೂಡ ಜಿಲ್ಲೆಗೆ ಆಗಮಿಸಲಿದೆ. ಮಳೆಯ ತೀವ್ರತೆಯನ್ನು ಆಧರಿಸಿ ಈ ರಕ್ಷಣಾ ತಂಡಗಳು ಜಿಲ್ಲೆಗೆ ಬರಲಿವೆ.

ಮೇಲಧಿಕಾರಿಗಳಿಗೆ ವರದಿ

ಜಿಲ್ಲೆಯಲ್ಲಿ ಈ ಬಾರಿ ಉತ್ತಮ ಮಳೆಯಾಗುವ ಕುರಿತು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಅದರಂತೆ ಮುನ್ನೆಚ್ಚರಿಕಾ ಕ್ರಮವಾಗಿ ಇಲಾಖೆ ಸಿಬ್ಬಂದಿಗೆ ಮೊದಲ ಹಂತದಲ್ಲಿ ತರಬೇತಿ ನೀಡಲಾಗಿದೆ ಎಂದು ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಪಿ.ಕೆ.ಶೋಬಿತ್ ತಿಳಿಸಿದ್ದಾರೆ.



ಪ್ರವಾಹ ಎದುರಾಗುವ ಸಾಧ್ಯತೆಗಳಿರುವ ಪ್ರದೇಶಗಳಿಗೆ ಈಗಾಗಲೇ ಭೇಟಿ ನೀಡಿ ಪರಿಶೀಲಿಸಿ, ಇಲಾಖೆ ಮೇಲಧಿಕಾರಿಗಳಿಗೆ ಮದಿ ನೀಡಲಾಗಿದೆ ಮಳೆಗಾಲ ಎದುರಿಸಲು ಈಗಾಗಲೇ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದರು.

ಚೇತರಿಸಿದ ಪೂರ್ವ ಮುಂಗಾರು: ಜಿಲ್ಲೆಯಲ್ಲಿ ದಟ್ಟ ಮೋಡ ಕವಿದ ವಾತಾವರಣವಿದ್ದು, ಪೂರ್ವ ಮುಂಗಾರಿನ ಸೂಚನೆ ಕಂಡು ಬರುತ್ತಿದೆ. ಹವಾಮಾನ ಇಲಾಖೆ ಮುನ್ಸೂಚನೆ ಪ್ರಕಾರ ಮೇ 21ರವರೆಗೂ ಜಿಲ್ಲೆಯ ವಿವಿಧೆಡೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಗಳಿವೆ.

ಉಪನೋಂದಣಾಧಿಕಾರಿ ಅಮಾನತು

ಮಡಿಕೇರಿ, ಮೇ 19–ಖಾತೆ ಬದಲಾವಣೆಗೆ ಲಂಚದ ಬೇಡಿಕೆ ಒಡ್ಡಿದ್ದ ಆರೋಪ ಹಿನ್ನೆಲೆಯಲ್ಲಿ ಮಡಿಕೇರಿ ಉಪನೋಂದಣಿ ಕಚೇರಿಯ ಉಪನೋಂದಣಾಧಿಕಾರಿ ಸೌಮ್ಯಲತಾ ಅವರನ್ನು ಅಮಾನತುಗೊಳಿಸಿ ಶಿಸ್ತು ಪ್ರಾಧಿಕಾರ, ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತೆ ಡಾ.ಬಿ.ಆರ್.ಮಮತಾ ಆದೇಶಿಸಿದ್ದಾರೆ.



ಮಾ.20ರಂದು ಲಂಚಕ್ಕೆ ಬೇಡಿಕೆಯೊಡ್ಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಅಧಿಕಾರಿಗಳು ಮಡಿಕೇರಿ ಉಪನೋಂದಣಾಧಿಕಾರಿ ಕಚೇರಿ ಮೇಲೆ ದಾಳಿ ನಡೆಸಿದ್ದರು. ಭಾಗ ಮಂಡಲ ಕೋರಂಗಾಲ ಗ್ರಾಮದ ಎನ್.ಎಸ್.ಕುಮಾರ್ ಅವರಿಗೆ ಜಾಗದ ಖಾತೆ ಬದಲಾವಣೆಗೆ ಸಬ್‌ರಿಜಿಸ್ಟ್ರಾರ್ ಸೌಮ್ಯಲತಾ 50 ಸಾವಿರ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದು, ಮಧ್ಯವರ್ತಿ ಹರಿದತ್ ಎಂಬಾತ ಹಣ ಪಡೆಯುತ್ತಿದ್ದ ವೇಳೆ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು ಮಧ್ಯವರ್ತಿಯನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಿದ್ದರು.

ಸೌಮ್ಯಲತಾ ಮಡಿಕೇರಿಯಲ್ಲೇ ಕಾರ್ಯನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ಸಾಕ್ಷ್ಯನಾಶ, ತನಿಖೆಗೆ ಅಡ್ಡಿ ಉಂಟಾಗುವ ಸಾಧ್ಯತೆ ಇರುವುದರಿಂದ ಅಮಾನತು ಮಾಡಲಾಗಿದ್ದು, ಅಮಾನತಿನ ಅವಧಿಯಲ್ಲಿ ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೇ ಕೇಂದ್ರ ಸ್ಥಾನ ಬಿಟ್ಟು ಹೋಗುವಂತಿಲ್ಲ ಎಂದು ಮುದ್ರಾಂಕಗಳ ಆಯುಕ್ತೆ ಡಾ.ಬಿ.ಆರ್.ಮಮತಾ ಆದೇಶದಲ್ಲಿ ಸೂಚಿಸಿದ್ದಾರೆ.

ಕಾರು ಡಿಕ್ಕಿ; ಪುರಸಭೆ ಕಾರು ಚಾಲಕ ಸಾವು

ವಿರಾಜಪೇಟೆ, ಮೇ 19–ಕಾರು ಡಿಕ್ಕಿ ಹೊಡೆದ ಪರಿಣಾಮ ವಿರಾಜಪೇಟೆ ಪುರಸಭೆ ಕಾರು ಚಾಲಕ ಮೃತಪಟ್ಟಿರುವ ಘಟನೆ ಚನ್ನಪಟ್ಟಣದ ಬೆಂಗಳೂರು ರಸ್ತೆಯಲ್ಲಿ ಶನಿವಾರ ರಾತ್ರಿ ನಡೆದಿದೆ.



ಪುರಸಭೆ ಕಾರು ಚಾಲಕ ನಿಕ್ಸನ್ (51) ಮೃತಪಟ್ಟಿದ್ದು, ಈತ ಕಚೇರಿ ಕೆಲಸದ ನಿಮಿತ್ತ ಸಿಬ್ಬಂದಿಯೊಂದಿಗೆ ಬೆಂಗಳೂರಿಗೆ ತೆರಳಿ ವಿರಾಜಪೇಟೆಗೆ ವಾಪಸ್ ಆಗುತ್ತಿದ್ದರು. ರಾತ್ರಿ 9.30ರಲ್ಲಿ ಊಟಕ್ಕೆಂದು ಚನ್ನಪಟ್ಟಣದ ರಸ್ತೆಬದಿ ಕಾರು ನಿಲ್ಲಿಸಿ, ಹೋಟೆಲ್‌ಗೆ ಹೋಗುತ್ತಿದ್ದಾಗ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದಿದೆ. ಪರಿಣಾಮ ನಿಕ್ಸನ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮೃತ ನಿಕ್ಸನ್‌ಗೆ ಪತ್ನಿ, ಪುತ್ರ, ಪುತ್ರಿ ಹಾಗೂ ತಾಯಿ ಇದ್ದಾರೆ. ವಿರಾಜಪೇಟೆಯ ಸಂತ ಅನ್ನಮ್ಮ ರುದ್ರಭೂಮಿಯಲ್ಲಿ ಸೋಮವಾರ ಅಂತ್ಯಕ್ರಿಯೆ ನಡೆಯಲಿದೆ. ಈ ಸಂಬಂಧ ಚನ್ನಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೂರು ಚಾಮುಂಡಿ ದೇವಿ ಉತ್ಸವ



ಮತ್ತೂರು ಗ್ರಾಮದಲ್ಲಿ ಚಾಮುಂಡಿ ದೇವಿಯ ಉತ್ಸವ ನಡೆಯಿತು.

ಗೋಣಿಕೊಪ್ಪ, ಮೇ 19–ಮತ್ತೂರು ಗ್ರಾಮದಲ್ಲಿ ಶ್ರೀ ಚಾಮುಂಡಿ ದೇವಿ ಉತ್ಸವ ಭಾನುವಾರ ನಡೆಯಿತು.

ಮೂರು ವರ್ಷಗಳಿಗೊಮ್ಮೆ ನಡೆಯುವ ಉತ್ಸವದಲ್ಲಿ ಪಾಲ್ಗೊಂಡು ಭಕ್ತರು ದೇವಿ ದರ್ಶನ ಪಡೆದು ಪುನೀತರಾದರು. ಬೆಳಗ್ಗೆಯಿಂದಲೇ ವಿವಿಧ ಪೂಜಾ ಕೈಂಕರ್ಯಗಳೊಂದಿಗೆ ದೇವರ ಉತ್ಸವಕ್ಕೆ ಚಾಲನೆ ನೀಡಲಾಯಿತು. ರಾತ್ರಿ ಕರಿ ಚಾಮುಂಡಿ ವಿಷ್ಣುಮೂರ್ತಿ ಭೈರವ, ಕುಟ್ಟೀಚಾತ, ಭಗವತಿ, ನೂಚ್ಚುಟ್ಟಿ ಹಾಗೂ ಹುಲಿ ಚಾಮುಂಡಿ ತೆರೆ ದರ್ಶನ ನೀಡಿತು. ಇದೇ ವೇಳೆ ಕಿರುಗೂರು, ಮತ್ತೂರು, ಕೊಟ್ಟೂರು, ಮುಗುಟಗೇರಿ, ಬೆಸಗೂರು ನಲ್ಲೂರು ಗ್ರಾಮಗಳ ಭಕ್ತರು ಹರಕೆ ಒಪ್ಪಿಸಿದರು. ಹಿರಿಯರಾದ ಚೆಪ್ಪುಡಿರ ಪೊನ್ನಪ್ಪ ಮುಂದಾಳತ್ವದಲ್ಲಿ ಪೂಜಾ ಕಾರ್ಯ ನೆರವೇರಿತು.

ಭ್ರಷ್ಟಾಚಾರ ತಡೆಗೆ ಪ್ರಜೆಗಳು ಮುಂದಾಗಬೇಕು

ವಿರಾಜಪೇಟೆ, ಮೇ 19–ಸಮಾಜದಲ್ಲಿ ತಲೆ ಎತ್ತಿರುವ ಭ್ರಷ್ಟಾಚಾರ ತಡೆಯಲು ಪ್ರಜೆಗಳು ಮುಂದಾಗಬೇಕು ಎಂದು ಪ್ರಧಾನ ಸಿವಿಲ್ ನ್ಯಾಯಾಧೀಶ ಸಂತೋಷ್ ಕೊಠಾರಿ ಹೇಳಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ತಾಲೂಕು ಕಾನೂನು ಸೇವೆಗಳ ಸಮಿತಿ ವತಿಯಿಂದ ರಾಜ್ಯಶಾಸ್ತ್ರ ವಿಭಾಗದ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ 'ಕರ್ನಾಟಕ ಲೋಕಾಯುಕ್ತ ಕಾಯ್ದೆ ಮತ್ತು ಭ್ರಷ್ಟಾಚಾರ ನಿಗ್ರಹ' ಅರಿವು ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರ ಅನೇಕ ಕಾಯ್ದೆಗಳನ್ನು ಜಾರಿಗೆ ತಂದರೂ ಭ್ರಷ್ಟಾಚಾರ ನಿಂತಿಲ್ಲ. ಸಾರ್ವಜನಿಕರು ಭ್ರಷ್ಟಾಚಾರ ನಿಗ್ರಹ ಮಾಡುವ ಮೂಲಕ ಭ್ರಷ್ಟಾಚಾರ ಮುಕ್ತ ದೇಶಕ್ಕೆ ಮುಂದಾಗಬೇಕು. ಇದಕ್ಕೆ ವಿದ್ಯಾರ್ಥಿಗಳ ಪಾತ್ರವೂ ಬಹುಮುಖ್ಯವಾಗಿದೆ ಎಂದರು.

ವಕೀಲ ಸಿಂಧೂರ ಎನ್.ಸ್ವಾಮಿ ಮಾತನಾಡಿ, ಭ್ರಷ್ಟಾಚಾರ ಎಂಬುದು ಲಂಚದ ಒಂದು ಮುಖ. ಇದು ಅನಾದಿಕಾಲದಿಂದಲೂ ಇದೆ. ಇದು ಭಾರತದಲ್ಲಿ ಮಾತ್ರವಲ್ಲ 180 ದೇಶಗಳಲ್ಲೂ ಭ್ರಷ್ಟಾಚಾರ ಇದ್ದು, ಇದರಲ್ಲಿ ಭಾರತ 93ನೇ ಸ್ಥಾನದಲ್ಲಿದೆ. ಹಗರಣ, ಲಂಚ ಕೊಡುವುದು, ಪಡೆಯುವುದು ತಪ್ಪು. ಕರ್ನಾಟಕದಲ್ಲಿ ಲೋಕಾಯುಕ್ತ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಭ್ರಷ್ಟಾಚಾರ ನಿರ್ಮೂಲನೆ ಬಗ್ಗೆ ಮಕ್ಕಳಿಗೂ ತಿಳಿಹೇಳಬೇಕಾಗಿದೆ ಎಂದರು.



ವಿರಾಜಪೇಟೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಉಪನ್ಯಾಸ ಕಾರ್ಯಕ್ರಮವನ್ನು ನ್ಯಾಯಾಧೀಶ ಸಂತೋಷ್ ಕೊಠಾರಿ ಉದ್ಘಾಟಿಸಿದರು.

ಪ್ರಾಂಶುಪಾಲ ಡಾ.ಕೆ.ಸಿ.ದಯಾನಂದ ಮಾತನಾಡಿ, ಲಂಚ ಕೊಟ್ಟರೆ ಮಾತ್ರ ಕೆಲಸ ಆಗುವುದು ಎಂಬುದನ್ನು ಮನಸ್ಸಿನಿಂದ ದೂರ ಮಾಡಬೇಕು. ಪ್ರತಿಯೊಬ್ಬರು ಕಾನೂನು ಅರಿತು ಲಂಚ ಕೊಡುವುದನ್ನು ನಿಲ್ಲಿಸಬೇಕು. ಆಗ ಮಾತ್ರ ಭವ್ಯ ಭಾರತ ನಿರ್ಮಾಣವಾಗಲು ಸಾಧ್ಯ ಎಂದರು.

ಇದೇ ವೇಳೆ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಲಾಯಿತು. ನ್ಯಾಯಾಧೀಶರಾದ ಪ್ರದೀಪ ಪೋತದಾರ, ವಕೀಲರ ಸಂಘದ ಅಧ್ಯಕ್ಷ ಕೆ.ಜಿ.ಅಪ್ಪಣ್ಣ, ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥೆ ಆರ್.ದಿವ್ಯಾ, ಸಹಾಯಕ ಪ್ರಾಧ್ಯಾಪಕಿ ಎಂ.ಬಿ.ದಿವ್ಯಾ, ವಿದ್ಯಾರ್ಥಿಗಳಾದ ಹೆಚ್.ಎ.ಅಜಿತ್, ವಿ.ಮಂಜುಳಾ ಮತ್ತಿತರರು ಇದ್ದರು.

ಐವರು ಕಾಳುಮೆಣಸು ಕಳ್ಳರ ಬಂಧನ



ಮಡಿಕೇರಿ, ಮೇ 19–ಕಾಳುಮೆಣಸು ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಐವರು ಆರೋಪಿಗಳನ್ನು ಗೋಣಿಕೊಪ್ಪ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಅರವತ್ತೊಕ್ಲು ಗ್ರಾಮದ ನಿವಾಸಿಗಳಾದ ಸುಬ್ರಮಣಿ (24), ಮಂಜು(25), ಬೆಳ್ಳಿ(36), ಕರ್ಪ(49) ಹಾಗೂ ಕುಶಾಲ(19) ಬಂಧಿತ ಆರೋಪಿಗಳು. ಇವರ ಬಳಿಯಿಂದ 450 ಕೆಜಿ ಕಾಳುಮೆಣಸು ಮತ್ತು ಕೃತ್ಯಕ್ಕೆ ಬಳಸಿದ 3 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ. ಗೋಣಿಕೊಪ್ಪ ಪೊಲೀಸ್ ಠಾಣೆ ವ್ಯಾಪ್ತಿಯ ಅರವತ್ತೊಕ್ಲು ಗ್ರಾಮದ ನಿವಾಸಿ ಎಂ.ಸುಬ್ಬಯ್ಯ ಅವರ ಮನೆಯ ಸಂಗ್ರಹಣಾ ಕೊಠಡಿಯಲ್ಲಿ ಶೇಖರಿಸಿಟ್ಟಿದ್ದ 450 ಕೆಜಿ ಕಾಳುಮೆಣಸನ್ನು ಮೇ 16ರಂದು ಕಳ್ಳತನ ಮಾಡಲಾಗಿತ್ತು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಕೈಗೊಂಡು ಐವರನ್ನು ಬಂಧಿಸಿದ್ದಾರೆ. ವಿರಾಜಪೇಟೆ ಉಪವಿಭಾಗದ ಡಿವೈಎಸ್‌ಪಿ ಆರ್.ಮೋಹನ್ ಕುಮಾರ್, ಗೋಣಿಕೊಪ್ಪ ವೃತ್ತದ ಸಿಪಿಐ ಶಿವರಾಜ ಮುಧೋಳ್, ಪಿಎಸ್‌ಐಗಳಾದ ರೂಪಾದೇವಿ ಬಿರಾದರ್, ಗೌರಿಶಂಕರ್, ಸಿಬ್ಬಂದಿ, ವಿಶೇಷ ತನಿಖಾ ತಂಡ ಕಾರ್ಯಾಚರಣೆ ನಡೆಸಿದೆ.

ಗುಂಡ್ಲುಪೇಟೆಯಲ್ಲಿ ಪಟ್ಟಲದಮ್ಮ ಜಾತ್ರೆ



ಗುಂಡ್ಲುಪೇಟೆ, ಮೇ 19–ಪಟ್ಟಣದ ಅಧಿದೇವತೆ ಪಟ್ಟಲದಮ್ಮನವರ ಜಾತ್ರಾ ಮಹೋತ್ಸವ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಜಾತ್ರಾ ಮಹೋತ್ಸವದ ಅಂಗವಾಗಿ ಪಟ್ಟಲದಮ್ಮನವರ ದೇವಾಲಯ ಹಾಗೂ ಪಟ್ಟಣದ ಪ್ರಮುಖ ಬೀದಿಗಳನ್ನು ವಿದ್ಯುತ್ ದೀಪಾಲಂಕಾರ ಹಾಗೂ ತಳಿರು ತೋರಣಗಳಿಂದ ಅಲಂಕರಿಸಿ ವಿಶೇಷ ಪೂಜೆ ನಡೆಸಲಾಯಿತು. ನಂತರ ದೇವಾಲಯದಿಂದ ಬೆಳ್ಳಿ ರಥದಲ್ಲಿ ದೇವಿ ಉತ್ಸವ ಮೂರ್ತಿಯನ್ನು ಮೆರವಣಿಗೆ ತರಲಾಯಿತು.

ಮೆರವಣಿಗೆಯಲ್ಲಿ ಕಳಸ ಹೊತ್ತ ಹೆಣ್ಣು ಮಕ್ಕಳು, ಕೇರಳದ ಚಂಡೆಮದ್ದಳೆ, ಬ್ಯಾಂಡ್, ಗಾರುಡಿ ಗೊಂಬೆ, ಯಕ್ಷಗಾನ, ದೈವನರ್ತಕರು ಸೇರಿದಂತೆ ವಿವಿಧ ವೇಷಧಾರಿಗಳು ಸಾಗಿದರು. ಪಟ್ಟಣ ಸೇರಿದಂತೆ ತಾಲೂಕಿನ ಸುತ್ತಮುತ್ತಲ ಗ್ರಾಮಗಳ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ದೇವಾಲಯಕ್ಕೆ ಆಗಮಿಸಿ ದೇವಿ ದರ್ಶನ ಪಡೆದರು. ನಾಯಕ ಸಮುದಾಯದರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಇಂದು ಶ್ರೀನಿವಾಸಪ್ರಸಾದ್‌ರಿಗೆ ಶ್ರದ್ಧಾಂಜಲಿ

ಚಾಮರಾಜನಗರ, ಮೇ 19–ಯಳಂದೂರು ತಾಲೂಕು ವಿ.ಶ್ರೀನಿವಾಸಪ್ರಸಾದ್ ಹಿತೈಷಿಗಳು ಹಾಗೂ ಅಭಿಮಾನಿಗಳ ಒಕ್ಕೂಟಕದ ವತಿಯಿಂದ ಸ್ವಾಭಿಮಾನಿಗೆ ಸಾವಿರ ನುಡಿ ನಮನ ಹೆಸರಿನಲ್ಲಿ ನಾಳೆ(ಮೇ20) ಮಧ್ಯಾಹ್ನ 2.30ಕ್ಕೆ ಯಳಂದೂರಿನ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಶ್ರದ್ಧಾಂಜಲಿ ಸಭೆಯನ್ನು ಏರ್ಪಡಿಸಲಾಗಿದೆ ಎಂದು ಒಕ್ಕೂಟದ ಮಾಂಬಳ್ಳಿ ನಂಜುಂಡಸ್ವಾಮಿ ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಭೆಯನ್ನು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದು, ಕೊಳ್ಳೇಗಾಲ ಶಾಸಕ ಎ.ಆರ್.ಕೃಷ್ಣಮೂರ್ತಿ ಅಧ್ಯಕ್ಷತೆ ವಹಿಸಲಿದ್ದಾರೆ. ಚಾಮರಾಜನಗರ ಶಾಸಕ ಸಿ.ಪುಟ್ಟರಂಗಶೆಟ್ಟಿ ಪ್ರಸಾದ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಿದ್ದು, ಸೂರ್ಯಸಿಂಹಾಸನ ಮಠದ ಶ್ರೀ ಸಿದ್ದಲಿಂಗಶಿವಾಚಾರ್ಯಸ್ವಾಮೀಜಿ ಸನ್ನಿಧ್ಯ ವಹಿಸಲಿದ್ದು, ತಿ.ನರಸೀಪುರದ ನಳಂದ ಬುದ್ಧ ವಿಹಾರದ ಬಂತೇ ಭೋಧಿರತ್ನ ಹಾಗೂ ಶ್ರೀನಿವಾಸಪ್ರಸಾದ್ ಅವರ ಪುತ್ರಿ ಶ್ರೀಮತಿ ಪ್ರತಿಮಾ ಉಪಸ್ಥಿತರಿರುವರು. ಮುಖ್ಯಅತಿಥಿಗಳಾಗಿ ಪಕ್ಷಾತೀತವಾಗಿ ಜಿಲ್ಲೆಯ ಎಲ್ಲಾ ಶಾಸಕರು, ಮಾಜಿ ಶಾಸಕರಾದ ಜಿ.ಎನ್.ನಂಜುಂಡಸ್ವಾಮಿ, ಎಸ್.ಜಯಣ್ಣ, ಆರ್.ನರೇಂದ್ರ, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಚಂದ್ರು ಭಾಗವಹಿಸಲಿದ್ದು, ಹಿರಿಯ ಪತ್ರಕರ್ತ ಕೆ.ಶಿವಕುಮಾರ್ ನುಡಿ ನಮನ ಸಲ್ಲಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಯಳಂದೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೊಂಗನೂರು ಚಂದ್ರು, ಜಿಪಂ ಮಾಜಿ ಉಪಾಧ್ಯಕ್ಷ ಯೋಗೇಶ್, ಕೆಪಿಸಿಸಿ ಮಾಜಿ ಸದಸ್ಯ ಗೌಡಹಳ್ಳಿ ಸ್ವಾಮಿ ಉಪಸ್ಥಿತರಿದ್ದರು.

ಇಂದು ನೇರ ಸಂದರ್ಶನ

ಚಾಮರಾಜನಗರ, ಮೇ 19 –ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಹಾಗೂ ರಾಜ್ ಬಯೋ ಆರ್ಗ್ಯಾನಿಕ್ಸ್ ಸಹಯೋಗದೊಂದಿಗೆ ನಿರುದ್ಯೋಗಿಗಳಿಗೆ ಉದ್ಯೋಗಕ್ಕಾಗಿ ನೇರ ಸಂದರ್ಶನವನ್ನು ಮೇ 20ರಂದು ಬೆಳಗ್ಗೆ 10.30 ರಿಂದ ಮಧ್ಯಾಹ್ನ 3 ಗಂಟೆವರೆಗೆ ನಗರದ ಜಿಲ್ಲಾಡಳಿತ ಭವನದ 2ನೇ ಮಹಡಿ ಕೊಠಡಿ ಸಂಖ್ಯೆ 210ರ ಉದ್ಯೋಗ ವಿನಿಮಯ ಕಚೇರಿಯಲ್ಲಿ ಏರ್ಪಡಿಸಲಾಗಿದೆ.

ಪಿಯುಸಿ ಮತ್ತು ಯಾವುದೇ ಪದವಿ ಹೊಂದಿರುವ 23 ರಿಂದ 40ರ ವಯೋಮಿತಿಯ ಪುರುಷ ಅರ್ಹ ಅಭ್ಯರ್ಥಿಗಳು ಭಾಗವಹಿಸಬಹುದು. ವಿದ್ಯಾರ್ಹತೆಗೆ ಅನುಗುಣವಾಗಿ ತಿಂಗಳಿಗೆ 23 ರಿಂದ 27 ಸಾವಿರ ರೂ.ವರೆಗೆ ವೇತನ ದೊರೆಯಲಿದೆ. ಅಭ್ಯರ್ಥಿಗಳು ತಮ್ಮ ಸ್ವವಿವರ, ಅಂಕಪಟ್ಟಿಗಳ ಪ್ರತಿಗಳೊಂದಿಗೆ ಸಂದರ್ಶನಕ್ಕೆ ಹಾಜರಾಗಬೇಕು. ಮಾಹಿತಿಗೆ ಜಿಲ್ಲಾ ಉದ್ಯೋಗಾಧಿಕಾರಿ ಅಥವಾ ದೂ.ಸಂ: 08226–224430, ಮೊ.ಸಂ: 9611665329 ಅನ್ನು ಸಂಪರ್ಕಿಸುವಂತೆ ಜಿಲ್ಲಾ ಉದ್ಯೋಗಾಧಿಕಾರಿ ಎ.ಮಹಮ್ಮದ್ ಅಕ್ಬರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂಡಿಗನತ್ತ ಗ್ರಾಮಕ್ಕೆ ಭೇಟಿ ನೀಡದ ಜನಪ್ರತಿನಿಧಿಗಳ ವಿರುದ್ಧ ಆಕ್ರೋಶ

ಚಾಮರಾಜನಗರ, ಮೇ 19–ಲೋಕಸಭಾ ಚುನಾವಣೆ ಮತದಾನದ ವೇಳೆ ಇಂಡಿಗನತ್ತ ಗ್ರಾಮದಲ್ಲಿ ಘರ್ಷಣೆ ನಡೆದು 20 ದಿನ ಕಳೆದರು ಈ ಗ್ರಾಮಕ್ಕೆ ಇದುವರೆಗೂ ಯಾವ ಜನಪ್ರತಿನಿಧಿಗಳು ಭೇಟಿ ನೀಡಿಲ್ಲ. ಅಲ್ಲಿನ ಜನರ ಸಮಸ್ಯೆ ಆಲಿಸುವ ಸೌಜನ್ಯವನ್ನು ತೋರಿಲ್ಲ ಎಂದು ಜಿಲ್ಲೆಯ ನಾಗರಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇಂಡಿಗನತ್ತ, ಮೆಂದರೆ ಗ್ರಾಮಗಳಿಗೆ ರೈತ ಸಂಘದ ಮುಖಂಡರು, ಪ್ರಗತಿಪರ ಚಿಂತಕರು, ಸಾಹಿತಿಗಳು, ಅಧಿಕಾರಿಗಳು ಭೇಟಿ ನೀಡಿ, ಅಲ್ಲಿನ ವಾಸ್ತವ ಸ್ಥಿತಿಯನ್ನು ಆಲಿಸಿ, ಗ್ರಾಮಸ್ಥರಿಗೆ ಧೈರ್ಯ ತುಂಬುವ ಕೆಲಸವನ್ನು ಮಾಡಿದರು. ಆದರೆ, ಯಾವುದೇ ಸಮಸ್ಯೆಗಳ ಪರಿಹಾರಕ್ಕೆ ಮುಂದಾಗಿಲ್ಲ.

ಮೂಲ ಸೌಲಭ್ಯವಿಲ್ಲ: ದೇಶಕ್ಕೆ ಸ್ವಾತಂತ್ರ್ಯ ಬಂದು 76 ವರ್ಷ ಕಳೆದರೂ ಮಹದೇಶ್ವರ ಬೆಟ್ಟದ ವ್ಯಾಪ್ತಿಯ ಇಂಡಿಗನತ್ತ, ಮೆಂದರೆ, ಪಡಸಲನತ್ತ ಹೀಗೆ ಹಲವು ಗ್ರಾಮಗಳ ಜನರು ನಾಗರಿಕ ಪ್ರಪಂಚವನ್ನೇ ಕಂಡಿಲ್ಲ.

ಈ ಗ್ರಾಮಗಳಲ್ಲಿ ವಿದ್ಯುತ್, ಶುದ್ಧ ಕುಡಿಯುವ ನೀರು, ಸಮರ್ಪಕ ರಸ್ತೆ ಸೇರಿದಂತೆ ಕನಿಷ್ಠ ಸೌಲಭ್ಯಗಳಿಲ್ಲ. ರಾತ್ರಿಯಾಗುತ್ತಿದ್ದಂತೆ ಗ್ರಾಮಸ್ಥರಿಗೆ ದೀಪದ ಬೆಳಕೊಂದೇ ಆಧಾರ. ಬೇಸಿಗೆಯಲ್ಲಿ ನೀರಿಗಾಗಿ ತೋಡು, ಬಾವಿಗಳತ್ತ ಗ್ರಾಮಸ್ಥರು ಅಲೆದಾಡಬೇಕು. ಯಾವುದೇ ತುರ್ತು ಸಂದರ್ಭವಾದರೂ ಈ ಗ್ರಾಮಗಳ ಜನರು ಬೇರೆ ಊರುಗಳಿಗೆ ನಡೆದುಕೊಂಡೇ ಹೋಗಬೇಕಿದೆ. ಇಷ್ಟೆಲ್ಲ ಸಮಸ್ಯೆಗಳಿದ್ದರು ಈ ಬಗ್ಗೆ ಗಮನಹರಿಸಿ, ಅವರ ಸಮಸ್ಯೆಯನ್ನು ಆಲಿಸಿ ಪರಿಹರಿಸಬೇಕಿದ್ದ ಜನಪ್ರತಿನಿಧಿಗಳು, ಸರ್ಕಾರ ಮೌನವಾಗಿ ಇರುವುದರಿಂದ ಈ ಗ್ರಾಮಗಳ ಜನರ ಪರಿಸ್ಥಿತಿ ಚಿಂತಜನಕವಾಗಿದೆ.

ಮೂರು ಪ್ರಕರಣ ದಾಖಲು: ಇವಿಎಂ ಧ್ವಂಸ ಮಾಡಿ ಅಧಿಕಾರಿಗಳ ಮೇಲೆ ಹಲ್ಲೆ ಮಾಡಿದ್ದರಿಂದ ಇಂಡಿಗನತ್ತ ಗ್ರಾಮದ ಜನರ ಮೇಲೆ ಮೂರು ಪ್ರಕರಣಗಳು ದಾಖಲಾಗಿದ್ದು, 46 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ. ಪ್ರಕರಣ ಸಂಬಂಧ ಇನ್ನೂ ಹಲವರ ಬಂಧನಕ್ಕಾಗಿ ಪೊಲೀಸರು ಮುಂದಾಗಿದ್ದು ಜನರು ಭಯದಿಂದ ಗ್ರಾಮ ತೊರೆದಿದ್ದಾರೆ.

ಮೂಲಸೌಲಭ್ಯ ಸಿಗುವುದೇ?: ಇತ್ತೀಚೆಗೆ ಚಾಮರಾಜನಗರ ಜಿಲ್ಲಾಡಳಿತ, ತಾಲೂಕು ಮಟ್ಟದ ಅಧಿಕಾರಿಗಳು ಗ್ರಾಮಕ್ಕೆ ತೆರಳಿ ಇಂಡಿಗನತ್ತ, ಮೆಂದರೆ ಗ್ರಾಮದ ನಿವಾಸಿಗಳಿಗೆ ಸಾಂತ್ವನ ಹೇಳಿ ಧೈರ್ಯ ತುಂಬಿದ್ದಾರೆ.

ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್ ನೇತೃತ್ವದಲ್ಲಿ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಭೇಟಿ ನೀಡಿ, ಜನರ ಸಮಸ್ಯೆ ಆಲಿಸಿ, ಸೌಲಭ್ಯ ನೀಡುವ ಭರವಸೆ ನೀಡಿದ್ದಾರೆ. ಆದರೆ, ಇದು ಎಷ್ಟರ ಮಟ್ಟಿಗೆ ಈಡೇರುತ್ತದೆ ಎಂಬುದು ಪ್ರಶ್ನೆಯಾಗಿದೆ.

ಒಟ್ಟಾರೆ ಇಂಡಿಗನತ್ತ ಗ್ರಾಮದಲ್ಲಿ ನಡೆದ ಘಟನೆಗೆ ಕಾರಣರಾದವರನ್ನು ಹುಡುಕಿ ಜೈಲಿಗೆ ಕಳುಹಿಸುವ ಕಾಳಜಿಯನ್ನು ಸರ್ಕಾರ ಇವೆರಡು ಗ್ರಾಮಗಳಿಗೆ ಮೂಲ ಸೌಲಭ್ಯ ಕಲ್ಪಿಸಲು ವಹಿಸಿದ್ದರೆ ಇಂತಹ ಘಟನೆ ನಡೆಯುತ್ತಿರಲಿಲ್ಲ. ಇದೀಗ ಘಟನೆ ನಡೆದ ಬಳಿಕವೂ ಯಾವ ಜನಪ್ರತಿನಿಧಿಗಳು ಇತ್ತ ತಲೆ ಹಾಕದಿರುವುದು ಪ್ರಜ್ಞಾವಂತರ ನಾಗರಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಮೂಲಸೌಲಭ್ಯ ಕಲ್ಪಿಸುವುದು ಸರ್ಕಾರದ ಜವಾಬ್ದಾರಿ

ಹನೂರು, ಮೇ 19– ತಾಲೂಕಿನ ಮಲೆಮಹದೇಶ್ವರಬೆಟ್ಟದ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಇಂಡಿಗನತ್ತ ಗ್ರಾಮಕ್ಕೆ ಮೂಲಸೌಲಭ್ಯ ಕಲ್ಪಿಸುವುದು ಸರ್ಕಾರದ ಜವಾಬ್ದಾರಿ ಎಂದು ಮಾಜಿ ಸಚಿವ ಎನ್.ಮಹೇಶ್ ಒತ್ತಾಯಿಸಿದರು.

ತಾಲೂಕಿನ ಕಾಡಾಂಚಿನ ಗ್ರಾಮಗಳಾದ ಮೆಂದರೆ ಹಾಗೂ ಇಂಡಿಗನತ್ತ ಗ್ರಾಮಗಳಿಗೆ ಭೇಟಿ ನೀಡಿ ಜನರ ಸಮಸ್ಯೆಗಳನ್ನು ಆಲಿಸಿ ಮಾತನಾಡಿದ ಅವರು, ಕಳೆದ 70 ವರ್ಷಗಳಿಂದಲೂ ಗ್ರಾಮಕ್ಕೆ ಸಿಗಬೇಕಾದ ಸೌಲಭ್ಯ ಇನ್ನೂ ಏಕೆ ಸಿಕ್ಕಿಲ್ಲ ಎಂಬ ಇಲ್ಲಿನ ಜನರ ಪ್ರಶ್ನೆ ನನ್ನನ್ನೂ ಕಾಡುತ್ತಿದೆ. ಇಲ್ಲಿನ ಜನರು ಚುನಾವಣೆ ಬಹಿಷ್ಕರಿವುದು ಸರಿ. ಇಂಡಿಗನತ್ತ ಗ್ರಾಮಕ್ಕೆ ಮೂಲಸೌಲಭ್ಯ ಕಲ್ಪಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ ಎಂದರು.

ಶೀಘ್ರ ಈ ಗ್ರಾಮಕ್ಕೆ ಅರಣ್ಯ ಇಲಾಖೆ ಕಾನೂನುಗಳನ್ನು ಸಡಿಲಗೊಳಿಸಿ, ಸುಸಜ್ಜಿತ ರಸ್ತೆ, ವಿದ್ಯುತ್, ಕುಡಿಯುವ ನೀರಿನ ವ್ಯವಸ್ಥೆಯನ್ನು ಸರ್ಕಾರ ಹಾಗೂ ಜಿಲ್ಲಾಧಿಕಾರಿ ಕಲ್ಪಿಸಬೇಕು. ಅರಣ್ಯ ಇಲಾಖೆ ಕಾಡುಪ್ರಾಣಿಗಳಿಗೆ ಯಾವುದೇ ತೊಂದರೆ ಆಗದೆ ರೀತಿ ಕೆಲಸ ಮಾಡುತ್ತಿದ್ದೆಯೋ, ಅದೇ ರೀತಿ ಇಲ್ಲಿನ ಜನರಿಗೂ ಮೂಲಸೌಲಭ್ಯ ಕಲ್ಪಿಸಬೇಕು ಎಂದು ತಿಳಿಸಿದರು.



ಇಂಡಿಗನತ್ತ ಗ್ರಾಮಕ್ಕೆ ಮಾಜಿ ಸಚಿವ ಎನ್.ಮಹೇಶ್ ಭೇಟಿ ನೀಡಿ, ಜನರ ಸಮಸ್ಯೆ ಆಲಿಸಿದರು.

ಬಿಜೆಪಿ ಓಬಿಸಿ ಜಿಲ್ಲಾಧ್ಯಕ್ಷ ಜನಧ್ವನಿ ವೆಂಕಟೇಶ್ ಮಾತನಾಡಿ, ನಿಮ್ಮ ಕಷ್ಟ ಸುಖಗಳಲ್ಲಿ ನಾನು ಯಾವಾಗಲೂ ಭಾಗಿಯಾಗುತ್ತೇನೆ ಹಾಗೂ ನಿಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ನೇರವಾಗಿ ನನ್ನನ್ನು ಸಂಪರ್ಕಿಸಿ. ನನ್ನ ಕೈಲಾದ ಸಹಾಯ ಮಾಡುತ್ತೇನೆ ಮುಂದಿನ ದಿನಗಳಲ್ಲಿ ಎರಡು ಸಮುದಾಯಗಳು ಎಂದಿನಂತೆ ಸಹಬಾಳ್ವೆಯಿಂದ ಜೀವನ ಸಾಗಿಸಬೇಕು. ಬೇಡಗಂಪಣ ಸಮುದಾಯದವರು ಕಾರಯ್ಯ, ಬೀರಯ್ಯರಂತೆ ಇಲ್ಲಿ ಸಹಬಾಳ್ವೆಯಿಂದ ಜೀವನ ಸಾಗಿಸುತ್ತಿದ್ದು, ಈ ಪ್ರಕರಣದಲ್ಲಿ ಯಾರೋ ಕಿಡಿಗೇಡಿಗಳು ಮಾಡಿದ ತಪ್ಪಿಗೆ ಅಮಾಯಕರು ಬಲಿಪಶುಗಳಾಗಿದ್ದಾರೆ. ಈ ನಿಟ್ಟಿನಲ್ಲಿ ಸರ್ಕಾರ ಕೂಲಂಕುಶವಾಗಿ ಪರಿಶೀಲಿಸಿ, ಮುಗ್ಧ ಜನರಿಗೆ ನೆಮ್ಮದಿ ಜೀವನ ಕಟ್ಟಿಕೊಡುವ ದಿಸೆಯಲ್ಲಿ ಮುಂದಾಗಬೇಕು. ಅಲ್ಲದೇ, ಗ್ರಾಮದ ಸಮಸ್ಯೆಗಳ ಬಗ್ಗೆ ಅರಿತು ಮೊದಲಿನಂತೆ ಜೀವನ ನಡೆಸಲು ಅನುಕೂಲ ಕಲ್ಪಿಸಿಕೊಡಬೇಕು ಎಂದು ಒತ್ತಾಯಿಸಿದರು.

ಗಳಗಳನೇ ಅತ್ತ ಮಹಿಳೆ: ಗ್ರಾಮಕ್ಕೆ ಬಿಜೆಪಿ ಓಬಿಸಿ ಜಿಲ್ಲಾಧ್ಯಕ್ಷ ಜನಧ್ವನಿ ವೆಂಕಟೇಶ್ ಆಗಮಿಸುತ್ತಿದ್ದಂತೆ ಮಹಿಳೆಯರು ಓಡಿ ಬಂದು ಗಳಗಳನೆ ಅಳುತ್ತಾ ನಮ್ಮ ಗ್ರಾಮದಲ್ಲಿ ಪ್ರಕರಣ ನಡೆದ ದಿನದಿಂದಲೂ ನಮ್ಮ ನೆರವಿಗೆ ನಿಂತಿದ್ದೀರಾ ನಮ್ಮನ್ನು ಜೈಲಿನಿಂದ ಮುಕ್ತಿಗೊಳಿಸಿ. ಹಾಗೆಯೇ ನಮ್ಮ ಗಂಡಂದಿರೂ ಜೈಲಿನಲ್ಲೇ ಇದ್ದಾರೆ. ಅವರನ್ನು ಸಹ ಆದಷ್ಟು ಬೇಗ ಮುಕ್ತಿಗೊಳಿಸಿ, ನಾವೆಲ್ಲರೂ ನಿರಾಪರಾಧಿಗಳು ನಮ್ಮನ್ನು ಈ ಪ್ರಕರಣಗಳಿಂದ ಮುಕ್ತಿಗೊಳಿಸಿ ಎಂದು ಅಂಗಲಾಚಿದರು.

ಆಲೂರು ಹೊಮ್ಮದಲ್ಲಿ ವಿಜೃಂಭಣೆಯ ರಾಮೋತ್ಸವ



ಚಾಮರಾಜನಗರ, ಮೇ 19– ತಾಲೂಕಿನ ಆಲೂರು ಹೊಮ್ಮ ಗ್ರಾಮದಲ್ಲಿ ವಿಜೃಂಭಣೆಯ ರಾಮೋತ್ಸವ ನಡೆಯಿತು.

ಗ್ರಾಮದ ಶ್ರೀ ಪಟ್ಟಾಭಿರಾಮ ಮಂದಿರದಲ್ಲಿ ರಾಮೋತ್ಸವ ಅಂಗವಾಗಿ ಶನಿವಾರ ಮಧ್ಯಾಹ್ನ ಹೋಮ, ಶ್ರೀರಾಮದೇವರಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ರಾತ್ರಿ ಹೂವಿನ ಅಲಂಕೃತ ಪಲ್ಲಕ್ಕಿಯಲ್ಲಿ ಶ್ರೀರಾಮ ದೇವರ ಭಾವಚಿತ್ರವಿಟ್ಟು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಯಲ್ಲಿ ಯುವಕರು ಜೈ ಶ್ರೀರಾಮ್, ಜೈ ವಾಲ್ಮೀಕಿ ಘೋಷಣೆ ಕೂಗಿ ಸಂಭ್ರಮಿಸಿದರು.

ಮೆರವಣಿಗೆ ಸಾಗುವ ರಸ್ತೆಯಲ್ಲಿ ಬಣ್ಣ ಬಣ್ಣದ ಚಿತ್ತಾರ ಬಿಡಿಸಿ ಸ್ವಾಗತಿಸಲಾಯಿತು. ರಾಮೋತ್ಸವ ಅಂಗವಾಗಿ ಗ್ರಾಮವನ್ನು ವಿದ್ಯುತ್ ದೀಪ ಹಾಗೂ ಹಸಿರು ತೋರಣಗಳಿಂದ ಶೃಂಗರಿಸಲಾಗಿತ್ತು ಮೆರವಣಿಗೆಯಲ್ಲಿ ಗೂಳೀಪುರ ಹಾಗೂ ಹೊಮ್ಮ ಗ್ರಾಮದ ನಾಯಕ ಜನಾಂಗದವರು, ಗ್ರಾಮಸ್ಥರು ಭಾಗವಹಿಸಿದ್ದರು.

ಗುಜರಾತ್‌ನಲ್ಲಿ ಚಾ.ನಗರದ ಇಬ್ಬರು ಯುವಕರು ಪತ್ತೆ

ಚಾಮರಾಜನಗರ, ಮೇ 19–ಜಿಲ್ಲೆಯ ಇಬ್ಬರು ಯುವಕರು ಗುಜರಾತ್‌ನ ಬುಜ್ ಜಿಲ್ಲೆಯಲ್ಲಿ ಪತ್ತೆಯಾಗಿದ್ದು, ಇವರನ್ನು ಅಲ್ಲಿನ ಮಾನವ ಜ್ಯೋತಿ (ಎನ್‌ಜಿಒ) ಪುನರ್ವಸತಿ ಕೇಂದ್ರದಲ್ಲಿ ಇರಿಸಲಾಗಿದೆ.

ಮಾನವ ಜ್ಯೋತಿ ಪುನರ್ವಸತಿ ಕೇಂದ್ರದವರು ಚಾಮರಾಜನಗರ ಜಿಲ್ಲೆಯ ಇಬ್ಬರು ಯುವಕರು ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿರುವುದಾಗಿ ತಿಳಿಸಿ, ಮೇ 18ರಂದು ಜಿಲ್ಲಾಧಿಕಾರಿ ಕಚೇರಿ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಕಂಟ್ರೋಲ್ ರೂಂಗೆ ಕರೆ ಮಾಡಿ ವಾರಸುದಾರರ ಪತ್ತೆಗೆ ಸಹಕರಿಸುವಂತೆ ತಿಳಿಸಿದ್ದಾರೆ.

ಇವರಲ್ಲಿ ಒಬ್ಬ ಯುವಕ ತನ್ನ ಹೆಸರನ್ನು ನಾಗರಾಜು, 28 ವರ್ಷ, ತಂದೆ ಹೆಸರು ರಂಗಸ್ವಾಮಿ ಮತ್ತು ತಾಯಿ ಮಹದೇವಮ್ಮ, ಮೇದರ ಬೀದಿ, ಚಾಮರಾಜನಗರ ಜಿಲ್ಲೆ ಎಂದು ತಿಳಿಸಿದ್ದಾನೆ. ಮತ್ತೊಬ್ಬನ ಹೆಸರು ಇರ್ಷಾದ್ ಎಂದು ತಿಳಿದು ಬಂದಿದ್ದು, ಹೆಚ್ಚಿನ ವಿವರ ಲಭ್ಯವಾಗಿಲ್ಲ. ಮಾಹಿತಿಗಾಗಿ ಸದರಿ ಮಾನಸಿಕ ಅಸ್ವಸ್ಥರ ತಂದೆ–ತಾಯಿ ಹಾಗೂ ಕುಟುಂಬಸ್ಥರು ಮತ್ತು ವಾರಸುದಾರರು ರಿತುಬೇನಾ ವರ್ಮಾ, ಸಮಾಜ ಸೇವಕರು, (ಮೊ. 79878 84791), ಇವರನ್ನು ಸಂಪರ್ಕಿಸುವಂತೆ ಜಿಲ್ಲಾಧಿಕಾರಿ ಕಚೇರಿ ಪ್ರಕಟಣೆ ತಿಳಿಸಿದೆ.

ಶಾಂತಮ್ಮ ನಿಧನ



ಚಾಮರಾಜನಗರ, ಮೇ 19–ನಗರದ ಗಂಗಮತಸ್ಥರ ಬೀದಿಯ ಲೇಟ್ ಸಿದ್ದಲಿಂಗಯ್ಯನವರ ಪತ್ನಿ ಶಾಂತಮ್ಮ (74) ಭಾನುವಾರ ನಿಧನರಾದರು. ಮೃತರು ನಗರಸಭಾ ಮಾಜಿ ಸದಸ್ಯ ಚಾ.ಸಿ.ಗೋವಿಂದರಾಜು ಸೇರಿ ಮೂವರು ಪುತ್ರರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ನಗರದ ನಂಜನಗೂಡು ರಸ್ತೆ ರುದ್ರಭೂಮಿಯಲ್ಲಿ ಸೋಮವಾರ ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಒಂದನೇ ಪುಟದಿಂದ

ಮೈಸೂರಲ್ಲಿ ಮಸ್ತ್ ಮಳೆ

ಗುಂಪು ಮನೆಗಳು, ಆಶ್ರಯ ಮನೆಗಳು, ಭಾರತ ನಗರ, ಕುರಿಮಂಡಿ, ಕೆಸರೆ ಭಾಗದ ಹಲವು ಮನೆಗಳಿಗೆ ನೀರು ನುಗ್ಗಿ ನಿವಾಸಿಗಳು ಪರದಾಡುವಂತಾಯಿತು. ನಿರಂತರ ಮಳೆಯಿಂದಾಗಿ ಅಲ್ಲಲ್ಲಿ ವಿದ್ಯುತ್, ದೂರವಾಣಿ, ಇಂಟರ್‌ನೆಟ್ ಸಂಪರ್ಕ ಕಡಿತಗೊಂಡಿದ್ದವು. ನಿರ್ವಹಣೆ ತಡವಾಗಿದ್ದರಿಂದ ಹಲವರಿಗೆ ತೀವ್ರ ತೊಂದರೆಯುಂಟಾಯಿತು.

ಮೈಸೂರು ಮಹಾನಗರ ಪಾಲಿಕೆ ಅಭಯ ತಂಡ, ತೋಟಗಾರಿಕೆ ವಿಭಾಗದ ಸಿಬ್ಬಂದಿ ಹಾಗೂ ಸೆಸ್ಕ್ ಅಧಿಕಾರಿಗಳು ನಗರದಾದ್ಯಂತ ಕಾರ್ಯಾಚರಣೆ ನಡೆಸಿ, ಮಳೆಯಿಂದ ಹೆಚ್ಚು ಹಾನಿಯಾಗದಂತೆ ನಿಗಾ ವಹಿಸಿದ್ದರು. ಮಿಂಚು, ಗುಡುಗು, ಗಾಳಿ ಇಲ್ಲದಿದ್ದರಿಂದ ಎಲ್ಲೂ ಅವಘಡ ಸಂಭವಿಸಿಲ್ಲ. ವಿದ್ಯಾರಣ್ಯಪುರಂನಲ್ಲಿ ಮುರಿದು ಬಿದ್ದಿದ್ದ ಮರದ ರೆಂಬೆಯನ್ನು ಅಭಯ ತಂಡ-2ರ ಸಿಬ್ಬಂದಿ ತೆರವುಗೊಳಿಸಿ, ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಮುಂಜಾಗ್ರತೆ ಕ್ರಮವಾಗಿ ಸಿವಿಲ್ ಮತ್ತು ಸಂಚಾರ ಪೊಲೀಸರು ಗಸ್ತಿನಲ್ಲಿದ್ದು, ಸಾರ್ವಜನಿಕರಿಗೆ ತೊಂದರೆಯಾಗದಂತೆ ಎಚ್ಚರ ವಹಿಸಿದ್ದರು.

ಉರುಳಿದ ವಾಹನ: ಎಡಬಿಡದೆ ಮಳೆ ಸುರಿಯುತ್ತಿದ್ದ ಕಾರಣ ಭಾರೀ ವಾಹನಗಳ ಸಂಚಾರವೂ ಕಷ್ಟಸಾಧ್ಯವಾಗಿತ್ತು. ಐಪಿಎಸ್‌ನಗರದ ಬಳಿ ರಿಂಗ್‌ರಸ್ತೆಯಲ್ಲಿ ಸರಕು ಸಾಗಣೆ ವಾಹನವೊಂದು ಚಾಲಕನ ನಿಯಂತ್ರಣ ತಪ್ಪಿ ಉರುಳಿ ಬಿದ್ದಿತ್ತು. ಘಟನೆಯಿಂದ ವಾಹನ ಜಖಂಗೊಂಡಿತಾದರೂ ಅದೃಷ್ಟವಶಾತ್ ಚಾಲಕ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಘಟನೆಯಿಂದ ಬೇರೆ ವಾಹನಗಳಿಗೂ ಯಾವುದೇ ತೊಂದರೆಯಾಗಿಲ್ಲ ಎಂದು ಸಿದ್ಧಾರ್ಥನಗರ ಸಂಚಾರ ಠಾಣೆ ಪೊಲೀಸರು ತಿಳಿಸಿದ್ದಾರೆ.

ವಾಹನಗಳ ಲೈಟ್ ಆನ್: ಕಾರ್ಮೋಡ ಕವಿದಿದ್ದ ಕಾರಣ ಸಂಜೆ 4 ಗಂಟೆಗೇ ಕತ್ತಲು ಆವರಿಸಿತ್ತು. ಜೊತೆಗೆ ಎಡಬಿಡದೆ ಮಳೆ ಸುರಿಯುತ್ತಿದ್ದ ಕಾರಣ ರಸ್ತೆ ಸ್ಪಷ್ಟವಾಗಿ ಕಾಣದಂತಹ ಸ್ಥಿತಿ ನಿರ್ಮಾಣವಾಗಿತ್ತು. ಎದುರಿಗೆ ಬರುವ ವಾಹನಗಳನ್ನು ಸ್ವಲ್ಪ ದೂರದಲ್ಲೇ ಗುರುತಿಸುವುದು ಕಷ್ಟವಾಗಿತ್ತು. ಪರಿಣಾಮ ದ್ವಿಚಕ್ರ ವಾಹನ ಮಾತ್ರವಲ್ಲ ಕಾರು ಇನ್ನಿತರ ದೊಡ್ಡ ವಾಹನಗಳ ಹೆಡ್ ಲೈಟ್ ಆನ್ ಮಾಡಿ, ಚಾಲನೆ ಮಾಡಿದ್ದು ಕಂಡು ಬಂದಿತು. ಜಡಿ ಮಳೆಯಿಂದ ಕೆಲ ದ್ವಿಚಕ್ರ ವಾಹನಗಳು ಹಾಗೂ ಆಟೋಗಳು ಕೆಟ್ಟುನಿಂತಿದ್ದವು. ಅವುಗಳನ್ನು ಮಳೆಯಲ್ಲೇ ತಳ್ಳಿಕೊಂಡು ಮೆಕ್ಯಾನಿಕ್‌ಗಳನ್ನು ಹುಡುಕುತ್ತಿದ್ದರು. ಸಬರ್ಬನ್ ಬಸ್ ನಿಲ್ದಾಣದ ಎದುರಿನ ಕಮಾನು ಗೇಟ್ ಬಳಿ ಕೆಟ್ಟುನಿಂತಿದ್ದ ಆಟೋವನ್ನು ಮಳೆಯಲ್ಲೇ ರಿಪೇರಿ ಮಾಡುತ್ತಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಗ್ಯಾರಂಟಿ ಸರ್ಕಾರ

ಹೆಚ್ಚಳ ಮಾಡಲಾಯಿತು. ಇದು ವಿಪಕ್ಷಗಳ ಟೀಕೆಗೆ ಮತ್ತೊಂದು ಅಸ್ತ್ರವಾಯಿತು. ಆದರೆ, ವಿದ್ಯುತ್ ದರ ಹೆಚ್ಚಳ ಮಾಡಿರುವುದು ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರವಾಗಿದ್ದು, ಅದು ಈಗ ಅನುಷ್ಠಾನಗೊಂಡಿದೆ ಎಂದು ಸಿದ್ದರಾಮಯ್ಯ ಸಮರ್ಥಿಸಿಕೊಂಡರು.

ಗೃಹಲಕ್ಷ್ಮಿ: ಕುಟುಂಬದ ಯಜಮಾನಿಗೆ ತಿಂಗಳಿಗೆ 2 ಸಾವಿರ ರೂ. ನೀಡುವ 'ಗೃಹಲಕ್ಷ್ಮಿ' ಯೋಜನೆ ಅನುಷ್ಠಾನದ ವೇಳೆಯೂ ಸಿದ್ದರಾಮಯ್ಯ ಟೀಕೆಗೆ ಗುರಿಯಾಗಬೇಕಾಯಿತು. 2 ಸಾವಿರ ಅತ್ತೆಗಾ? ಸೊಸೆಗಾ? ಎಂದು ಬಿಜೆಪಿ ಶಾಸಕರು ವಿಧಾನಸಭೆಯಲ್ಲೇ ಪ್ರಶ್ನಿಸಲಾರಂಭಿಸಿದರು. ಕುಟುಂಬದ ಯಜಮಾನಿ ಯಾರೆಂದು ನಿರ್ಧಾರ ಮಾಡುವುದು ಆಯಾಯ ಕುಟುಂಬದ ಜವಾಬ್ದಾರಿ ಎಂದು ಸರ್ಕಾರ ಹೇಳಿದಾಗ ವಿಪಕ್ಷಗಳು 2 ಸಾವಿರ ಕೊಟ್ಟು ಕುಟುಂಬದಲ್ಲಿ ಅತ್ತೆ-ಸೊಸೆ ಮಧ್ಯೆ ಘರ್ಷಣೆ ಉಂಟುಮಾಡಲಾಗುತ್ತಿದೆ ಎಂದು ಆರೋಪಿಸಿದ್ದವು.

ಯುವನಿಧಿ: ವಿದ್ಯಾವಂತ ಪದವೀಧರರಿಗೆ ನೆರವಾಗುವ ನಿಟ್ಟಿನಲ್ಲಿ ಅನುಷ್ಠಾನಗೊಳಿಸಿದ 'ಯುವನಿಧಿ' ಯೋಜನೆಯಡಿ ಪದವೀಧರರಿಗೆ 3 ಸಾವಿರ, ಡಿಪ್ಲೊಮಾದವರಿಗೆ 1500 ರೂ. ಮಾಸಿಕ ನೆರವು ಪ್ರಕಟಿಸಲಾಯಿತು. ಈ ಯೋಜನೆಯನ್ನೂ ಕೂಡ ವಿಪಕ್ಷಗಳು ಟೀಕಿಸಿದವು. ಈ ಶೈಕ್ಷಣಿಕ ವರ್ಷದಲ್ಲಿ ಪದವೀಧರರಾದವರಿಗೆ ಮಾತ್ರ ನೆರವು ನೀಡುವುದಾದರೆ ಈ ಹಿಂದೆ ಪದವೀಧರರಾಗಿ ಉದ್ಯೋಗ ಸಿಗದೇ ಇರುವವರು ಏನಾಗಬೇಕು ಎಂದು ವಿಪಕ್ಷಗಳು ಪ್ರಶ್ನಿಸಲಾರಂಭಿಸಿದವು. ಸಿದ್ದರಾಮಯ್ಯ ತಾವು ಮುಖ್ಯಮಂತ್ರಿಯಾದ ಆರು ತಿಂಗಳ ಒಳಗಾಗಿ ಹಂತ ಹಂತವಾಗಿ ತಾವು ಚುನಾವಣೆ ವೇಳೆ ನೀಡಿದ್ದ ಭರವಸೆಯಂತೆ 5 ಗ್ಯಾರಂಟಿಗಳನ್ನೂ ಅನುಷ್ಠಾನಗೊಳಿಸಿ, ನಮ್ಮ ಸರ್ಕಾರ ನುಡಿದಂತೆ ನಡೆಯುತ್ತಿದೆ ಎಂದು ಘೋಷಿಸಿದರು.

ಅಭಿವೃದ್ಧಿ ಶೂನ್ಯ ಆರೋಪ: ಸಿದ್ದರಾಮಯ್ಯನವರ ಎಲ್ಲಾ ಗ್ಯಾರಂಟಿಗಳನ್ನು ಟೀಕಿಸುತ್ತಿದ್ದ ವಿಪಕ್ಷಗಳು ಗ್ಯಾರಂಟಿಯಿಂದ ಖಜಾನೆ ಖಾಲಿಯಾಗುತ್ತದೆ, ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯುವುದಿಲ್ಲ ಎಂದು ಹೇಳಲಾರಂಭಿಸಿದಾಗ ಸಿದ್ದರಾಮಯ್ಯ ಅಭಿವೃದ್ಧಿ ಕಾರ್ಯಗಳೊಂದಿಗೆ ಗ್ಯಾರಂಟಿಯನ್ನು ಅನುಷ್ಠಾನಗೊಳಿಸುತ್ತಿದ್ದೇವೆ ಎಂದು ಹೇಳಿದರು. ಆದರೆ ಶಾಸಕರ ಪ್ರದೇಶಾಭಿವೃದ್ಧಿ ನಿಧಿ ಸೇರಿದಂತೆ ಯಾವುದೇ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರದಿಂದ ಹಣ ಬಿಡುಗಡೆಯಾಗುತ್ತಿಲ್ಲ ಎಂದು ವಿಪಕ್ಷಗಳು ಬೀದಿಗಿಳಿದಿದ್ದವು. ಈ ಆರೋಪ ಈಗಲೂ ಕೂಡ ಕೇಳಿಬರುತ್ತಿದೆ.

ಕಾನೂನು ಸಮರ: ಈ ಮಧ್ಯೆ, ಸಿದ್ದರಾಮಯ್ಯ ಅವರು, ಕೇಂದ್ರ ಸರ್ಕಾರ ರಾಜ್ಯದ ಪಾಲಿನ ತೆರಿಗೆ ಹಣವನ್ನು ಸರಿಯಾಗಿ ನೀಡುತ್ತಿಲ್ಲ. ಬರ ನಿರ್ವಹಣೆಯ ಹಣವನ್ನೂ ಕೂಡ ಬಿಡುಗಡೆ ಮಾಡುತ್ತಿಲ್ಲ ಎಂದು ಆರೋಪಿಸಲಾರಂಭಿಸಿದರು. ಈ ವೇಳೆ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿ ಕರ್ನಾಟಕಕ್ಕೆ ಕೊಡಬೇಕಾದ ಹಣವನ್ನು ಸಂಪೂರ್ಣವಾಗಿ ಕೊಡಲಾಗಿದೆ. ಈ ಸರ್ಕಾರ ಆ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಂಡಿದೆ ಎಂದು ಹೇಳಿದಾಗ, ಜನರು ಕೂಡ ಅದನ್ನು ನಂಬಲಾರಂಭಿಸಿದರು. ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರಕ್ಕೆ ಸೆಡ್ಡು ಹೊಡೆದ ಸಿದ್ದರಾಮಯ್ಯನವರು ಕೇಂದ್ರದಿಂದ ರಾಜ್ಯಕ್ಕೆ ಬರ ಪರಿಹಾರದ ಹಣ ಬಿಡುಗಡೆ ಆಗಿಲ್ಲ ಎಂದು ಆರೋಪಿಸಿ, ಮಧ್ಯೆ ಪ್ರವೇಶಿಸುವಂತೆ ಸುಪ್ರೀಂಕೋರ್ಟ್ ಮೊರೆಹೊಕ್ಕರು. ಆ ವೇಳೆ ಕರ್ನಾಟಕಕ್ಕೆ ಬರ ಪರಿಹಾರದ ಹಣವನ್ನು ಶೀಘ್ರವೇ ಬಿಡುಗಡೆ ಮಾಡುವುದಾಗಿ ಕೇಂದ್ರದಿಂದ ಸುಪ್ರೀಂಕೋರ್ಟ್‌ಗೆ ಪ್ರಮಾಣಪತ್ರ ನೀಡಲಾಯಿತು. ನಂತರ ಕೆಲವೇ ದಿನಗಳಲ್ಲಿ ಮೊದಲನೇ ಹಂತದ ಬರ ಪರಿಹಾರ ಹಣವನ್ನು ರಾಜ್ಯಕ್ಕೆ ಬಿಡುಗಡೆ ಮಾಡಲಾಯಿತು.

'ಕಾವೇರಿ' ವರಿ!: ಒಂದೆಡೆ ಆರ್ಥಿಕ ಮುಗ್ಗಟ್ಟಿನಿಂದ ಸಿದ್ದರಾಮಯ್ಯ ಸರ್ಕಾರ ನಲುಗುತ್ತಿದ್ದರೆ, ಮತ್ತೊಂದೆಡೆ ಮಳೆಯ ಅಭಾವದ ನಡುವೆಯೂ ತಮಿಳುನಾಡಿಗೆ ಕಾವೇರಿ ನೀರು ಬಿಡಬೇಕು ಎಂದು ಕಾವೇರಿ ನೀರು ನಿಯಂತ್ರಣಾ ಸಮಿತಿ ಪದೇ ಪದೆ ಆದೇಶ ನೀಡುತ್ತಿದ್ದುದ್ದೂ ಕೂಡ ಸಿದ್ದರಾಮಯ್ಯ ಸರ್ಕಾರಕ್ಕೆ ನುಂಗಲಾರದ ತುತ್ತಾಗಿ ಪರಿಣಮಿಸಿತ್ತು. ಈ ಕಾರಣದಿಂದಾಗಿ ಬೆಂಗಳೂರು ಸೇರಿದಂತೆ ರಾಜ್ಯದ ಹಲವೆಡೆ ಕುಡಿಯುವ ನೀರಿನ ಅಭಾವ ತಲೆದೋರಿತು.

ಕಾನೂನು-ಸುವ್ಯವಸ್ಥೆ: ಇಷ್ಟೆಲ್ಲದರ ನಡುವೆ ಬೆಂಗಳೂರಿನ 'ದಿ ರಾಮೇಶ್ವರಂ ಕೆಫೆ' ಬಾಂಬ್ ಸ್ಫೋಟ, ವಿಧಾನಸೌಧದಲ್ಲಿ ಪಾಕಿಸ್ತಾನ್ ಪರ ಘೋಷಣೆ, ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ನಡೆದ ಕೊಲೆಗಳು ವಿಪಕ್ಷಗಳಿಗೆ ಅಸ್ತ್ರವಾಗಿ ಪರಿಣಮಿಸಿದ್ದು, ರಾಜ್ಯದಲ್ಲಿ ಕಾನೂನು-ಸುವ್ಯವಸ್ಥೆ ಹದಗೆಟ್ಟಿದೆ ಎಂಬ ಆರೋಪವೂ ವಿಪಕ್ಷಗಳಿಂದ ಸಿದ್ದರಾಮಯ್ಯರ ಮೇಲೆ ಬರುತ್ತಿದೆ. ಈ ನಡುವೆ ಹಾಸನ ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯದ ಪೆನ್‌ಡ್ರೈವ್ ಹಂಚಿಕೆ ಪ್ರಕರಣವನ್ನೂ ಕೂಡ ವಿಪಕ್ಷಗಳು ರಾಜ್ಯ ಸರ್ಕಾರದ ಕೊರಳಿಗೆ ಸುತ್ತಿವೆ. ಪೆನ್‌ಡ್ರೈವ್ ಹಂಚಿಕೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭಾಗಿಯಾಗಿದ್ದಾರೆ ಎಂಬ ಆರೋಪಗಳು ವಿಪಕ್ಷಗಳಿಂದ ಕೇಳಿಬರುತ್ತಿವೆ.

ಸಿದ್ದರಾಮಯ್ಯ ಸರ್ಕಾರ ವರ್ಷ ಪೂರೈಸುತ್ತಿರುವ ಸಮಯದಲ್ಲೇ ಲೋಕಸಭಾ ಚುನಾವಣೆ ನಡೆದಿದ್ದು, ಇದರ ಫಲಿತಾಂಶ ಸಿದ್ದರಾಮಯ್ಯನವರ ಸಾಧನೆಯನ್ನು ಓರೆಗೆ ಹಚ್ಚುವುದು 'ಗ್ಯಾರಂಟಿ' ಎಂದು ಹೇಳಲಾಗುತ್ತಿದೆ.

ರಸ್ತೆ ವಿಭಜಕಕ್ಕೆ ಬೈಕ್ ಡಿಕ್ಕಿ: ಯುವಕ ಸಾವು

ಈ ವೇಳೆ ಅದು ಡಿಕ್ಕಿ ಹೊಡೆದ ರಭಸಕ್ಕೆ ಸುಮಾರು 10 ಮೀಟರ್ ದೂರದಲ್ಲಿ ಬಿದ್ದಿದೆ. ಬೈಕ್ ಚಾಲನೆ ಮಾಡುತ್ತಿದ್ದ ರಕ್ಷಿತ್ ತಲೆಗೆ ತೀವ್ರ ಗಾಯವಾಗಿ ರಕ್ತಸ್ರಾವದಿಂದ ಸ್ಥಳದಲ್ಲೇ ಅಸುನೀಗಿದ್ದಾನೆ. ಕಾಲಿನ ಮೂಳೆ ಮುರಿದು ಒದ್ದಾಡುತ್ತಿದ್ದ ಹಿಂಬದಿ ಸವಾರ ತೇಜಸ್‌ನನ್ನು ಅರ್ಧಗಂಟೆ ಬಳಿಕ ಆ ಮಾರ್ಗ ಬರುತ್ತಿದ್ದ ಸಾರ್ವಜನಿಕರು ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೆ ಸ್ಥಳಕ್ಕೆ ದಾವಿಸಿದ ಕೆಆರ್ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಶರತ್‌ಕುಮಾರ್, ಸಬ್‌ಇನ್ಸ್‌ಪೆಕ್ಟರ್‌ಗಳಾದ ಮಹಾವೀರ, ಅಶ್ವಿನಿ ಹಾಗೂ ಸಿಬ್ಬಂದಿ ಸ್ಥಳ ಮಹಜರು ನಡೆಸಿ ಮೃತ ದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸಾಗಿಸಿ, ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದರು.


ರಾತ್ರಿಯಿಡೀ ನಿದ್ರೆಗೆಟ್ಟಿದ್ದರಿಂದ ನಿಯಂತ್ರಣ ಕಳೆದುಕೊಂಡ ಬೈಕ್ ಅಪ್ಪಳಿಸಿ ದುರಂತ ಸಂಭವಿಸಿದೆ. ಹೆಲ್ಮೆಟ್ ಧರಿಸಿದ್ದರೆ ರಕ್ಷಿತ್ ಪ್ರಾಣ ಉಳಿಯುತ್ತಿತ್ತು ಎಂದು ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಅಭಿಪ್ರಾಯಪಟ್ಟಿದ್ದಾರೆ.

ಇಂದು ಲೋಕಸಭೆ 5ನೇ ಹಂತದ ಮತದಾನ

ಕರಣ್ ಭೂಷಣ್ ಸಿಂಗ್, ಕೀರ್ತಿ ವರ್ಧನ್ ಸಿಂಗ್, ತನುಜ್ ಪೂಥನ್ ಸಿಂಗ್ ಸೇರಿದಂತೆ ನರೇಶ್ ಉತ್ತಮ್ ಪಟೇಲ್, ಉಜ್ವಲ್ ನಿಕಮ್, ರಾಹುಲ್ ಶೆವಾಲೆ, ಅನಿಲ್ ದೇಸಾಯಿ, ವರ್ಷ ಗಾಯಕ್ವಾಡ್, ಸಂಜಯ್ ದಿನ ಪಾಟೀಲ್, ರವೀಂದ್ರ ವೈಕರ್, ಶ್ರೀಕಾಂತ್ ಶಿಂಧೆ, ಹೇಮಂತ್ ಗೋಡ್ಸೆ, ಭಾರತಿ ಪವಾರ್ ಚುನಾವಣೆ ಎದುರಿಸುತ್ತಿದ್ದಾರೆ. ಲೋಕಸಭೆ ಚುನಾವಣೆ 2024 ಒಟ್ಟು 7 ಹಂತಗಳಲ್ಲಿ ನಡೆಯುತ್ತಿದೆ. ಮೊದಲ ಹಂತ ಏಪ್ರಿಲ್ 19ರಂದು ನಡೆದಿದ್ದು, 2ನೇ ಹಂತ ಏಪ್ರಿಲ್ 26, ಮೂರನೇ ಹಂತ ಮೇ 7, ನಾಲ್ಕನೇ ಹಂತ ಮೇ 13ರಂದು ನಡೆದಿದೆ. ಐದನೇ ಹಂತ ಮೇ 20, ಆರನೇ ಹಂತ ಮೇ 25 ಮತ್ತು ಏಳನೇ ಹಂತದ ಮತದಾನ ಜೂನ್ 1 ರಂದು ನಡೆಯಲಿದ್ದು, ಮತ ಎಣಿಕೆ ಜೂನ್ 4 ರಂದು ನಡೆಯಲಿದೆ.

ಬದುಕಿಗೆ ಬೇಕಾದಂತೆ ಫಿಲಾಸಫಿ ರಚಿಸಿಕೊಳ್ಳುವ ಪರಿಸ್ಥಿತಿ ಉದ್ಭವಿಸಿದೆ

● ಹಾಸ್ಯ ಸಾಹಿತಿ ಪ್ರೊ. ಎಂ.ಕೃಷ್ಣೇಗೌಡ ವಿಷಾದ ● ಪ್ರಕಾಶಕ ಟಿ.ಎಸ್.ಛಾಯಾಪತಿ ಸಂಸ್ಕೃತಿ ಪುರಸ್ಕಾರ ಪ್ರಶಸ್ತಿ ಪ್ರದಾನ; ನಾಲ್ಕು ಪುಸ್ತಕಗಳ ಲೋಕಾರ್ಪಣೆ ● ನವೋದಯದಲ್ಲಿ ಸಾಹಿತ್ಯ ಸಾಹಿತಿಯ ಘನತೆ ಹೆಚ್ಚಿಸುತ್ತಿತ್ತು





ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಭಾನುವಾರ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ ಸುಸ್ಥೆಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ತ.ಸು.ಶಾಮರಾಯರ 'ಮೂರು ತಲೆಮಾರು', ಟಿ.ಎಸ್.ಲಕ್ಷ್ಮೀದೇವಿ ಅವರ 'ಸೃಜನಶೀಲರು', ಡಾ.ನೀಲಗಿರಿ ತಳವಾರರ 'ನೂರಾರು ನುಡಿಗಟ್ಟುಗಳು', ಹಾಗೂ ಆರ್.ದಿಲೀಪ್ ಕುಮಾರ್ ಅವರ 'ಶಬ್ದ ಸೋಪಾನ' ಕೃತಿಯನ್ನು ಹಾಸ್ಯ ಸಾಹಿತಿ ಪ್ರೊ.ಎಂ.ಕೃಷ್ಣೇಗೌಡ ಲೋಕಾರ್ಪಣೆ ಮಾಡಿದರು. ಇದೇ ವೇಳೆ (ಬಲಚಿತ್ರ) ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಅವರಿಗೆ 'ಪ್ರಕಾಶಕ ಟಿ.ಎಸ್. ಛಾಯಾಪತಿ ಸಂಸ್ಕೃತಿ ಪುರಸ್ಕಾರ' ನೀಡಿ ಗೌರವಿಸಲಾಯಿತು.

ಮೈಸೂರು,ಮೇ 19(ಎಂಟಿವೈ)- ನವೋದಯ ಕಾಲದ ಆರಂಭದಲ್ಲಿದ್ದ ಸಾಹಿತಿ ಹಾಗೂ ಲೇಖಕರು ಪ್ರಾತಃಸ್ಮರಣೀಯರು. ಅವರ ಸಾಹಿತ್ಯ ಆಯಾಯ ಸಾಹಿತಿಯ ಘನತೆಯನ್ನು ಎತ್ತಿ ಹಿಡಿಯುತ್ತಿದ್ದವು ಎಂದು ಹಾಸ್ಯ ಸಾಹಿತಿ ಪ್ರೊ.ಎಂ. ಕೃಷ್ಣೇಗೌಡ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಭಾನುವಾರ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಕನ್ನಡ ಸಾಹಿತ್ಯ ಕಲಾಕೂಟ ಹಾಗೂ ಹೊಯ್ಸಳ ಕನ್ನಡ ಸಂಘದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಪ್ರಕಾಶಕ ಟಿ.ಎಸ್.ಛಾಯಾಪತಿ ಸಂಸ್ಕೃತಿ ಪುರಸ್ಕಾರ-2024 ಹಾಗೂ ನಾಲ್ಕು ಪುಸ್ತಕಗಳ ಲೋಕಾರ್ಪಣಾ ಕಾರ್ಯಕ್ರಮದಲ್ಲಿ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಅವರು, ದಿನ ಕಳೆದಂತೆ ಸಾಹಿತ್ಯ ಕ್ಷೇತ್ರದಲ್ಲೂ ಸಾಕಷ್ಟು ಬದಲಾವಣೆಯಾಗಿವೆ. ಲೇಖಕರನ್ನು ನೋಡದೇ ಸಾಹಿತ್ಯವನ್ನು ನೋಡಿ ಎನ್ನುವಂತಹ ಮಾತು ಕೇಳಿ ಬರುತ್ತಿವೆ. ಆದರೆ, ನವೋದಯ ಕಾಲದ ಆರಂಭದಲ್ಲಿದ್ದ ಅನೇಕ ಸಾಹಿತಿಗಳು, ಬರಹಗಾರರು ತಮ್ಮ ಘನತೆಯುಳ್ಳ ಸಾಹಿತ್ಯದಿಂದ ಹೆಚ್ಚಿನ ಗೌರವಕ್ಕೆ ಪಾತ್ರರಾಗುತ್ತಿದ್ದರು. ಹಾಗಾಗಿ ಆ ಸಾಹಿತಿ, ಲೇಖಕರು ಪ್ರಾತಃಸ್ಮರಣೀಯರಾಗಿದ್ದರು. ಘನತೆಯಿಂದ ಬದುಕುತ್ತಿದ್ದರು. ಆದರೆ, ಪ್ರಸ್ತುತ ಸಂದರ್ಭದಲ್ಲಿ ಸಾಹಿತ್ಯ ಬರೆದವರು ಯಾರು ಎಂಬ ಪ್ರಶ್ನೆ ಕೇಳುತ್ತಾರೆ. ಮತ್ತೆ ಕೆಲವರು ಲೇಖಕರು ಹಾಗೂ ಸಾಹಿತಿಗಳನ್ನು ನೋಡದೆ ಸಾಹಿತ್ಯವನ್ನು ನೋಡಬೇಕು ಎಂದು ಹೇಳುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ತಿಳಿಸಿದರು.

ತಮಗೆ ಬೇಕಾದಂತೆ ಫಿಲಾಸಫಿ: ಇತ್ತೀಚಿನ ದಿನಗಳಲ್ಲಿ ತಮಗೆ ಬೇಕಾದಂತೆ ಫಿಲಾಸಫಿ ರಚಿಸಿಕೊಳ್ಳುವುದನ್ನು ಕಾಣುತ್ತೇವೆ. ಫಿಲಾಸಫಿಗೆ ಅನುಗುಣವಾಗಿ ಬದುಕಲು ಸಾಧ್ಯವಾಗುತ್ತಿಲ್ಲ. ಆ ಕಾರಣದಿಂದ ಜಗತ್ತಿನಲ್ಲಿ ಜನ ತಾವು ಹೇಗೆ ಬದುಕುತ್ತಿದ್ದಾರೋ ಅದಕ್ಕೆ ತಕ್ಕಂತೆ ಫಿಲಾಸಫಿ ಕಟ್ಟಿಕೊಳ್ಳುತ್ತಿದ್ದಾರೆ ಎಂದರು.

ತಾತ್ವಿಕತೆಯೂ ಬದಲಾಗುತ್ತಿದೆ: ಒಂದೆಡೆ ಫಿಲಾಸಫಿಯನ್ನು ತಮಗೆ ಬೇಕಾದಂತೆ ರಚಿಸಿಕೊಳ್ಳುತ್ತಿದ್ದರೆ, ಮತ್ತೊಂದೆಡೆ ತಾತ್ವಿಕತೆಯನ್ನೂ ಬೇಕಾದಂತೆ ಬದಲಿಸಿಕೊಳ್ಳುತ್ತಿದ್ದಾರೆ. ಮನುಷ್ಯ ಹೇಗೆ ಬದುಕುತ್ತಿದ್ದಾನೋ, ಅದಕ್ಕೆ ತಕ್ಕಂತೆ ತಾತ್ವಿಕತೆಯನ್ನೂ ರಚಿಸಿಕೊಳ್ಳುತ್ತಿದ್ದಾನೆ. ಇದರಿಂದ ಮೌಲ್ಯಗಳಿಗೆ ಕುಂದುಂಟಾಗುತ್ತಿದೆ ಎಂದು ವಿಷಾದಿಸಿದರು.

ಸಾಹಿತ್ಯದ ಉದ್ದೇಶ ಬದಲಾಗುತ್ತಿದೆ: ಕಾಲ ಕಳೆದಂತೆ ಸಾಹಿತ್ಯದ ಉದ್ದೇಶವೂ ಬದಲಾಗುತ್ತಿವೆ. ಈ ಹಿಂದೆ ಸಾಹಿತ್ಯ ರಚನೆ ಮಾಡುವುದು, ಓದುವುದು ಪುಣ್ಯದ ಕೆಲಸ, ಮೋಕ್ಷ ಸಿಗುತ್ತದೆ ಎನ್ನುತ್ತಿದ್ದರು. ಆದರೆ, ಕೆಲ ವರ್ಷಗಳಿಂದ ಇದರ ವ್ಯಾಖ್ಯಾನಗಳು ಬದಲಾಗುತ್ತಿವೆ. ಸಮಾಜದಲ್ಲಿನ ಅನ್ಯಾಯ. ಅಸಮಾನತೆಯನ್ನೂ ಸಾಹಿತ್ಯವು ಖಂಡಿಸಬೇಕು, ಪ್ರತಿಭಟಿಸಬೇಕು ಎನ್ನುವಂತಹ ಕೂಗು ಕೇಳಿ ಬರುತ್ತಿದೆ. ಸಾಮಾಜಿಕ ವಿದ್ಯಮಾನಗಳಿಗೆ ಸ್ಪಂದಿಸಬೇಕು. ಕಲಾತ್ಮಕವಾಗಿ ಇರಬೇಕು. ಸತ್ಯಾನ್ವೇಷಣೆ ಮಾಡಬೇಕು ಎಂಬ ಕಾವ್ಯದ ಉದ್ದೇಶಗಳು ವಿಸ್ತರಿಸುತ್ತಲೇ ಹೋಗುತ್ತಿವೆ ಎಂದು ತಿಳಿಸಿದರು.


ಆದರೆ, ಕಲೆಗಳ ಇತರೆ ಪ್ರಕಾರಗಳಿಗೆ ವ್ಯಾಖ್ಯಾನಗಳು ಅನ್ವಯಿಸುತ್ತಿಲ್ಲ. ಸಂಗೀತವನ್ನು ಸಂತೋಷ, ಆನಂದಕ್ಕಾಗಿ ಮಾತ್ರ ಹಾಡಲಾಗುತ್ತದೆ. ಕಲೆಯ ಇತರ ಪ್ರಕಾರಗಳಿಗೆ ಇದಲುಉಸಾಬರಿ ಸಾಹಿತಿಗಳಿಗೆ ಇದೆ ಆದರೆ ಇದರ ಘನತೆಯನ್ನು ನಿಭಾಯಿಸುವ ವ್ಯಕ್ತಿತ್ವ ನಮ್ಮಲ್ಲಿ ಈಗಿರುವ ಬಹುಪಾಲು ಸಾಹಿತಿಗಳಿಗೆ ಇಲ್ಲದೇ ಇರುವುದು ವಿಷಾದದ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದರು.

ತ.ಸು. ಶಾಮರಾಯರು, ತಳುಕಿನ ವೆಂಕಣ್ಣಯ್ಯ, ಬೇಂದ್ರೆ ಕುವೆಂಪು, ಕಾರಂತರಂತಹ ತೂಕದ ವ್ಯಕ್ತಿತ್ವದ ಸಾಹಿತಿಗಳು ನಮ್ಮಲ್ಲಿ ಕಡಿಮೆ ಆಗುತ್ತಿದ್ದಾರೆ. ಅಂತಹವರನ್ನು ಓದಿದಷ್ಟು ನಮ್ಮ ಮನಶುದ್ಧಿ ಆಗುತ್ತದೆ. ಆದರೆ ಇತ್ತೀಚೆಗೆ ದೊಡ್ಡ ಮನುಷ್ಯರ ವ್ಯಕ್ತಿತ್ವವನ್ನು ಅನುಮಾನಿಸುವ ಮನಸ್ಥಿತಿ ನಮ್ಮಲ್ಲಿ ಹೆಚ್ಚಾಗಿದೆ. ಮನುಷ್ಯನ ಘನತೆಯ ವಿಶ್ವಾಸ ಕಳೆದು ಹೋಗುತ್ತಿದೆ. ಪ್ರಕಾಶನ ಜಗತ್ತು ಈ ಹಿಂದೆ ಇದ್ದಂತೆ ಈಗ ಇಲ್ಲ. ಮರ್ಯಾದಸ್ಥರು ಇಲ್ಲಿ ಬದುಕುವುದು ಕಷ್ಟವಾಗುತ್ತಿದೆ. ಹೀಗಾಗಿ ಪ್ರಕಾಶನ, ಮುದ್ರಣ ಸವಾಲಾಗುತ್ತಿದೆ ಎಂದರು.

ಪುಸ್ತಕಗಳ ಕುರಿತು ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ ಮಾತನಾಡಿದರು. ಇಂದು ಬಿಡುಗಡೆ ಮಾಡಲಾದ ಡಾ.ನೀಲಗಿರಿ ತಳವಾರು ಬರೆದ ನೂರಾರು ನುಡಿಗಟ್ಟುಗಳು, ಆರ್.ದಿಲೀಪ್ ಕುಮಾರ್ ಅವರ ಶಬ್ದ ಸೋಪಾನ ಸುಂದರವಾಗಿ ಮೂಡಿ ಬಂದಿದೆ ಎಂದು ಶ್ಲಾಘಿಸಿದರು.

ಇದೇ ವೇಳೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಅವರಿಗೆ 'ಪ್ರಕಾಶಕ ಟಿ.ಎಸ್. ಛಾಯಾಪತಿ ಸಂಸ್ಕೃತಿ ಪುರಸ್ಕಾರ' ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಕನ್ನಡ ಪುಸ್ತಕ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಾನಸ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ ಪ್ರಕಾಶಕರಾದ ಪ್ರತಿಭಾ ಛಾಯಾಪತಿ, ಹೊಯ್ಸಳ ಕನ್ನಡ ಸಂಘದ ಕಾರ್ಯದರ್ಶಿ ರಂಗನಾಥ್ ಮೈಸೂರು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಹುಟ್ಟುಹಬ್ಬದ ಶುಭಾಶಯಗಳು...



ಮೈಸೂರಿನ ಹೆಸರಾಂತ ಉದ್ಯಮಿ ಗೋವಿಂದೇಗೌಡ ಅವರ ಹುಟ್ಟುಹಬ್ಬದ ಅಂಗವಾಗಿ ಹೋಟೆಲ್ ರಿಯೋ ಮೆರಿಡಿಯನ್ ಸಿಬ್ಬಂದಿ ವರ್ಗ ಹಾಗೂ ಕುಟುಂಬ ವರ್ಗದ ವತಿಯಿಂದ ಗೋವಿಂದೇಗೌಡ ದಂಪತಿಯನ್ನು ಸನ್ಮಾನಿಸಲಾಯಿತು. ಈ ವೇಳೆ ಅಶೋಕ್, ಅರುಣ್, ಪ್ರವೀಣ್ ಉಪಸ್ಥಿತರಿದ್ದರು.

ರಥೋತ್ಸವದ ವೇಳೆ ಚಕ್ರದಡಿ ಸಿಲುಕಿ ಇಬ್ಬರು ಭಕ್ತರ ದಾರುಣ ಸಾವು



ಗದಗ: ರಥೋತ್ಸವದ ವೇಳೆ ಚಕ್ರದಡಿ ಸಿಲುಕಿ ಇಬ್ಬರು ಭಕ್ತರು ಸ್ಥಳದಲ್ಲೇ ದಾರುಣವಾಗಿ ಮೃತಪಟ್ಟ ಘಟನೆ ಗದಗ ಜಿಲ್ಲೆಯ ರೋಣ ಪಟ್ಟಣದಲ್ಲಿ ಶನಿವಾರ ವರದಿಯಾಗಿದೆ. ಗದಗ ಜಿಲ್ಲೆಯ ರೋಣ ಪಟ್ಟಣದಲ್ಲಿ ಸಂಜೆ ನಡೆದ ವೀರಭದ್ರೇಶ್ವರ ಜಾತ್ರೆಯ ರಥೋತ್ಸವದ ವೇಳೆ ಈ ಘಟನೆ ನಡೆದಿದೆ.

ಮೃತರಲ್ಲಿ ಒಬ್ಬನನ್ನು ರೋಣದ ಕೆವಿಜಿ ಬ್ಯಾಂಕ್‌ನಲ್ಲಿ ಪಿಗ್ಮಿ ಕಲೆಕ್ಟರ್ ಆಗಿದ್ದ ಮಲ್ಲನಗೌಡ ಲಿಂಗನಗೌಡರ(52) ಎಂದು ಗುರ್ತಿಸಲಾಗಿದೆ. ಚಕ್ರದ ಮುಂದೆ ಬಿದ್ದು ಮುಖ ನಜ್ಜುಗುಜ್ಜಾಗಿದ್ದರಿಂದ ಮತ್ತೊಬ್ಬನ ಗುರುತು ಇನ್ನೂ ಪತ್ತೆಯಾಗಿಲ್ಲ. ಘಟನೆಯ ಬಳಿಕ ರಥೋತ್ಸವ ಸ್ಥಗಿತಗೊಂಡಿದ್ದು, ಜನರನ್ನು ನಿಯಂತ್ರಿಸಲು ಪೊಲೀಸರು ಹರಸಾಹಸ ಪಡಬೇಕಾಯಿತು.

ಹೆಚ್.ವಿ.ರಾಜೀವ್ ಸ್ನೇಹ ಬಳಗದಿಂದ 'ಲಕ್ಷ ವೃಕ್ಷೋತ್ಸವ'

ಜೂ.8, ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಸ್ಥಿತಿಯಲ್ಲಿ ಉಚಿತವಾಗಿ ಗಿಡಗಳ ವಿತರಿಸುವ ಕಾರ್ಯಕ್ಕೆ ಚಾಲನೆ





ಪ್ರತಿದಿನ ಒಂದು ತಂಬಿಗೆ ನೀರು ಹಾಕಿ...

"ಪರಿಸರ ಉಳಿಸಬೇಕು, ಗಿಡ-ಮರಗಳನ್ನು ಬೆಳೆಸಬೇಕು ಎಂದು ಸಾಕಷ್ಟು ಚರ್ಚೆ ಮಾಡುತ್ತೇವೆ. ಚರ್ಚೆ ಮಾಡಿದಂತೆ ಶೇ.5 ರಷ್ಟು ಗಮನ ಕೊಟ್ಟು ನಮ್ಮ ಮನೆ ಮುಂದೆ, ಅಕ್ಕ-ಪಕ್ಕದಲ್ಲಿರುವ ಗಿಡ-ಮರಗಳಿಗೆ ಪ್ರತಿ ನಿತ್ಯ ಒಂದು ತಂಬಿಗೆ ನೀರು ಹಾಕಿದರೆ ಸಾಕು. ಪ್ರಕೃತಿ ಇದ್ದರೆ ನಾವು. ನೀರು ಹಾಕಿ ಬೆಳೆಸಿದ ಗಿಡ ಮರವಾಗಿ ನೆರಳು ನೀಡುವಂತಾದರೆ ನೀರು ಹಾಕಿದ ತೃಪ್ತಿ ದೊರೆಯುತ್ತದೆ. ಅಲ್ಲದೆ ಪ್ರಾಕೃತಿಕ ಅಸಮತೋಲನ ನಿಯಂತ್ರಣಕ್ಕೂ ಸಹಕಾರಿಯಾಗಲಿದೆ.

-ಹೆಚ್.ವಿ.ರಾಜೀವ್, ಮಾಜಿ ಅಧ್ಯಕ್ಷ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ

ಮೈಸೂರು, ಮೇ 19(ಎಂಕೆ)- 'ಪ್ರಕೃತಿ ಇದ್ದರೆ ನಾವು', 'ಮನೆಗೊಂದು ಮರ ಸಾಲದು, ಮನೆಗೊಬ್ಬರಿಗೊಂದು ಮರ ಇರಬೇಕು' ಎಂಬ ಪರಿಕಲ್ಪನೆಯೊಂದಿಗೆ 'ಲಕ್ಷ ವೃಕ್ಷೋತ್ಸವ' ಆಚರಣೆಗೆ ಹೆಚ್.ವಿ. ರಾಜೀವ್ ಸ್ನೇಹ ಬಳಗ ಮುಂದಾಗಿದೆ.

ಜಾಗತಿಕ ತಾಪಮಾನದಲ್ಲಾಗುತ್ತಿರುವ ಬದಲಾವಣೆ ಗಮನದಲ್ಲಿಟ್ಟುಕೊಂಡು ಕಳೆದ 5 ವರ್ಷಗಳಿಂದ ಅರಳಿ, ಬೇವು, ಆಲ, ಮಹಾಘನಿ, ಬೇಲ, ಹೊಂಗೆ, ಕಾಡು ಬೆಂಡೆ ಸೇರಿದಂತೆ ಹಲವು ಬಗೆಯ ಕಾಡು ಜಾತಿಯ ಗಿಡಗಳನ್ನು ಬೆಳೆಸಿ, ಉಚಿತವಾಗಿ ವಿತರಣೆ ಮಾಡುವ ಮೂಲಕ ಪ್ರಕೃತಿ ಉಳಿಸುವ ಕಾರ್ಯದಲ್ಲಿ ತೊಡಗಿಕೊಂಡಿರುವ ರಾಜೀವ್ ಸ್ನೇಹ ಬಳಗ, ಜೂನ್ 8ರಂದು 'ಲಕ್ಷ ವೃಕ್ಷೋತ್ಸವ' ಕಾರ್ಯಕ್ರಮದ ಮೂಲಕ ಲಕ್ಷ ಗಿಡಗಳನ್ನು ವಿತರಣೆ ಮಾಡಲಾಗುತ್ತಿದೆ.

ಹಲವು ಸಮಾಜಮುಖಿ ಸಂಘ-ಸಂಸ್ಥೆಗಳ ಸಹಕಾರದೊಂದಿಗೆ 2019 ರಿಂದ ಆರಂಭಿಸಿದ ಗಿಡಗಳನ್ನು ವಿತರಿಸುವ ಕಾರ್ಯ ಯಶಸ್ವಿಯಾಗಿ ಸಾಗುತ್ತಿದ್ದು, ಮೈಸೂರು ವಿಮಾನ ನಿಲ್ದಾಣದ ಸುತ್ತಮುತ್ತ, ಹೆಚ್.ಡಿ. ಕೋಟೆ ಮುಖ್ಯರಸ್ತೆ, ಹಲವು ಶಾಲಾ-ಕಾಲೇಜು ಆವರಣ, ಆಸ್ಪತ್ರೆಗಳು, ಸಾರ್ವಜನಿಕ ಉದ್ಯಾನವನಗಳು ಹಾಗೂ ಸಾರ್ವಜನಿಕ ಆಟದ ಮೈದಾನಗಳ ಸುತ್ತ, ರುದ್ರಭೂಮಿಗಳಲ್ಲಿ ಹಸಿರೀಕರಣಕ್ಕೆ ಕಾರಣವಾಗಿದೆ.



ಸಸ್ಯರಾಶಿಯೊಳಗೆ ಹೆಚ್.ವಿ.ರಾಜೀವ್

ವಾತಾವರಣದಲ್ಲಾಗುತ್ತಿರುವ ಬದಲಾವಣೆ ಹಾಗೂ ಹೆಚ್ಚುತ್ತಿರುವ ಉಷ್ಣಾಂಶವನ್ನು ಗಮನಿಸಿ, ಪ್ರಕೃತಿ ಇದ್ದರೆ ನಾವು ಎಂಬ ಸಾರ್ವಕಾಲಿಕ ಸತ್ಯ ನುಡಿಯಂತೆ ಸಣ್ಣ ಸಸಿಗಳನ್ನು ತಂದು ಪೋಷಣೆ ಮಾಡಿ, 7 ರಿಂದ 8 ಅಡಿ ಎತ್ತರದವರೆಗೆ ಬೆಳೆಸಿ ಗಿಡಗಳನ್ನು ವಿತರಣೆ ಮಾಡುತ್ತಿದ್ದೇವೆ. 2019ರಿಂದ ಪ್ರತೀ ವರ್ಷ 15-20 ಸಾವಿರ ಗಿಡಗಳನ್ನು ಉಚಿತವಾಗಿ ವಿತರಿಸುತ್ತಾ ಬಂದಿದ್ದು, ಈ ವರ್ಷಕ್ಕೆ ಒಂದು ಲಕ್ಷ ಗಿಡಗಳನ್ನು ವಿತರಿಸಿದಂತಾಗಲಿದೆ. ಈ ಸುಸಂದರ್ಭವನ್ನು ಸ್ಮರಣೀಯವಾಗಿಸಲು 'ಲಕ್ಷ ವೃಕ್ಷೋತ್ಸವ' ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗುತ್ತಿದೆ. ಅಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಇನ್ನಿತರೆ ಗಣ್ಯರ ಸಮ್ಮುಖದಲ್ಲಿ 15-20 ಸಾವಿರ ಗಿಡಗಳನ್ನು ಉಚಿತವಾಗಿ ವಿತರಣೆ ಮಾಡಲಾಗುವುದು ಎಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಧರ್ಮಸ್ಥಳ ಗ್ರಾಮೋದ್ಯೋಗ, ಪತಂಜಲಿ ಯೋಗ ಶಿಕ್ಷಣ, ಜಿಲ್ಲಾ ಪತ್ರಕರ್ತರ ಸಂಘ ಸೇರಿದಂತೆ ಮೈಸೂರಿನ ಪ್ರಮುಖ ಸಮಾಜಮುಖಿ ಸಂಘ-ಸಂಸ್ಥೆಗಳು ಹಾಗೂ ವ್ಯಕ್ತಿಗಳೊಂದಿಗೆ ಚರ್ಚಿಸಿ ಅರಣ್ಯ ಇಲಾಖೆ ಮಾರ್ಗದರ್ಶನದೊಂದಿಗೆ ನಮ್ಮದೇ ಸ್ವಂತ ಜಾಗದಲ್ಲಿ ಸಣ್ಣ ಸಸಿಗಳನ್ನು ತಂದು ಬೆಳೆಸಿ, ವಿತರಣೆ ಮಾಡುವ ಕಾರ್ಯವನ್ನು ಆರಂಭಿಸಲಾಯಿತು. ಸಣ್ಣ ಸಸಿಗಳನ್ನು ನೀಡಿದರೆ ಬಿಸಿಲಿಗೆ ಒಣಗಿ ಹೋಗುತ್ತವೆ ಎಂಬ ಕಾರಣಕ್ಕೆ 7-8 ಅಡಿಯಷ್ಟು ಎತ್ತರ ಬೆಳೆಸಿ ವಿತರಣೆ ಮಾಡಲು ನಿರ್ಧರಿಸಲಾಯಿತು. ಇದುವರೆಗೆ ಮೈಸೂರು ನಗರ ಹಾಗೂ ಜಿಲ್ಲೆಯ ಹಲವೆಡೆ ವಿತರಣೆ ಮಾಡಿದ ಗಿಡಗಳು ಮರವಾಗಿ ಬೆಳೆದು ನೆರಳು ನೀಡುವಂತಾಗಿವೆ ಎಂದು ಹರ್ಷ ವ್ಯಕ್ತಪಡಿಸಿದರು.

ಗಿಡ-ಮರಗಳನ್ನು ಬೆಳೆಸುವುದು ಅರಣ್ಯ ಇಲಾಖೆಗೆ ಮಾತ್ರ ಸಂಬಂಧಿಸಿದ್ದಲ್ಲ. ನಾವಿಂದು ಮರಗಳನ್ನು ಕಡಿಯುತ್ತಿರುವ ಪ್ರಮಾಣ ನೋಡಿದರೆ, ಮನೆಗೊಬ್ಬರಂತೆ ಒಂದೊಂದು ಗಿಡಗಳನ್ನು ನೆಟ್ಟು ಬೆಳೆಸಬೇಕಿದೆ. ಅಲ್ಲದೆ ಪ್ರತಿಯೊಬ್ಬರಲ್ಲಿಯೂ ಗಿಡ-ಮರಗಳನ್ನು ಬೆಳೆಸುವ ಮನೋಭಾವನೆ ಬರಬೇಕು. ಪರಿಸರ ದಿನಾಚರಣೆ ವೇಳೆ ಎಲ್ಲೋ ಒಂದು ಕಡೆ ಗಿಡಕ್ಕೆ ನೀರು ಹಾಕುವುದಲ್ಲ. ತಮ್ಮ ಮನೆ ಮುಂದೆ, ಜಮೀನುಗಳಲ್ಲಿ ಗಿಡಗಳನ್ನು ನೆಟ್ಟು ಪೋಷಣೆ ಮಾಡಿದರಷ್ಟೇ ಪರಿಸರ ಸಂರಕ್ಷಣೆ, ಹೆಚ್ಚಾಗುತ್ತಿರುವ ಜಾಗತಿಕ ತಾಪಮಾನ ನಿಯಂತ್ರಣ ಸಾಧ್ಯ ಎಂದರು.

ವಿತರಣೆ: ಪ್ರತೀ ವರ್ಷ ಸುಮಾರು 25 ಲಕ್ಷ ರೂ.ಗಳ ಖರ್ಚು ಮಾಡಿ ಬೆಳೆಸಿದ ಗಿಡಗಳನ್ನು ಸಂರಕ್ಷಣೆ ಮಾಡುವ ಮನಸ್ಥಿತಿಯುಳ್ಳವರಿಗೆ ಮಾತ್ರ ವಿತರಣೆ ಮಾಡುತ್ತಿದ್ದೇವೆ. ಮೈಸೂರು ನಗರ ಪಾಲಿಕೆಯೂ ಪ್ರತೀ ವರ್ಷ 2-3 ಸಾವಿರ ಗಿಡಗಳನ್ನು ಪಡೆಯುತ್ತಿದೆ. ಹಾಗೆಯೇ ಮುಡಾ ವ್ಯಾಪ್ತಿಯ ಬಡಾವಣೆಗಳಲ್ಲಿಯೂ ಸಾವಿರಾರು ಗಿಡಗಳನ್ನು ನೆಡಲಾಗಿದೆ. ಜೊತೆಗೆ ಕೆಲ ಪ್ರಮುಖ ವ್ಯಕ್ತಿಗಳೂ ಸಹ ಸಾವಿರ, 2 ಸಾವಿರದಂತೆ ಗಿಡಗಳನ್ನು ಪಡೆದು ತಮ್ಮ ತಮ್ಮ ಜಮೀನು, ತೋಟಗಳಲ್ಲಿ ಬೆಳೆಸುತ್ತಿದ್ದಾರೆ. ಎನ್‌ಜಿಓ, ಶೈಕ್ಷಣಿಕ ಸಂಸ್ಥೆಗಳು ತಮ್ಮ ಸಂಸ್ಥೆಗಳ ಆವರಣದಲ್ಲಿ ಬೆಳೆಸಲು ಗಿಡಗಳನ್ನು ಪಡೆಯುತ್ತಿದ್ದು, ಈ ವರ್ಷಕ್ಕೆ ಒಂದು ಲಕ್ಷ ಗಿಡಗಳನ್ನು ವಿತರಣೆ ಮಾಡಿದಂತಾಗಲಿದೆ ಎಂದರು.

ನಗರದಲ್ಲಿ ಕಾಡು ಗಿಡಗಳನ್ನು ನೆಡಬೇಕು: ಮೈಸೂರು ನಗರದಲ್ಲಿ ಬಹುತೇಕ ಗುಲ್‌ಮೊಹರ್ ಮರಗಳಿವೆ. ಅವುಗಳು ಹೂ ಬಿಡುವ ಮರಗಳಾಗಿದ್ದು, ಸುಂದರವಾಗೇನೋ ಇವೆ. ಆದರೆ ಗಾಳಿ-ಮಳೆಗೆ ಮುರಿದು ಬೀಳುವ ಪ್ರಮಾಣ ಹೆಚ್ಚು. ಆದ್ದರಿಂದ ಗುಲ್‌ಮೊಹರ್ ಮರಗಳಿಗಿಂತ ಗಟ್ಟಿಯಾಗಿರುವ ಕಾಡು ಜಾತಿಯ ಗಿಡಗಳನ್ನು ನೆಟ್ಟು ಬೆಳೆಸಬೇಕು. ಮುಖ್ಯವಾಗಿ ರಸ್ತೆಬದಿಯಲ್ಲಿರುವ ಮರಗಳ ಸುತ್ತ ಜಾಗ ಬಿಡುವುದು ಅವಶ್ಯವಾಗಿದೆ. ಇದರಿಂದ ಬುಡಸಮೇತ ಮುರಿದು ಬಿದ್ದ ಮರದ ಜಾಗದಲ್ಲಿ ಮತ್ತೊಂದು ಗಿಡ ನೆಟ್ಟು ಬೆಳೆಸಲು ಅನುಕೂಲವಾಗಲಿದೆ. ಇದರ ಬಗ್ಗೆ ಮೈಸೂರು ಪಾಲಿಕೆ ಚಿಂತಿಸಬೇಕಿದೆ ಎಂದು ಅಭಿಪ್ರಾಯಪಟ್ಟರು.

ಅಗಲಿದ ಐದು ನಕ್ಷತ್ರಗಳಲ್ಲಿ ಶ್ರೀನಿವಾಸಪ್ರಸಾದ್ ಒಬ್ಬರು

ನುಡಿನಮನ ಕಾರ್ಯಕ್ರಮದಲ್ಲಿ ಶಾಸಕ ಅನಿಲ್ ಗುಣಗಾನ

ಹೆಚ್.ಡಿ.ಕೋಟೆ, ಮೇ 19– ಹೋರಾಟದ ಮೂಲಕ ಮೇಲೆ ಬಂದ ಮತ್ತು ಜನಸಾಮಾನ್ಯರಿಗೆ ತೀರ ಹತ್ತಿರವಾಗಿದ್ದ ಜಿಲ್ಲೆಯ 5 ನಕ್ಷತ್ರಗಳಲ್ಲಿ ಸಂಸದ ವಿ.ಶ್ರೀನಿವಾಸಪ್ರಸಾದ್ ಕೂಡ ಒಬ್ಬರು ಎಂದು ಶಾಸಕ ಅನಿಲ್ ತಿಳಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ತಾಲೂಕು ಆದಿಕರ್ನಾಟಕ ಮಹಾಸಭಾ ಹೆಚ್.ಡಿ.ಕೋಟೆ ಮತ್ತು ಸರಗೂರು ವತಿಯಿಂದ ನಡೆದ ಸ್ವಾಭಿಮಾನಿ ವಿ.ಶ್ರೀನಿವಾಸಪ್ರಸಾದ್ ನುಡಿನಮನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಚಿವ ಮಹದೇವಪ್ರಸಾದ್, ತಮ್ಮ ತಂದೆ ಎಸ್.ಚಿಕ್ಕಮಾದು, ಮಾಜಿ ಸಂಸದ ಆರ್. ಧ್ರುವನಾರಾಯಣ್, ಸಂಸದ ವಿ.ಶ್ರೀನಿವಾಸಪ್ರಸಾದ್ ಮತ್ತು ಮಾಜಿ ಶಾಸಕ ವಾಸು. ಈ 5 ನಕ್ಷತ್ರಗಳು ಹೋರಾಟದ ಮೂಲಕ ಬೆಳಕಿಗೆ ಬಂದವರು. ಇಂದು ಅವರೆಲ್ಲರೂ ಹಾಕಿಕೊಟ್ಟ ಹಾದಿಯಲ್ಲಿ ನಾವು ಹೋಗಬೇಕಾಗಿದೆ ಎಂದರು.

ಸಂವಿಧಾನವನ್ನು ಪ್ರತಿಯೊಬ್ಬರಿಗೂ ಪರಿಚಯ ಮಾಡಿಕೊಡುವ ಮತ್ತು ಜನತೆಗೆ ಮುಟ್ಟಿಸುವ ಉದ್ದೇಶದಿಂದ ಶ್ರೀನಿವಾಸಪ್ರಸಾದ್ ಅವರು ಸಂವಿಧಾನದ ಪುಸ್ತಕವನ್ನು ತಮ್ಮದೇ ಪ್ರಕಾಶನದ ಮೂಲಕ ಪ್ರಕಟಿಸಿ ಶಾಲಾ–ಕಾಲೇಜುಗಳಿಗೆ ವಿತರಿಸಿ ದ್ದರು. ಸಂಸದರಾಗಿ ಹೆಚ್.ಡಿ.ಕೋಟೆ ಮತ್ತು ತಿ.ನರಸೀಪುರ ತಾಲೂಕಿನ ಎಲ್ಲಾ ವಿಶೇಷಚೇತನರಿಗೆ ಅನೇಕ ಸವಲತ್ತುಗಳನ್ನು ವಿತರಿಸಿದ್ದರು. ಹೆಚ್.ಡಿ.ಕೋಟೆಗೆ ತುರ್ತು ವಾಹನ ಒದಗಿಸಿದ್ದರು. ತಾಲೂಕಿನ ಅಭಿವೃದ್ಧಿಗೆ ಅನೇಕ ಯೋಜನೆಗಳನ್ನು ರೂಪಿಸಿದ್ದರು ಎಂದರು.



ಹೆಚ್.ಡಿ.ಕೋಟೆಯಲ್ಲಿ ನಡೆದ ನುಡಿನಮನ ಕಾರ್ಯಕ್ರಮವನ್ನು ಜ್ಞಾನಪ್ರಕಾಶ್ ಸ್ವಾಮೀಜಿ, ಶಾಸಕ ಅನಿಲ್ ಚಿಕ್ಕಮಾದು ಉದ್ಘಾಟಿಸಿದರು.

ವಿ.ಶ್ರೀನಿವಾಸಪ್ರಸಾದ್ ಸಹೋದರ ರಾಮಸ್ವಾಮಿ ಪುತ್ರ ಭರತ್ ಮಾತನಾಡಿ, ತಮ್ಮ ದೊಡಪ್ಪ ವಿ.ಶ್ರೀನಿವಾಸಪ್ರಸಾದ್ ಅವರ ಆಸೆ ಮತ್ತು ಕನಸುಗಳು ಇನ್ನೂ ಬಾಕಿ ಇವೆ. ಅವುಗಳನ್ನು ಸಂಪೂರ್ಣಗೊಳಿಸಲು ವಿವಿಧ ಮುಖ್ಯಸ್ಥರನ್ನು ಒಳಗೊಂಡ ಟ್ರಸ್ಟ್ ರಚನೆ ಮಾಡಿದ್ದಾರೆ. ಆ ಮೂಲಕ ಸಮಾಜ ಸೇವೆ ಕಾರ್ಯಗಳನ್ನು ನಡೆಸಬೇಕು ಎನ್ನುವುದು ಅವರ ಆಶಯ ಎಂದರು.

ಉತ್ತಮ ಪುಸ್ತಕಗಳನ್ನು ಪ್ರಕಟಿಸಲು ಸಮಾನತೆ ಪ್ರಕಾಶನ ಸಂಸ್ಥೆ ಹುಟ್ಟು ಹಾಕಿದರು. ಅವರದು ವಿಶಿಷ್ಟ ಸ್ವಾಭಿಮಾನದ ವ್ಯಕ್ತಿತ್ವ, ಮಾನವೀಯತೆಯ ಅಂತಃಕರಣ ಹೊಂದಿದ ವ್ಯಕ್ತಿ. ಬೇರೆಯವರ ಕಷ್ಟಕ್ಕೆ ಬಹಳವಾಗಿ ಮರುಗುತ್ತಿದ್ದರು. ಸಾಹಿತ್ಯಾಸಕ್ತಿ ಹೊಂದಿದ್ದರು. ಕನ್ನಡ ಭಾಷೆ ಮೇಲೆ ಪ್ರಭುತ್ವ ಹೊಂದಿದ್ದರು ಎಂದರು.

> ವಿ.ಶ್ರೀನಿವಾಸಪ್ರಸಾದ್ ಅವರು ತಮ್ಮ 50 ವರ್ಷಗಳ ಸುದೀರ್ಘ ರಾಜಕೀಯ ಜೀವನದಲ್ಲಿ ಎಂದಿಗೂ ಯಾರೊಂದಿಗೆ ರಾಜಿ ಆಗಿಲ್ಲ. ಅವರಲ್ಲಿ ಧೈರ್ಯ ಮತ್ತು ಸ್ವಾಭಿಮಾನ ಇತ್ತು. ಒಮ್ಮೆ ಪ್ರಧಾನಿ ಮೋದಿ ಅವರು ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಬಗ್ಗೆ ಮಾತನಾಡಿದ್ದ ಕೆಲವು ವಿಷಯಗಳನ್ನು ಖಂಡಿಸಿದ್ದರು. ಅಂತಹ ಧೈರ್ಯ ಅವರಲ್ಲಿತ್ತು.
> – **ಅನಿಲ್**, ಶಾಸಕ

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಸ್ವಾರ್ಥವಿಲ್ಲದೆ 50 ವರ್ಷ ರಾಜಕೀಯ ನಡೆಸಿದ ವ್ಯಕ್ತಿ ವಿ.ಶ್ರೀನಿವಾಸ ಪ್ರಸಾದ್. ಸ್ವಾಭಿಮಾನಕ್ಕೆ ಧಕ್ಕೆ ಬಂದ ಸಂದರ್ಭದಲ್ಲಿ ಪಕ್ಷಾಂತರ ಮಾಡಿದರೂ, ಅವರು ತತ್ವ ಮತ್ತು ಸಿದ್ಧಾಂತಗಳನ್ನು ಬಿಟ್ಟಿರಲಿಲ್ಲ ಎಂದರು.

ನಿವೃತ್ತ ಪ್ರಾಧ್ಯಾಪಕ ವಿ.ಸಿ.ತಳವಾರ್, ಮಾಜಿ ಸಚಿವ ಕೋಟೆ ಎಂ.ಶಿವಣ್ಣ, ಮೈಸೂರು ಉರಿಲಿಂಗ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ, ಹೆಚ್.ಡಿ.ಕೋಟೆ ಆದಿಕರ್ನಾಟಕ ಮಹಾಸಭಾ ಅಧ್ಯಕ್ಷ ಹೆಚ್.ಸಿ.ನರಸಿಂಹಮೂರ್ತಿ ಮಾತನಾಡಿದರು.

ಅಂತರಂತೆ ಬೌದ್ಧ ವಿಹಾರದ ಗೌತಮಿ ಬಂತೇಜಿ, ಸರಗೂರು ತಾಲೂಕು ಆದಿಕರ್ನಾಟಕ ಮಹಾಸಭಾ ಅಧ್ಯಕ್ಷ ಸರಗೂರು ಶಿವಪ್ಪ, ಮೈಮುಲ್ ನಿರ್ದೇಶಕ ಈರೇಗೌಡ, ಜಿಪಂ ಮಾಜಿ ಸದಸ್ಯರಾದ ರವಿ, ಚಿಕ್ಕವೀರನಾಯಕ, ಭಾಗ್ಯಲಕ್ಷ್ಮಿ, ಪಪಂ ಮಾಜಿ ಸದಸ್ಯ ಭಾನುಮತಿ ಮುಖಂಡರಾದ ಎಂ.ಡಿ.ಮಂಚಯ್ಯ ಮತ್ತಿತರರಿದ್ದರು.

ಪಿರಿಯಾಪಟ್ಟಣದಲ್ಲಿ ದಂಪತಿ ಶಂಕಾಸ್ಪದ ಸಾವು





ಪಿರಿಯಾಪಟ್ಟಣ, ಮೇ 19– ಅನುಮಾನಾಸ್ಪದವಾಗಿ ದಂಪತಿ ಸಾವನ್ನಪ್ಪಿರುವ ಘಟನೆ ಪಿರಿಯಾಪಟ್ಟಣದ ಗೊಲ್ಲರ ಬೀದಿಯಲ್ಲಿ ನಡೆದಿದ್ದು, ಪ್ರಕರಣ ತಡವಾಗಿ ವರದಿಯಾಗಿದೆ.

ಇಲ್ಲಿನ ನಿವಾಸಿಗಳಾದ ಪ್ರಕಾಶ್ (51), ಯಶೋಧ (48) ಮೃತಪಟ್ಟ ದಂಪತಿಯಾಗಿದ್ದು, ಇವರು ಗುರುವಾರ ರಾತ್ರಿ ಸಂಬಂಧಿಕರ ಮನೆಯಲ್ಲಿ ಊಟ ಮುಗಿಸಿ ತಮ್ಮ ಮನೆಗೆ ತೆರಳಿದ್ದರು. ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಇವರ ಪುತ್ರಿ ತನುಶ್ರೀ ಶುಕ್ರವಾರ ಬೆಳಗ್ಗೆ ಕರೆ ಮಾಡಿದಾಗ ದಂಪತಿ ಕರೆ ಸ್ವೀಕರಿಸಿಲ್ಲ. ರಾತ್ರಿವರೆಗೂ ಹಲವಾರು ಬಾರಿ ಕರೆ ಮಾಡಿದಾಗಲೂ ಕರೆ ಸ್ವೀಕರಿಸದ ಕಾರಣ ಅನುಮಾನಗೊಂಡ ತನುಶ್ರೀ ಸಂಬಂಧಿಕರಿಗೆ ಕರೆ ಮಾಡಿ, ವಿಷಯ ತಿಳಿಸಿದ್ದಲ್ಲದೇ ಮನೆಯ ಬಳಿ ತೆರಳಿ ನೋಡುವಂತೆ ಕೋರಿದ್ದಾಳೆ.

ಸಂಬಂಧಿಕರು ಮನೆಯ ಬಳಿ ತೆರಳಿ ನೋಡಿದಾಗ ಮನೆ ಒಳಗಿನಿಂದ ಚಿಲಕ ಹಾಕಿದ್ದು, ಎಷ್ಟೇ ಕರೆದರೂ ಒಳಗಿನಿಂದ ಏನೂ ಪ್ರತಿಕ್ರಿಯೆ ಬಾರದಿದ್ದಾಗ ಅವರು ಕಿಟಕಿ ಮೂಲಕ ನೋಡಿದರೆ, ದಂಪತಿ ಮೃತಪಟ್ಟ ಸ್ಥಿತಿಯಲ್ಲಿ ಕಂಡುಬಂದಿದ್ದಾರೆ.

ತಕ್ಷಣ ಪೊಲೀಸರಿಗೆ ಕರೆ ಮಾಡಿ, ವಿಚಾರ ತಿಳಿಸಲಾಗಿ ಅವರು ಬಂದು ಮನೆಯ ಬಾಗಿಲು ಮುರಿದು ಒಳ ಪ್ರವೇಶಿಸಿ, ಶವಗಳನ್ನು ಪಟ್ಟಣದ ಶವಾಗಾರಕ್ಕೆ ಸಾಗಿಸಿದ್ದಾರೆ. ಮೃತರ ಪುತ್ರಿ ತನುಶ್ರೀ ನೀಡಿದ ದೂರಿನ ಮೇರೆಗೆ ಪೊಲೀಸರು ಅನುಮಾನಾಸ್ಪದ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ. ದಂಪತಿ ದೇಹದ ಮೇಲೆ ಯಾವುದೇ ಗಾಯದ ಗುರುತುಗಳಿಲ್ಲ. ಕಾರ್ಬನ್ ಮೋನಾಕ್ಸೈಡ್ ಸೇವನೆಯಿಂದ ದಂಪತಿ ಸಾವಿಗೀಡಾಗಿರಬಹುದು ಎಂದು ಮೇಲ್ನೋಟಕ್ಕೆ ತಿಳಿದುಬಂದಿದೆ. ವಿಧಿ ವಿಜ್ಞಾನ ಪ್ರಯೋಗಾಲಯದ ಅಧಿಕಾರಿಗಳು ಪರಿಶೀಲನೆ ನಡೆಸಿದ್ದು, ಅವರು ವರದಿ ನೀಡಿದ ನಂತರವೇ ದಂಪತಿ ಸಾವಿನ ನಿಖರ ಕಾರಣ ತಿಳಿಯಬಹುದು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಓಮ್ನಿ ಡಿಕ್ಕಿ: ಬೈಕ್ ಸವಾರ ಸಾವು

ಹೆಚ್.ಡಿ.ಕೋಟೆ, ಮೇ 19– ಬೈಕ್‌ಗೆ ಮಾರುತಿ ಓಮ್ನಿ ಡಿಕ್ಕಿ ಹೊಡೆದ ಪರಿಣಾಮ ಸವಾರ ಸಾವನ್ನಪ್ಪಿರುವ ಘಟನೆ ತಾಲೂಕಿನ ಪಾಳ್ಯ ಸೇತುವೆ ಬಳಿ ಭಾನುವಾರ ನಡೆದಿದೆ.



ತಾಲೂಕಿನ ಕರಿಗಳ ಗ್ರಾಮದ ನಿವಾಸಿ ವೆಂಕಟೇಶ್(36) ಸಾವನ್ನಪ್ಪಿದವರು. ಈತ ಬೈಕ್‌ನಲ್ಲಿ ಹೊಮ್ಮರಗಳ್ಳಿಯಿಂದ ಕರಿಗಳ ಗ್ರಾಮಕ್ಕೆ ತೆರಳುತ್ತಿದ್ದ ವೇಳೆ ಹೆಚ್.ಡಿ.ಕೋಟೆಯಿಂದ ಮೈಸೂರು ಕಡೆಗೆ ತೆರಳುತ್ತಿದ್ದ ಮಾರುತಿ ಓಮ್ನಿ ಪಾಳ್ಯ ಸೇತುವೆ ಬಳಿ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ವೆಂಕಟೇಶ್ ಅವರನ್ನು ಚಿಕಿತ್ಸೆಗಾಗಿ ಮೈಸೂರಿನ ಅಪೋಲೋ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಸಾವನ್ನಪ್ಪಿದ್ದಾರೆ. ಬಳಿಕ ವೆಂಕಟೇಶ್ ಅವರ ಶವವನ್ನು ಕೆ.ಆರ್.ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆಗೆ ಒಳಪಡಿಸಿ ವಾರಸುದಾರರಿಗೆ ಒಪ್ಪಿಸಲಾಯಿತು. ಘಟನೆ ಬಳಿಕ ಓಮ್ನಿಯಲ್ಲಿದ್ದ ಎಲ್ಲರೂ ಸ್ಥಳದಿಂದ ಪರಾರಿಯಾಗಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಹೆಚ್.ಡಿ.ಕೋಟೆ ಪೊಲೀಸರು ಪರಿಶೀಲನೆ ನಡೆಸಿ ಓಮ್ನಿಯನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಕಾಂಗ್ರೆಸ್‌ಗೆ ನೇಮಕ



ಮೈಸೂರು, ಮೇ 19– ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಗ್ರಾಮಾಂತರ ಪರಿಶಿಷ್ಟ ಪಂಗಡದ ಜಿಲ್ಲಾಧ್ಯಕ್ಷರಾಗಿ ನಾಗವಾರ ಗ್ರಾಮದ ಕೆ.ಮಹೇಶ್ ಅವರನ್ನು ನೇಮಕ ಮಾಡಲಾಗಿದೆ.

ಜೂ.15, ರಾಜ್ಯ ಮಟ್ಟದ ಕುಸ್ತಿ ಪಂದ್ಯಾವಳಿ



ಸುದ್ದಿಗೋಷ್ಠಿಯಲ್ಲಿ ಶ್ರೀರಾಮಾಂಜನೇಯ ಕುಸ್ತಿ ಸಂಘದ ಅಧ್ಯಕ್ಷ ಜಿ.ನಂದೀಶ್ ಮಾತನಾಡಿದರು.

ಹೆಚ್.ಡಿ.ಕೋಟೆ, ಮೇ 19– ತಾಲೂಕಿನಲ್ಲಿ ಇದೇ ಪ್ರಥಮ ಬಾರಿಗೆ ಜೂ.15ರಂದು ರಾಜ್ಯ ಮಟ್ಟದ ಕುಸ್ತಿ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಶ್ರೀರಾಮಾಂಜನೇಯ ಕುಸ್ತಿ ಸಂಘದ ಅಧ್ಯಕ್ಷ ಜಿ.ನಂದೀಶ್ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕಿನ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಪಟ್ಟಣದ ಪುರಸಭೆ ಎದುರಿನ ಸಂತೆ ಮೈದಾನದಲ್ಲಿ ರಾಜ್ಯ ಮಟ್ಟದ ಕುಸ್ತಿ ಪಂದ್ಯಾವಳಿ ಆಯೋಜಿಸಲಾಗಿದೆ. ಪಂದ್ಯಾವಳಿಯಲ್ಲಿ ಮಾರ್ಫಿಟ್ ಕುಸ್ತಿ ವಿಜೇತರಿಗೆ ಬೆಳ್ಳಿಗದೆ, ಒಂದು ಹಾಗೂ ಅರ್ಧ ಗಂಟೆ ಕುಸ್ತಿ ವಿಜೇತರಿಗೆ ಕಂಚಿನ ಗದೆ ನೀಡಲಾಗುವುದು. ಅಲ್ಲದೇ ಉಳಿದ ಕುಸ್ತಿಪಟುಗಳಿಗೆ ಆಕರ್ಷಕ ಟ್ರೋಫಿಯೊಂದಿಗೆ ನಗದು ಬಹುಮಾನ ನೀಡಲಾಗುವುದು ಎಂದರು.

ಪೈ.ಎನ್.ನಾಗೇಶ್ ಮಾತನಾಡಿ, ಇದೇ ಮೊದಲ ಬಾರಿಗೆ ಹೆಚ್.ಡಿ.ಕೋಟೆಯಲ್ಲಿ ಪಾರಂಪಾರಿಕ ಕ್ರೀಡೆಯಾದ ನಾಡ ಕುಸ್ತಿಯನ್ನು ಆಯೋಜಿಸಲಾಗಿದ್ದು, ಪಂದ್ಯಾವಳಿಯಲ್ಲಿ ಸುಮಾರು 40 ಜೋಡಿ ಪೈಲ್ವಾನ್‌ಗಳು ಸೆಣಸಾಡಲಿದ್ದಾರೆ ಎಂದರು.

ಅಂದಿನ ಕಾರ್ಯಕ್ರಮಕ್ಕೆ ಶಾಸಕ ಅನಿಲ್, ಚಿತ್ರನಟ ದೊಡ್ಡಣ್ಣ, ನಟ ಧ್ರುವ ಸರ್ಜಾ, ವಿವಿಧ ರಾಜಕೀಯ ನಾಯಕರು, ಯುವ ಕ್ರೀಡಾ ಸ್ಪರ್ಧಿಗಳು ಸೇರಿದಂತೆ ಇನ್ನಿತರರು ಆಗಮಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಅಧ್ಯಕ್ಷ ನಂದೀಶ್, ಗೌರವಾಧ್ಯಕ್ಷ ಡೈರಿ ಶ್ರೀಕಾಂತ್, ಉಪಾಧ್ಯಕ್ಷ ನಿಂಗಪ್ಪ, ಕಾರ್ಯದರ್ಶಿ ನಾಗೇಶ್, ಸಹ ಕಾರ್ಯದರ್ಶಿ ಪೂರ್ಣೇಶ್, ಖಜಾಂಚಿ ಚಂದ್ರಮೌಳಿ, ಕಾನೂನು ಸಲಹೆಗಾರ ನಾಗೇಶ್, ನಿರ್ದೇಶಕರಾದ ರಾಜು, ಮುತ್ತುರಾಜ್ ಇತರರಿದ್ದರು.

ಕಂಪಲಾಪುರ ಸುತ್ತಮುತ್ತ ಭಾರೀ ಮಳೆ

ಕೊಚ್ಚಿಹೋದ ಬೆಳೆಗಳು: ಅಪಾರ ನಷ್ಟ



ಕಂಪಲಾಪುರ, ಮೇ 19– ಭಾನುವಾರ ಮಧ್ಯಾಹ್ನ ಸುರಿದ ಭಾರೀ ಮಳೆಗೆ ಕಂಪಲಾಪುರ ಸೇರಿದಂತೆ ಸುತ್ತಮುತ್ತಲ ಜಮೀನಿನಲ್ಲಿ ಬೆಳೆದಿದ್ದ ತಂಬಾಕು ಹಾಗೂ ಶುಂಠಿ ಬೆಳೆಗಳು ನೀರಿನಲ್ಲಿ ಕೊಚ್ಚಿ ಹೋಗಿ ಕೋಟ್ಯಾಂತರ ರೂ. ನಷ್ಟ ಸಂಭವಿಸಿದೆ.

ಸಮೀಪದ ಬೋರೆಹೊಸಳ್ಳಿ ಗ್ರಾಮದಲ್ಲಿ ಮಳೆ ಅವಾಂತರಕ್ಕೆ ಕೆರೆ ಕಟ್ಟೆ ಒಡೆದು ಶುಂಠಿ, ತಂಬಾಕು ಬೆಳೆ ನೀರಿನಲ್ಲಿ ಕೊಚ್ಚಿಹೋಗಿದೆ. ಗ್ರಾಮದ ಬಿ.ಹೆಚ್.ಕುಮಾರ್, ಬಿ.ಕೆ.ಸ್ವಾಮಿ, ಪುಟ್ಟರಾಜು, ನಿತಿನ್, ಸ್ವಾಮಿ, ಮುತ್ತುರಾಜು ಅವರಿಗೆ ಸೇರಿದ ಬೆಳೆಗಳು ಕೊಚ್ಚಿಕೊಂಡು ಹೋಗಿದ್ದು ಅಪಾರ ನಷ್ಟವಾಗಿದೆ.

ರೈತ ಜಯಣ್ಣ ಮಾತನಾಡಿ, ತಮ್ಮ 52 ವರ್ಷಗಳ ಅನುಭವದಲ್ಲಿ ಹಿಂದೆಂದೂ ಕಾಣದ ಮಳೆ ಇಂದು ಬಿದ್ದಿದ್ದು ಭಾರೀ ನಷ್ಟ ಉಂಟಾಗಿದೆ. ಕೈಗೆ ಬಂದ ತುತ್ತು ಬಾಯಿಗೆ ಬರದ ಹಾಗಾಗಿದೆ. ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಸೂಕ್ತ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಕಾಂಗ್ರೆಸ್ ಮುಖಂಡರ ವಿರುದ್ಧ ವಾಗ್ದಾಳಿ



ತಿ.ನರಸೀಪುರ, ಮೇ 19– ಕಾಂಗ್ರೆಸ್ ಮುಖಂಡರು ಕೇಂದ್ರ ಸರ್ಕಾರ ರಾಜ್ಯಕ್ಕೆ ತೆರಿಗೆ ಹಣವನ್ನು ಸಮರ್ಪಕವಾಗಿ ನೀಡಿಲ್ಲ ಎಂದು ಹೇಳುವ ಮೂಲಕ ಜನರ ಗಮನವನ್ನು ಬೇರೆಡೆ ಸೆಳೆಯಲು ತಂತ್ರ ರೂಪಿಸುತ್ತಿದ್ದಾರೆ ಎಂದು ಜಿಲ್ಲಾ ಬಿಜೆಪಿ ಗ್ರಾಮಾಂತರ ಯುವ ಮೋರ್ಚಾ ಅಧ್ಯಕ್ಷ ಸಾಮ್ರಾಟ್ ಸುಂದರೇಶನ್ ಆರೋಪಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ದೇಶದಲ್ಲಿ ಯುಪಿಎ ಸರ್ಕಾರ ಅಧಿಕಾರದಲ್ಲಿದ್ದಾಗ 2004–2014ರ ನಡುವೆ ಕರ್ನಾಟಕ ರಾಜ್ಯ 81,795 ಕೋಟಿ ರೂ.ಗಳ ಕೇಂದ್ರ ನಿಧಿ ಪಡೆದಿದ್ದರೇ, ನರೇಂದ್ರ ಮೋದಿ ನೇತೃತ್ವದ ಸರ್ಕಾರದಲ್ಲಿ ರಾಜ್ಯ ಸರ್ಕಾರವು 2,93,226 ಕೋಟಿ ರೂ. ಪಡೆದಿದೆ. ಇದು ಶೇ.258 ರಷ್ಟು ಅಥವಾ 3.5 ಪಟ್ಟು ಹೆಚ್ಚಾಗಿದೆ ಎಂದರು.

ಇದರ ಹೊರತಾಗಿ ಮೂಲ ಸೌಕರ್ಯಕ್ಕಾಗಿ ಕೋವಿಡ್ ವೇಳೆ ಕರ್ನಾಟಕಕ್ಕೆ 50 ವರ್ಷಗಳ ಅವಧಿಗೆ ಬಡ್ಡಿರಹಿತ ಸಾಲಗಳನ್ನು ನೀಡಲಾಗಿದೆ ಎಂದರು.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಈ ಹಿಂದೆ 2013ರಿಂದ 2018ರ ನಡುವೆ ತೆರಿಗೆ ಹಂಚಿಕೆಯಲ್ಲಿ ಅನ್ಯಾಯವಾಗಿದ್ದನ್ನು ಏಕೆ ಪ್ರಸ್ತಾಪಿಸಲಿಲ್ಲ? ಲೋಕಸಭಾ ಚುನಾವಣೆ ಯಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಸೋಲಲಿದೆ. ಈ ಹಿನ್ನೆಲೆಯಲ್ಲಿ ಬಿಜೆಪಿ ವಿರುದ್ಧ ದೂರುತ್ತಿದೆ ಎಂದು ಟೀಕಿಸಿದ್ದಾರೆ.

ಉತ್ತಮ ಮಳೆ: ಕೃಷಿ ಚಟುವಟಿಕೆ ಚುರುಕು




ನಂಜನಗೂಡಿನ ಕೃಷಿ ಇಲಾಖೆ ಕಚೇರಿಯಲ್ಲಿ ರೈತರಿಗೆ ಬಿತ್ತನೆ ಬೀಜ ವಿತರಿಸಲಾಯಿತು.

ನಂಜನಗೂಡು, ಮೇ 19– ತಾಲೂಕಿನಲ್ಲಿ ಪೂರ್ವ ಮುಂಗಾರಿನಿಂದ ಸುಮಾರು 113 ಮಿ.ಮೀ ಮಳೆಯಾಗಿದ್ದು, ಕೃಷಿ ಚಟುವಟಿಕೆಗಳು ಚುರುಕುಗೊಂಡಿವೆ ಎಂದು ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಎಸ್.ಕೆ.ರವಿ ತಿಳಿಸಿದ್ದಾರೆ.

ಮುಂಗಾರು ಹಂಗಾಮಿನಲ್ಲಿ ತಾಲೂಕಿನ 58415 ಹೆಕ್ಟೇರ್ ಪೈಕಿ ಪ್ರಸ್ತುತ 8330 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ. 1545 ಹೆಕ್ಟೇರ್ ಹತ್ತಿ, 1465 ಹೆಕ್ಟೇರ್ ಹೆಸರು, 126 ಹೆಕ್ಟೇರ್ ಅಲಸಂದೆ, 1015 ಹೆಕ್ಟೇರ್ ಸೂರ್ಯಕಾಂತಿ, 320 ಹೆಕ್ಟೇರ್ ತಂಬಾಕು, 400 ಹೆಕ್ಟೇರ್ ಜೋಳ, 1880 ಹೆಕ್ಟೇರ್ ಉದ್ದು, 375 ಹೆಕ್ಟೇರ್ ಪ್ರದೇಶದಲ್ಲಿ ಮುಸುಕಿನ ಜೋಳ ಬಿತ್ತನೆಯಾಗಿದೆ. ಕೃಷಿ ಇಲಾಖೆ ರೈತ ಸಂಪರ್ಕ ಕೇಂದ್ರಗಳ ಮೂಲಕ ಹೆಸರು, ಅಲಸಂದೆ, ಉದ್ದು, ಜೋಳ, ಮುಸುಕಿನ ಜೋಳ ಹಾಗೂ ಸೂರ್ಯಕಾಂತಿ ಬಿತ್ತನೆ ಬೀಜಗಳನ್ನು ದಾಸ್ತಾನು ಮಾಡಲಾಗಿದ್ದು, 428 ಕ್ವಿಂಟಾಲ್ ಬಿತ್ತನೆ ಬೀಜಗಳನ್ನು ರೈತರಿಗೆ ವಿತರಿಸಲಾಗಿದೆ. ತಾಲೂಕಿನಲ್ಲಿ ಬಿತ್ತನೆ ಬೀಜ ಕೊರತೆ ಇಲ್ಲ. ರಸಗೊಬ್ಬರ ದಾಸ್ತಾನು ಸಂಬಂಧಿಸಿದಂತೆ ಇಲಾಖೆಯ ಅಧಿಕಾರಿಗಳ ತಂಡ ಮಾರಾಟ ಮಳಿಗೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದೆ. ಈ ವರ್ಷ ಹತ್ತಿ ಬೆಳೆ ವಿಸ್ತೀರ್ಣ ಕಡಿಮೆಯಾಗಿದ್ದು, ಬದಲಾಗಿ ದ್ವಿದಳ ಧಾನ್ಯಗಳ ಕ್ಷೇತ್ರ ಹೆಚ್ಚಾಗುವ ಸಂಭವವಿದೆ ಎಂದರು.

ಪ್ರತಿಯೊಬ್ಬರೂ ಕಲಾವಿದರನ್ನು ಗೌರವಿಸಿ

ಬಸವ ಜಯಂತಿಯಲ್ಲಿ ಶಿಕ್ಷಕ ಶಿವಕುಮಾರ್



ಮುಳ್ಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಲಾವಿದರನ್ನು ಸನ್ಮಾನಿಸಲಾಯಿತು.

ಸರಗೂರು, ಮೇ 19– ಸೇವೆ ಎಂಬ ಪದವೇ ನಿಸ್ವಾರ್ಥ. ದಯೆ ಎಂಬ ಪದವೇ ಪರಮಾರ್ಥ. ಹೀಗಾಗಿ ಪ್ರತಿಯೊಬ್ಬರೂ ಕಲಾವಿದರನ್ನು ಗೌರವಿಸಬೇಕು ಎಂದು ಶಿಕ್ಷಕ ಶಿವಕುಮಾರ್ ತಿಳಿಸಿದರು.

ತಾಲೂಕಿನ ಮುಳ್ಳೂರು ಗ್ರಾಮದಲ್ಲಿ ವೀರಶೈವ ಲಿಂಗಾಯತ ಸಮಾಜದಿಂದ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ತಾಲೂಕಿನ ನವಿಲೂರು ಗ್ರಾಮದ ಹಿರಿಯ ಕಲಾವಿದರಾದ ಮಹದೇವ್, ಚಿಕ್ಕಣ್ಣ ತಂಡವನ್ನು ಸನ್ಮಾನಿಸಿ ಮಾತನಾಡಿದ ಅವರು, ಗ್ರಾಮೀಣ ಭಾಗದಲ್ಲಿ ಕಲಾವಿದರು ತಮ್ಮದೇ ಆದ ಪ್ರತಿಭೆಯಿಂದ ಜನರ ಮೆಚ್ಚುಗೆ ಗಳಿಸಿದ್ದಾರೆ. ಅಂತಹವರಿಗೆ ಉತ್ತಮ ವೇದಿಕೆಯ ಅವಶ್ಯಕತೆ ಇದೆ. ಉತ್ತಮ ಸಾಧನೆ ಮಾಡಿದ ಕಲಾವಿದರನ್ನು ಗುರ್ತಿಸಿ ಗೌರವಿಸುವುದು ನಮ್ಮ ಆದ್ಯ ಕರ್ತವ್ಯ. ಕಲಾವಿದರ ಸೇವೆ ನಿರಂತರವಾಗಿರಲಿ. ಅವರಿಗೆ ನಮ್ಮ ಸಮಾಜದಿಂದ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಇದಕ್ಕೂ ಮುನ್ನಾ ಗ್ರಾಮದ ಪ್ರಮುಖ ಬೀದಿಗಳಲ್ಲಿ ಬಸವೇಶ್ವರರ ಪುತ್ಥಳಿಯನ್ನು ವಿವಿಧ ಜಾನಪದ ಕಲಾ ತಂಡಗಳೊಂದಿಗೆ ರಥದಲ್ಲಿ ಮೆರವಣಿಗೆ ಮಾಡಲಾಯಿತು. ಈ ವೇಳೆ ವೀರಶೈವ ಲಿಂಗಾಯತ ಸಮಾಜದ ಧರ್ಮದರ್ಶಿ ಶಿವರುದ್ರಪ್ಪ, ನಾಡಗೌಡಿಕೆ ಶಿವಕುಮಾರ್, ಎಂ.ಕೆ.ಪ್ರಕಾಶ್, ಸಮಾಜ ಸೇವಕರಾದ ನಾಗರಾಜು, ಎಂ.ಪಿ.ಶ್ರೀಕಂಠಪ್ಪ, ಮಲ್ಲಣ್ಣ, ಮಹದೇವಪ್ಪ, ಶಿಕ್ಷಕರಾದ ಶಿವಕುಮಾರ್, ಎಂ.ಮೋಹನ್ ಕುಮಾರ್, ಶಿವರಾಜಪ್ಪ, ಎಂ.ಪರಶಿವಮೂರ್ತಿ, ಎಂ.ಎಸ್.ನಾಗರಾಜು, ಎಂ.ಎನ್.ಮಹದೇವಸ್ವಾಮಿ, ಜವನ ನಾಯಕ, ಟಿ.ಎಸ್.ಪ್ರಭುಸ್ವಾಮಿ, ವಿರುಪಾಕ್ಷಪ್ಪ, ಶಿವಮಾದಪ್ಪ ಸೇರಿದಂತೆ ಎಲ್ಲಾ ಸಮುದಾಯದ ಯಜಮಾನರು, ಮುಖಂಡರು, ಗ್ರಾಮಸ್ಥರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಅರಣ್ಮನೈ –4 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಸ್ಟಾರ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕ್ರೂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಗಧೀರ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಇಂಗ ನಾನ್ ಥಾನ್ ಕಿಂಗು (ತ)	4 ಪ್ರದರ್ಶನಗಳು
ಸಂಗಂ	
ಕೃಷ್ಣ ನೀ ಬೇಗನೆ ಬಾರೋ (ಕ)	4 ಪ್ರದರ್ಶನಗಳು
ಲಿಡೋ	
ಅಂಜನೀಪುತ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಯುವ (ಕ)	4 ಪ್ರದರ್ಶನಗಳು
ಪ್ರಭಾ	
ಕೃಷ್ಣಾ ನೀ ಬೇಗನೆ ಬಾರೋ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಇಫ್ 2024 (ಇಂ): ಬೆ.11.30ಕ್ಕೆ, ರಾ.10ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಮ.1.45ಕ್ಕೆ, ದಿ ಬಾಯ್ ಅಂಡ್ ದಿ ಹೆರಾನ್ (ಜ): ಸಂ.4.45ಕ್ಕೆ, ಗುರುವಾಯೂರ್ ಅಂಬಲನಾಡಿಯಿಲ್ (ಮ): ರಾ.7.20ಕ್ಕೆ,
ಸ್ಕ್ರೀನ್ 2	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.55ಕ್ಕೆ, A (ಕ): ಮ.1.20ಕ್ಕೆ, ಶ್ರೀಕಾಂತ್ (ಹಿಂ): ಸಂ.4.25ಕ್ಕೆ, ರಾಮನ ಅವತಾರ (ಕ): ರಾ.7.05ಕ್ಕೆ, ಸುರೇಶಿಂತೆಯುಂ ಸುಮಲತಾಯುದೆಯುಂ (ಮ): ರಾ.10.05ಕ್ಕೆ.
ಸ್ಕ್ರೀನ್ 3	ಸ್ವಿಚ್ ಕೇಸ್ ಎನ್ (ಕ): ಬೆ.10.30ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಮ.1.15ಕ್ಕೆ, ರಾ.7.20ಕ್ಕೆ, ಕೃಷ್ಣ ನೀ ಬೇಗನೆ ಬಾರೋ (ಕ): ಸಂ.4.15ಕ್ಕೆ, ಅಪರಿಚಿತುಡು (ತೆ): ರಾ.10ಕ್ಕೆ.
ಸ್ಕ್ರೀನ್ 4	ಗಾರ್ಫೀಲ್ಡ್ ಮೂವಿ (3ಡಿ)(ಇಂ): ಬೆ.10.50ಕ್ಕೆ, ಮ.12.55ಕ್ಕೆ, ಮ.3ಕ್ಕೆ, ಸಂ.5.05ಕ್ಕೆ, ರಾ.10.05ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ರಾ.7.10ಕ್ಕೆ.

ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಗಾರ್ಫೀಲ್ಡ್ ಮೂವಿ (3ಡಿ)(ಇಂ): ಬೆ.10.40ಕ್ಕೆ, ಮ.1ಕ್ಕೆ, ಸಂ.6.10ಕ್ಕೆ, ರಾ.8.30ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಮ.3.20ಕ್ಕೆ.
ಸ್ಕ್ರೀನ್ 2	ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ರಾ.7.05ಕ್ಕೆ, ಶ್ರೀಕಾಂತ್ (ಹಿಂ): ಮ.1.05ಕ್ಕೆ, ರಾ.10.10ಕ್ಕೆ,
ಸ್ಕ್ರೀನ್ 3	ಇಂಗ ನಾನ್ ಥಾನ್ ಕಿಂಗು (ತ): ಬೆ.11.05ಕ್ಕೆ, ಇಫ್ 2024 (ಇಂ): ಮ.1.55ಕ್ಕೆ, ರಾ.7.35ಕ್ಕೆ, A (ಕ): ಸಂ.4.20ಕ್ಕೆ, ಗುರುವಾಯೂರ್ ಅಂಬಲನಾಡಿಯಿಲ್ (ಮ): ರಾ.10ಕ್ಕೆ.
ಸ್ಕ್ರೀನ್ 4	ರಾಮನ ಅವತಾರ (ಕ): ಮ.12.45ಕ್ಕೆ, ಕೃಷ್ಣ ನೀ ಬೇಗನೇ ಬಾರೋ (ಕ): ಮ.3.40ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಸಂ.6.55ಕ್ಕೆ, ಅರಮನೈ 4 (ತ): ರಾ.9.45ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರಾಮನ ಅವತಾರ (ಕ): ಮ.1.30ಕ್ಕೆ, ಸಂ.4.20ಕ್ಕೆ, ರಣಹದ್ದು (ಕ): ರಾ.7.10ಕ್ಕೆ.
ಸ್ಕ್ರೀನ್ 2	ಅರಮನೈ 4 (ತ): ರಾ.7ಕ್ಕೆ.
ಸ್ಕ್ರೀನ್ 3	ಗುರುವಾಯೂರಂಬಲ ನಡಾಯಿಲ್ (ಮ): ರಾ.7ಕ್ಕೆ.
ಸ್ಕ್ರೀನ್ 4	ಅರಮನೈ 4 (ತ): ಮ.1.30ಕ್ಕೆ, ಕಿರಾತಕ 2 (ಕ): ಸಂ.4.25ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ರಾ.7.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1.15ಕ್ಕೆ, ಮ.3.40ಕ್ಕೆ, ರಾ.7.15ಕ್ಕೆ, ರಾ.10ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10.05ಕ್ಕೆ, ಮ.12ಕ್ಕೆ, ಮ.3.10ಕ್ಕೆ, ಸಂ.6.20ಕ್ಕೆ, ರಾ.9.30ಕ್ಕೆ, ಸ್ಟಾರ್ (ತ): ಮ.1ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, **4N6** (ಕ): ಮ.1.05ಕ್ಕೆ, ಅಂಜನೀಪುತ್ರ (ಕ): ಸಂ.4.15ಕ್ಕೆ, ಕೃಷ್ಣಮ್ಮ (ತೆ): ಸಂ.4.20ಕ್ಕೆ, ರಾ.10.15ಕ್ಕೆ, ಪವರ್ (ಕ): ಸಂ.6.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆ



ಪಿರಿಯಾಪಟ್ಟಣ, ಮೇ 19– ಇತ್ತೀಚೆಗೆ ಪ್ರಕಟಗೊಂಡ ಎಸ್‌ಎಸ್‌ಎಲ್‌ಸಿ (ಸಿಬಿಎಸ್‌ಸಿ) ಫಲಿತಾಂಶದಲ್ಲಿ ಪಟ್ಟಣದ ಪುಷ್ಪ ಇಂಗ್ಲಿಷ್ ಮೀಡಿಯಂ ಶಾಲೆ ವಿದ್ಯಾರ್ಥಿನಿ ನಕ್ಷತ್ರ ಪಿ.ಗೌಡ 477(95.4%) ಅಂಕಗಳನ್ನು ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾಳೆ. ಈಕೆ ಅಪ್ಪಟ್ಟೂರು ನಿವಾಸಿ ಹೆಚ್.ಆರ್.ಪ್ರದೀಪ್, ಪಿ.ರಾಣಿ ದಂಪತಿ ಪುತ್ರಿ

ನಾಳೆ ಸೌರಮಾನ ನರಸಿಂಹ ಜಯಂತ್ಯುತ್ಸವ



ತಿ.ನರಸೀಪುರ, ಮೇ 19– ಪಟ್ಟಣದ ಶ್ರೀಲಕ್ಷ್ಮಿ ಸಮೇತ ಗುಂಜಾ ನರಸಿಂಹಸ್ವಾಮಿ ದೇವಾಲಯದಲ್ಲಿ ಮೇ 21 ರಂದು ಸೌರಮಾನ ನರಸಿಂಹ ಜಯಂತ್ಯುತ್ಸವ ನಡೆಯಲಿದೆ ಎಂದು ದೇವಾಲಯದ ಪ್ರಕಟಣೆ ತಿಳಿಸಿದೆ.

ಸೌರಮಾನ ನರಸಿಂಹ ಜಯಂತಿ ಅಂಗವಾಗಿ ಅಂದು ಬೆಳಗ್ಗೆ 10 ಗಂಟೆಗೆ ಗೋಪೂಜೆ, 10.30ಕ್ಕೆ ತಿರುವೀದಿ ಉತ್ಸವ, ಮಧ್ಯಾಹ್ನ 12 ಗಂಟೆಗೆ ಸ್ವಾಮಿಯವರಿಗೆ ಅಲಂಕಾರ ಮಾಡಿ ಮಹಾಮಂಗಳಾರತಿ, ಶಾತ್ತುಮೊರೈ ನಡೆಯಲಿದ್ದು, ಮಧ್ಯಾಹ್ನ 2 ಗಂಟೆಗೆ ಅನ್ನ ಸಂತರ್ಪಣೆ ಆಯೋಜಿಸಲಾಗಿದೆ. ಗೋಪೂಜೆ ಅಂಗವಾಗಿ ಗೋವುಗಳಿಗೆ ಉಚಿತ ಮೇವು ನೀಡಲಾಗುತ್ತದೆ ಎಂದು ದೇವಾಲಯದ ಪಾರುಪತ್ತೇಗಾರ ದೀಪು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆ.ನಾಗರಾಜು ನಿಧನ



ಹುಲ್ಲಹಳ್ಳಿ, ಮೇ 19– ಗ್ರಾಮದ ನಿವಾಸಿ ಕೆ.ನಾಗರಾಜು(73) ಭಾನುವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಗ್ರಾಮದ ಕಪಿಲಾ ನದಿ ದಡದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಲೋಕಸಭಾ ಚುನಾವಣೆ ನಂತರ ದೇಶದಲ್ಲಿ ತಲ್ಲಣಕಾರಿ ಬೆಳವಣಿಗೆ

ಮತದಾನ ವಿಶ್ಲೇಷಕ ಡಾ.ಹೆಚ್.ವಿ.ವಾಸು ಅಭಿಮತ

ಮೈಸೂರು, ಮೇ 19(ಜಿಎ)–ಲೋಕಸಭಾ ಚುನಾವಣೆ ನಂತರ ದೇಶದಲ್ಲಿ ತಲ್ಲಣಕಾರಿ ಬೆಳವಣಿಗೆಗಳಾಗಲಿವೆ. ದೇಶದಲ್ಲಿ ಹೊಸ ರಾಜಕೀಯ ವ್ಯವಸ್ಥೆಗೆ ಅದು ನಾಂದಿಯಾಗಲಿದೆ ಎಂದು ಈದಿನ ಡಾಟ್ ಕಾಂನ ಸಂಪಾದಕ ಡಾ.ಹೆಚ್.ವಿ.ವಾಸು ಅಭಿಪ್ರಾಯಪಟ್ಟರು.

ಮೈಸೂರಿನ ವಿಜಯನಗರ 4ನೇ ಹಂತದಲ್ಲಿರುವ ಕಲ್ಪಕ್ಷೇತ್ರ ಸಭಾಂಗಣದಲ್ಲಿ ಮೈಸೂರು ಓಪನ್ ಫೋರಂ (ಎಂಒಎಫ್) ಏರ್ಪಡಿಸಿದ್ದ ಚುನಾವಣೆ 2024 ಭವಿಷ್ಯ ಮತ್ತು ದೃಷ್ಟಿಕೋನ ವಿಷಯ ಕುರಿತ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ, ಹೊಸ ರಾಜಕೀಯ ವ್ಯವಸ್ಥೆ, ಪರಿಕಲ್ಪನೆಯ ತುರ್ತು ಅಗತ್ಯವನ್ನು ಹೋದಲ್ಲೆಲ್ಲಾ ಪ್ರತಿಪಾದಿಸುತ್ತಿದ್ದಾರೆ. ಆದರೆ, ಅವರದೇ ಪಕ್ಷದಲ್ಲಿ ಇದಕ್ಕೆ ಪೂರಕವಾದ ಬದಲಾವಣೆ ತರಲು ಸಾಧ್ಯವಾಗುತ್ತಿಲ್ಲ ಎಂದರು.

ನಮ್ಮ ಸಂಸ್ಥೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ನಡೆಸಿದ ಸರ್ವೆಯಲ್ಲಿ ಜನರು ಯಾವ ವಿಷಯಕ್ಕೆ ಒತ್ತು ನೀಡಿ–ಜಾತಿ, ಅಭಿವೃದ್ಧಿ–ಮತದಾನ ಮಾಡುತ್ತಾರೆ ಎಂಬುದನ್ನು ಕೇಂದ್ರೀಕರಿಸಲಾಗಿತ್ತು. ಲೋಕಸಭಾ ಚುನಾವಣೆಯ ಸರ್ವೆಯೂ ಬಹಳಷ್ಟು ಕಷ್ಟಕರವಾಗಿತ್ತು. ಭಾರತದ ಪ್ರಜಾಪ್ರಭುತ್ವದ ಅಳಿವು–ಉಳಿವಿನ ವಿಷಯದಲ್ಲಿ ನಡೆಯುತ್ತಿರುವ ವಿಚಾರ ಮಂಥನದಂತಿದೆ ಎಂದು ತಿಳಿಸಿದರು.

ದೇಶದಲ್ಲಿ ಸುಪ್ರೀಂಕೋರ್ಟ್ ಬಿಟ್ಟರೆ ಬಹುತೇಕ ಸಂಸ್ಥೆಗಳು ಬೆನ್ನು ಮೂಳೆ ಇಲ್ಲದಂತೆ ಕಾರ್ಯನಿರ್ವಹಿಸುತ್ತಿವೆ. ಪ್ರಜಾಪ್ರಭುತ್ವದ ಕಾವಲು ನಾಯಿ ಆಗಬೇಕಿದ್ದ ಮಾಧ್ಯಮಗಳು ಬೇಟೆ ನಾಯಿಯಾಗಿ ಬದಲಾಗಿವೆ ಎಂದು ಬೇಸರಿಸಿ, ಈ ಬಾರಿಯ ಲೋಕಸಭಾ ಚುನಾವಣೆ ಎಲ್ಲಾ ಪಕ್ಷಗಳಲ್ಲೂ ಭಯ ಹುಟ್ಟಿಸಿದೆ. ಆದ್ದರಿಂದ ಎಲ್ಲಾ ನಾಯಕರು ಬಾಯಿಗೆ ಬಂದ ಹಾಗೆ ಮಾತನಾಡುತ್ತಿದ್ದಾರೆ. ಈ ಎಲ್ಲದರ ನಡುವೆ ಮತದಾರರು ಅಸಾಮಾನ್ಯ ಚುನಾವಣೆಯನ್ನು ಸಾಮಾನ್ಯ ಚುನಾವಣೆ ಮಾಡಿದ್ದಾರೆ ಎಂದರು.



ಮೈಸೂರಿನ ವಿಜಯನಗರ ನಾಲ್ಕನೇ ಹಂತದಲ್ಲಿರುವ ಕಲ್ಪಕ್ಷೇತ್ರ ಸಭಾಂಗಣದಲ್ಲಿ ಮೈಸೂರು ಓಪನ್ ಫೋರಂ (ಎಂಒಎಫ್) ಏರ್ಪಡಿಸಿದ್ದ 'ಚುನಾವಣೆ 2024 ಭವಿಷ್ಯ ಮತ್ತು ದೃಷ್ಟಿಕೋನ' ವಿಷಯ ಕುರಿತ ಸಂವಾದ ಕಾರ್ಯಕ್ರಮದಲ್ಲಿ ಡಾ.ಹೆಚ್.ವಿ.ವಾಸು ಮಾತನಾಡಿದರು. ಹಿರಿಯ ಪತ್ರಕರ್ತ ಕೃಷ್ಣಪ್ರಸಾದ್ ಉಪಸ್ಥಿತರಿದ್ದರು.

ಬಿಜೆಪಿ ಭಾರತದ ಬಲಿಷ್ಠ ಪಕ್ಷ ಎಂದು ಬಿಂಬಿಸುತ್ತಿದ್ದಾರೆ. ಆದರೆ ಅಂಕಿ ಅಂಶಗಳು ಅದನ್ನು ಸುಳ್ಳು ಎಂದು ತಿಳಿಸುತ್ತಿವೆ. ದೇಶದಲ್ಲಿ 4,123 ವಿಧಾನಸಭಾ ಕ್ಷೇತ್ರಗಳಿದ್ದು, ಅವುಗಳಲ್ಲಿ 1,484 ಮಾತ್ರವೇ ಬಿಜೆಪಿ. ಆದರೆ, ಕಾಂಗ್ರೆಸ್ 2500 ಸೀಟ್ ಹೊಂದಿದೆ ಅಲ್ಲದೆ ದೇಶದಲ್ಲಿ 1966ರಲ್ಲಿ ಅಧಿಕಾರ ಹಿಡಿದವರು ಮತ್ತೆ ಅಧಿಕಾರ ಪಡೆಯುವ ಸಾಧ್ಯತೆ ಕ್ಷೀಣಿಸಿತು. 1983ರ ನಂತರ ಕರ್ನಾಟಕದಲ್ಲೂ ಇದೇ ಬೆಳವಣಿಗೆ ಕಂಡು ಬಂದಿದೆ. ದೇವರಾಜ ಅರಸು ನಂತರ ಯಾರೂ ಮರಳಿ ಮತ್ತೊಮ್ಮೆ ಅಧಿಕಾರಕ್ಕೆ ಬರಲಿಲ್ಲ.

1996ರಿಂದ ಇಲ್ಲಿಯವರೆಗೂ ಬಿಜೆಪಿ ವೋಟಿಂಗ್ ಪ್ರಮಾಣ ಪ್ರತಿ ಚುನಾವಣೆಯಲ್ಲಿ ಹೆಚ್ಚಾಗಿದೆ. ಆದರೆ, 2019ರಲ್ಲಿ ಪುಲ್ವಾಮಾ, ಬಾಲಕೋಟ್‌ನ ವಿಷಯಗಳ ಮುಂದಿಟ್ಟುಕೊಂಡು ಚುನಾವಣೆ ನಡೆಸಲಾಯಿತು. ಹಾಗೇ ಬಿಜೆಪಿಯವರು ಕೆಂಪೇಗೌಡ ಪ್ರತಿಮೆ, ಹುರಿಗೌಡ–ನಂಜೇಗೌಡ ಪಾತ್ರಧಾರಿಗಳ ಮುಂದಿಟ್ಟುಕೊಂಡು ಜೆಡಿಎಸ್ ಪಕ್ಷವನ್ನು ಹಾಳು ಮಾಡಲು ಮುಂದಾದರು. ಇದರ ಪರಿಣಾಮ 2023ರಲ್ಲಿ ಬಿಜೆಪಿಗೆ ಮತದಾನದ ಪ್ರಮಾಣ ಕಡಿಮೆಯಾಯಿತು. ಈ ಲೋಕಸಭಾ ಚುನಾವಣೆಯಲ್ಲಿನ ಜೆಡಿಎಸ್ ಮತ್ತು ಬಿಜೆಪಿ ಮೈತ್ರಿಯಿಂದ ಜೆಡಿಎಸ್ ಸಂಪೂರ್ಣವಾಗಿ ಮುಳುಗುತ್ತದೆ ಎಂದರು.

ದೇಶದಲ್ಲಿ ಮೋದಿ ಅಲೆ ಇತ್ತು. ಆದರೆ, ಆರ್‌ಎಸ್‌ಎಸ್ ಮತ್ತು ನಕಲಿ ಹಿಂದುತ್ವದಿಂದ ಆ ಅಲೆ ಈಗ ಶೇ.35ಕ್ಕೆ ಇಳಿಕೆಯಾಗಿದೆ. ಹಾಗೇ ಸರ್ವೆಗಳ ಪ್ರಕಾರ ದೇಶದ 18–20 ವಯಸ್ಸಿನೊಳಗಿನವರು ಮುಸ್ಲಿಂರನ್ನು ವಿರೋಧಿಸುತ್ತಿಲ್ಲ. ಹೀಗಾಗಿ ದೇಶದಲ್ಲಿ ಮುಸ್ಲಿಂ ವಿರೋಧಿ ಅಲೆ ಇಲ್ಲ ಎಂದು ಡಾ.ಹೆಚ್.ವಿ.ವಾಸು ತಿಳಿಸಿದರು.

ಮೋದಿ ಮತ್ತು ಸಿದ್ದರಾಮಯ್ಯ ನಡುವೆ ಸಾಕಷ್ಟು ವ್ಯತ್ಯಾಸವಿದ್ದು, ಸಿದ್ದರಾಮಯ್ಯ ಹಿಂದುಳಿದ, ಬಡವರ, ಮಹಿಳೆಯರ ಮತ್ತು ಅಹಿಂದ ವರ್ಗಕ್ಕೆ ಸಾಕಷ್ಟು ಕೊಡುಗೆಗಳನ್ನು ನೀಡಿದ್ದಾರೆ. ಹಾಗಾಗಿ ಅವರಿಗೆ ಮಹಿಳೆಯರ ಮತ ಹೆಚ್ಚಿದೆ. ಸರ್ವೆ ಪ್ರಕಾರ ಬಹುತೇಕ ಮಹಿಳೆಯರು ಯಾರಿಗೆ ಮತದಾನ ಮಾಡುತ್ತೇವೆಂದು ಬಾಯ್ಬಿಟ್ಟಿಲ್ಲ.

ಹಿರಿಯ ಪತ್ರಕರ್ತ ಕೃಷ್ಣಪ್ರಸಾದ್ ಮಾತನಾಡಿ, ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯು ಐಟಿ, ಇಡಿ, ಎಲೆಕ್ಟೋರಲ್ ಬಾಂಡ್, ನಕಲಿ ಸುದ್ದಿ, ಹಿಂದುತ್ವ ಹೀಗೆ ಅನೇಕ ಅಂಶಗಳಿಂದ ಕೆಲವು ಕ್ಷೇತ್ರಗಳನ್ನು ಕಳೆದುಕೊಳ್ಳುತ್ತದೆ. ರಾಜ್ಯದಲ್ಲಿ ಬಿಜೆಪಿ ಅಧಿಕಾರದಲ್ಲಿದ್ದಾಗ ಸುಭದ್ರ ಆಡಳಿತ ನೀಡಿಲ್ಲ. ಆದ್ದರಿಂದ ರಾಜ್ಯದಲ್ಲಿ ಬಿಜೆಪಿಗೆ ಶೇ.50 ಹಿನ್ನಡೆಯಾಗಲಿದೆ ಎಂದು ಹಿರಿಯ ಸಾಹಿತಿ ಎಸ್.ಎಲ್. ಭೈರಪ್ಪ ಹೇಳಿರುವುದನ್ನು ಪ್ರಸ್ತಾಪಿಸಿ, ಪವರ್ ಪಾಯಿಂಟ್ ಪ್ರೆಸೆಂಟೇಷನ್ ಮೂಲಕ ಅನೇಕ ಮಾಧ್ಯಮಗಳ ಸರ್ವೆ ಮತ್ತು ರಾಜಕೀಯ ತಜ್ಞರ ಮಾಹಿತಿಯನ್ನು ವಿವರಿಸಿದರು. ನಂತರ ಸಂವಾದ ನಡೆಯಿತು.

ರಾಜೀವ್‌ನಗರದ ಕ್ರಿಯೇಟಿವ್ ಹಿರಿಯ ಪ್ರಾಥಮಿಕ ಶಾಲೆಗೆ ಮಕ್ಕಳ ಸೇರಿಸಬೇಡಿ

ಕ್ಷೇತ್ರ ಶಿಕ್ಷಣಾಧಿಕಾರಿ ಸೂಚನೆ

ಮೈಸೂರು, ಮೇ 19–ಮೈಸೂರಿನ ರಾಜೀವ್‌ನಗರದಲ್ಲಿರುವ ಕ್ರಿಯೇಟಿವ್ ಹಿರಿಯ ಪ್ರಾಥಮಿಕ ಶಾಲೆಗೆ ಮಕ್ಕಳನ್ನು ಪೋಷಕರು ಸೇರಿಸಬಾರದು ಎಂದು ಉತ್ತರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಸೂಚಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಮೂಲಭೂತ ಸೌಲಭ್ಯಗಳ ಕೊರತೆಯಿಂದ ಕಾರ್ಯ ಸಾಧುವಲ್ಲದ ಶಾಲೆ ಎಂಬ ಕಾರಣಕ್ಕಾಗಿ ಈ ಶಾಲೆಯ ಮಾನ್ಯತೆಯನ್ನು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರು ಹಿಂಪಡೆದಿರುವುದರಿಂದ ಈ ಶಾಲೆಗೆ ಮಕ್ಕಳನ್ನು ಸೇರಿಸಬಾರದು ಎಂದಿರುವ ಅವರು, ಪ್ರಸ್ತುತ ಈ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಯಾಗದಂತೆ ಹತ್ತಿರದ ಶಾಲೆಗಳಿಗೆ ಸೇರಿಸಲು ಶಿಕ್ಷಣ ಇಲಾಖೆ ಬದ್ಧವಾಗಿದ್ದು, ಪೋಷಕರು ಆತಂಕಪಡಬಾರದೆಂದು ತಿಳಿಸಿದ್ದಾರೆ. ಉತ್ತರ ವಲಯ ವ್ಯಾಪ್ತಿಯ ಅನುದಾನರಹಿತ ಶಾಲೆಗಳ ಅಧಿಕೃತ ಪಟ್ಟಿಯನ್ನು ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದ್ದು, ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸುವ ಮುನ್ನ ಕಚೇರಿ ಸೂಚನಾ ಫಲಕವನ್ನು ಪರಿಶೀಲಿಸಿ, ಅಧಿಕೃತ ಶಾಲೆ ಎಂದು ಖಚಿತಪಡಿಸಿಕೊಂಡು ಶಾಲೆಗೆ ಸೇರಿಸಬೇಕೆಂದು ಅವರು ಸೂಚಿಸಿದ್ದಾರೆ.


ಮೇ 24, 'ಎವಿಡೆನ್ಸ್' ಚಿತ್ರ ಬಿಡುಗಡೆ

ಮೈಸೂರು, ಮೇ 19(ಜಿಎ)–ನಿರ್ದೇಶಕ ಸಿ.ಪಿ.ಪ್ರವೀಣ್ ನಿರ್ದೇಶಿಸಿರುವ ಹಾಗೂ ತಾವು ನಾಯಕ ನಟಿ ಪಾತ್ರ ವಹಿಸಿರುವ ಸಸ್ಪೆನ್ಸ್, ಥ್ರಿಲ್ಲರ್ ಚಿತ್ರ 'ಎವಿಡೆನ್ಸ್' ಮೇ 24ರಂದು ರಾಜ್ಯಾದ್ಯಂತ ತೆರೆ ಕಾಣಲಿದ್ದು, ಪ್ರೇಕ್ಷಕರು ವೀಕ್ಷಿಸಿ ಪ್ರೋತ್ಸಾಹಿಸಬೇಕೆಂದು ಮಾನಸ ಜೋಷಿ ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಚಾರಣಾ ಕೊಠಡಿಯಲ್ಲಿ ನಡೆಯುವ ತ್ರಿಕೋನ ಪ್ರೇಮಕಥೆ ಆಧಾರಿತ ಚಿತ್ರ ಇದಾಗಿದ್ದು, ಇದರಲ್ಲಿ ಒಟ್ಟು ನಾಲ್ಕು ಹಾಡುಗಳೊಡನೆ ಹೊಡೆದಾಟದ ದೃಶ್ಯಗಳೂ ಇವೆ. ಸುಮಾರು 5 ಪುಟದ ಸಂಭಾಷಣೆ ಒಂದೇ ದೃಶ್ಯದಲ್ಲಿ ಹೇಳುವಂತಹ ಸವಾಲಿನ ದೃಶ್ಯಗಳನ್ನೂ ಈ ಚಿತ್ರ ಒಳಗೊಂಡಿದ್ದು, ತಮಗೆ ಈ ಚಿತ್ರ ಅಪೂರ್ವ ಅನುಭವ ನೀಡಲಿದೆ. ಅಲ್ಲದೆ ಸಮಾಜಕ್ಕೆ ಉತ್ತಮ ಸಂದೇಶ ನೀಡಲಿದೆ ಎಂದರು.

ನಿರ್ದೇಶಕ ಸಿ.ಪಿ. ಪ್ರವೀಣ್ ಮಾತನಾಡಿ, ತನಿಖೆಯ ಎಳೆಯಲ್ಲಿ ಈ ಚಿತ್ರ ಸಾಗುತ್ತದೆ. ಬೆಂಗಳೂರು, ಮಂಗಳೂರು ಹಾಗೂ ಚಿಕ್ಕಮಗಳೂರು ಮೊದಲಾದ ಕಡೆಗಳಲ್ಲಿ ಚಿತ್ರೀಕರಣವಾಗಿದ್ದು, ಮೇ24ರಂದು ರಾಜ್ಯಾದ್ಯಂತ ಸುಮಾರು 40 ಚಿತ್ರ ಮಂದಿರಗಳಲ್ಲಿ ಬಿಡುಗಡೆಗೊಳ್ಳಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ನಿರ್ಮಾಪಕರಾದ ಮಾದೇಶ ಕೋಡಿಹಳ್ಳಿ, ಪ್ರದೀಪ್ ಅರವಿಂದ್ ಕುಮಾರ್ ಹಾಗೂ ಚಿತ್ರತಂಡದ ಆಕರ್ಷ ಆದಿತ್ಯ, ಕಾರ್ತಿಕ್ ವರ್ಣೇಕರ್ ಉಪಸ್ಥಿತರಿದ್ದರು.

ಮಂತ್ರಾಲಯ ರಾಯರ ಮಠದ ಮುಂದೆ ಬೃಹತ್ ರಂಗೋಲಿ ಬಿಡಿಸಿ ದಾಖಲೆ



ಮೈಸೂರು ಕಲಾವಿದರ ತಂಡವು ಮಂತ್ರಾಲಯದ ರಾಘವೇಂದ್ರ ಶ್ರೀಗಳ ಮಠದ ಗರ್ಭಗುಡಿ ಮುಂದೆ ರಾಘವೇಂದ್ರ ಶ್ರೀಗಳ ಸುಮಾರು 36,200 ಚದರ ಅಡಿಯ ರಂಗೋಲಿ ಬಿಡಿಸಿರುವುದು.

ಮೈಸೂರು, ಮೇ 19(ಜಿಎ)–ಮೈಸೂರು ಕಲಾವಿದರ ತಂಡವು ಮಂತ್ರಾಲಯದ ರಾಘವೇಂದ್ರ ಶ್ರೀಗಳ ಮಠದ ಗರ್ಭಗುಡಿಯ ಮುಂದೆ ಅತಿ ಕಡಿಮೆ ಅವಧಿ ಹಾಗೂ ಅತಿ ಕಡಿಮೆ ಕಲಾವಿದರು ಒಳಗೊಂಡಂತೆ ರಾಘವೇಂದ್ರ ಶ್ರೀಗಳ ಸುಮಾರು 36,200 ಚದರ ಅಡಿಯ ರಂಗೋಲಿ ಚಿತ್ರ ಬಿಡಿಸುವ ಮೂಲಕ ಮೂರು ಪ್ರಮುಖ ದಾಖಲೆ ನಿರ್ಮಿಸಿದ್ದಾರೆ ಎಂದು ಕಲಾವಿದ ಎಸ್. ಪುನೀತ್‌ಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ 7ರಂದು ಮೈಸೂರು ಕಲಾವಿದರ ತಂಡವು ಮಂತ್ರಾಲಯಕ್ಕೆ ಹೊರಟು ಮೇ 8ರಂದು ಸಂಜೆ ರಾಘವೇಂದ್ರಶ್ರೀಗಳ ಮಠದಲ್ಲಿ ಪೂಜೆ ಸಲ್ಲಿಸಿ ಮರುದಿನ ಸಂಜೆ 5 ಗಂಟೆಗೆ ಚಿತ್ರ ರಚಿಸಲಾರಂಭಿಸಿದೆವು. ಆದರೆ, ಮಳೆ ಬಂದು ಚಿತ್ರ ಹಾಳಾಯಿತು. ಇದೇ ರೀತಿ ನಂತರದ ಮೂರು ದಿನವೂ ಮಳೆಯಿಂದ ಚಿತ್ರ ನೀರುಪಾಲಾಯಿತು.

ಛಲ ಬಿಡದೇ 4ನೇ ದಿನ ಬೆಳಗ್ಗೆ 10 ಗಂಟೆಗೆ ಕಮಲದ ಮೇಲೆ ಕುಳಿತಿರುವ, ಹಿಂಬದಿಯಲ್ಲಿ ಬೃಂದಾವನವಿರುವ ರಾಘವೇಂದ್ರ ಶ್ರೀಗಳ ಚಿತ್ರ ರಚಿಸಲಾಯಿತು. ಈ ಮೂಲಕ ಇಂಡಿಯಾ ವರ್ಲ್ಡ್ ರೆಕಾರ್ಡ್, ಹಾರ್ವರ್ಡ್ ರೆಕಾರ್ಡ್ ಮತ್ತು ಏಷ್ಯಾ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ಗಳಿಗೆ ಸೇರ್ಪಡೆ ಆಗಿದೆ ಎಂದು ಸಂತಸ ಹಂಚಿಕೊಂಡರು. ಸುದ್ದಿಗೋಷ್ಠಿಯಲ್ಲಿ ತಂಡದ ಸಿ.ಲಕ್ಷ್ಮಿ, ಪುನೀತ್ ರಾಯಣ್ಣ, ಎಂ.ಮಂಜುನಾಥ್, ಎಸ್.ಸೋನಾಕ್ಷಿ, ಸುಪ್ರೀತ್ ಚಂದನ್, ರವಿ, ಕೆ.ದೀಪಕ್, ಮಧುಸೂದನ್ ಇದ್ದರು.

ಡೊನೇಷನ್ ಹಾವಳಿ ತಪ್ಪಿಸಲು ಆಗ್ರಹ

ಮೈಸೂರು, ಮೇ 19–ಶೈಕ್ಷಣಿಕ ವರ್ಷ ಆರಂಭವಾಗುತ್ತಲೇ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಡೊನೇಷನ್ ಹಾವಳಿ ಶುರುವಾಗಿದೆ. ಶಿಕ್ಷಣ ಇಲಾಖೆ ಅಧಿಕಾರಿಗಳು ಕೂಡಲೆ ಗಮನಹರಿಸಿ ಅದನ್ನು ತಪ್ಪಿಸಬೇಕು ಎಂದು ಜೈ ಭೀಮ್ ಜನಸ್ಪಂದನಾ ವೇದಿಕೆ ಅಧ್ಯಕ್ಷ ಚೇತನ್ ಕಾಂತರಾಜು ಆಗ್ರಹಿಸಿದ್ದಾರೆ

ವಿದ್ಯಾರ್ಥಿಗಳು ಪದವಿ ಶಿಕ್ಷಣ ಹಾಗೂ ಪದವಿಪೂರ್ವ ಶಿಕ್ಷಣ ಪಡೆಯಲು ಲಕ್ಷಾಂತರ ರೂಪಾಯಿ ಡೊನೇಷನ್ ಪಾವತಿಸಬೇಕಿದೆ. ಸರ್ಕಾರ ನಿಗದಿಪಡಿಸುವ ಕಡಿಮೆ ಶುಲ್ಕವನ್ನೇ ಪಡೆದುಕೊಳ್ಳುವಂತೆ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸೂಚಿಸಬೇಕು. ಖಾಸಗಿ ಪ್ರಥಮ ದರ್ಜೆ ಕಾಲೇಜುಗಳಿಗೆ ಸರ್ಕಾರ ಅನೇಕ ರೀತಿಯಲ್ಲಿ ಸೌಲಭ್ಯ ಒದಗಿಸುತ್ತದೆ. ಶುಲ್ಕದಲ್ಲಿ ವಿನಾಯಿತಿ ನೀಡಿದರೆ ಸಾವಿರಾರು ವಿದ್ಯಾರ್ಥಿಗಳಿಗೆ ಹಾಗೂ ಬಡವರಿಗೆ ಅನುಕೂಲವಾಗುತ್ತದೆ. ಖಾಸಗಿ ಪ್ರಥಮ ದರ್ಜೆ ಕಾಲೇಜುಗಳಿಂದ ಹಾಗೂ ಪದವಿ ಪೂರ್ವ ಕಾಲೇಜುಗಳಿಂದ ಪಾಲಕರಿಗೆ ಆಗುವ ಕಿರುಕುಳ ತಪ್ಪಿಸಬೇಕು. ರಾಜ್ಯದಲ್ಲಿ ಡೊನೇಷನ್‌ಗೆ ಕಡಿವಾಣ ಹಾಕಬೇಕು ಎಂದು ಒತ್ತಾಯಿಸಿದರು.

ಪಿಯು ಫಲಿತಾಂಶ ಬಂದು ತಿಂಗಳೂ ಆಗಿಲ್ಲ. ಈಗಾಗಲೇ ಎಲ್ಲ ಖಾಸಗಿ ಕಾಲೇಜುಗಳಲ್ಲಿ ಪ್ರವೇಶಾತಿ ಮುಗಿದಿವೆ ಎನ್ನುತ್ತಿದ್ದಾರೆ. ಇದರಿಂದ ಸಾವಿರಾರು ವಿದ್ಯಾರ್ಥಿಗಳು ಪದವಿ ಶಿಕ್ಷಣ ಪ್ರವೇಶಾತಿಯಿಂದ ವಂಚಿತರಾಗಲಿದ್ದಾರೆ. ಆದ್ದರಿಂದ ಖಾಸಗಿ ಪದವಿ ಹಾಗೂ ಪದವಿ ಪೂರ್ವ ಕಾಲೇಜುಗಳು ರೋಸ್ಟರ್ ಪದ್ಧತಿ ಅನುಸರಿಸಿ ಪ್ರವೇಶ ಪ್ರಕ್ರಿಯೆ ಆರಂಭಿಸಲು ಆದೇಶಿಸಬೇಕು. ಇಲ್ಲವಾದರೆ ಜೈ ಭೀಮ್ ಜನಸ್ಪಂದನಾ ವೇದಿಕೆ ತೀವ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಲಾಯಿತು.

ಆರ್.ಎಸ್.ಧನುಶ್ರೀಗೆ 555 ಅಂಕ



ಮೈಸೂರು, ಮೇ 19–ಈ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೈಸೂರಿನ ಸರ್ಕಾರಿ ಆದರ್ಶ ವಿದ್ಯಾಲಯದ ವಿದ್ಯಾರ್ಥಿ ಆರ್.ಎಸ್.ಧನುಶ್ರೀ 555 ಅಂಕ ಗಳಿಸಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆ ಮೈಸೂರಿನ ಜಾಕಿ ಕ್ವಾಟ್ರಸ್ ನಿವಾಸಿ ಜಿ.ಡಿ.ರಾಜಗೋಪಾಲ ಮತ್ತು ಟಿ.ಶೈಲಜಾ ದಂಪತಿ ಪುತ್ರಿ.

ಮೇ 23ರಂದು ಮಾಂಸ ಮಾರಾಟ ನಿಷೇಧ

ಮೈಸೂರು,ಮೇ 19– ಮೇ 23ರಂದು ಬುದ್ಧಪೂರ್ಣಿಮೆ ಪ್ರಯುಕ್ತ ಮೈಸೂರು ಮಹಾನಗರ ಪಾಲಿಕೆಗೆ ಸೇರಿದ ಎಲ್ಲಾ ಮಾಂಸದ ಅಂಗಡಿಗಳನ್ನು ಮುಚ್ಚಲಾಗುತ್ತದೆ. ಈ ದಿನ ಕುರಿ, ಮೇಕೆ, ಕೋಳಿ, ಹಂದಿ ಮಾಂಸ ಮತ್ತು ಮೀನು ವ್ಯಾಪಾರವನ್ನು ಮೈಸೂರು ನಗರದಲ್ಲಿ ಕಡ್ಡಾಯವಾಗಿ ನಿಷೇಧಿಸಲಾಗಿರುತ್ತದೆ ಎಂದು ಮೈಸೂರು ನಗರಪಾಲಿಕೆ ಆರೋಗ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಖಾಸಗಿ ಶಾಲೆಗಳಿಗೆ ಕಠಿಣ ನಿಯಮ ಹೇರಿಕೆ

ಮಾಜಿ ಎಂಎಲ್‌ಸಿ ಪುಟ್ಟಸಿದ್ದಶೆಟ್ಟಿ ಆರೋಪ

ಮೈಸೂರು, ಮೇ 19(ಜಿಎ)–ಸರ್ಕಾರಿ ಶಾಲೆಗಳಿಗಿಲ್ಲದ ಕಠಿಣ ನಿಯಮಗಳನ್ನು ಖಾಸಗಿ ಶಾಲೆಗಳಿಗೆ ಹೇರಲಾಗುತ್ತಿದೆ ಎಂದು ಮಾಜಿ ಎಂಎಲ್‌ಸಿ ಕೆ.ಸಿ.ಪುಟ್ಟಸಿದ್ದಶೆಟ್ಟಿ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಸಾವಿರಾರು ಸರ್ಕಾರಿ ಶಾಲಾ ಕಟ್ಟಡಗಳು ಶಿಥಿಲವಾಗಿವೆ. ಇದನ್ನು ಸರಿಪಡಿಸದ ಸರ್ಕಾರವು ಖಾಸಗಿ ಶಾಲೆಗಳಿಂದ ಪರವಾನಗಿ ನವೀಕರಣ ಹೆಸರಿನಲ್ಲಿ ಭ್ರಷ್ಟಾಚಾರ ನಡೆಸುತ್ತಿದೆ. ಅಧಿಕಾರಿಗಳು ಲಂಚ ತೆಗೆದುಕೊಂಡು 1 ವರ್ಷಕ್ಕೆ ಮಾತ್ರ ನವೀಕರಣ ಮಾಡುವ ಕೆಲಸ ನಡೆಯುತ್ತಿದೆ. ಇದು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ತಿಳಿಯುವುದಿಲ್ಲವೇ, ಜಾಣ ಕುರುಡುತನವೇಕೆ. ಅವರ ಕ್ಯಾಬಿನೆಟ್‌ನಲ್ಲಿ ಕಳ್ಳರಿದ್ದು, ಎಲ್ಲಾ ಇಲಾಖೆಯಲ್ಲೂ ಭ್ರಷ್ಟಾಚಾರ ನಡೆಯುತ್ತಿದ್ದು, ಇದಕ್ಕೆ ಕಡಿವಾಣ ಹಾಕಬೇಕು ಎಂದು ಒತ್ತಾಯಿಸಿದರು.

ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆ-2024

ಮರಿತಿಬ್ಬೇಗೌಡರಿಗೆ ಕುರುಬರ ಸಂಘ ಬೆಂಬಲ



ಮೈಸೂರು, ಮೇ19– ವಿಧಾನ ಪರಿಷತ್ತಿಗೆ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ನಡೆಯುವ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಮರಿತಿಬ್ಬೇಗೌಡ ಅವರಿಗೆ ಕುರುಬ ಸಮುದಾಯ ಬೆಂಬಲ ಸೂಚಿಸಿದೆ.

ನಗರದ ಗುರು ರೆಸಿಡೆನ್ಸಿ ಸಭಾಂಗಣದಲ್ಲಿ ನಡೆದ ಮೈಸೂರು, ಚಾಮರಾಜನಗರ, ಮಂಡ್ಯ ಮತ್ತು ಹಾಸನ ಜಿಲ್ಲಾ ಮಟ್ಟದ ಕುರುಬ ಸಮುದಾಯದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು.

ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಮಾತನಾಡಿ, ಕುರುಬ ಸಮುದಾಯ ಶೇ.90ರಷ್ಟು ಮತವನ್ನು ಕಾಂಗ್ರೆಸ್ ಪಕ್ಷಕ್ಕೆ ನೀಡಿದ್ದರಿಂದ ಪಕ್ಷವು ನಮ್ಮ ಸಮಾಜಕ್ಕೆ ಎರಡು ಬಾರಿ ಮುಖ್ಯಮಂತ್ರಿ ಪದವಿ ನೀಡಿದೆ. ಹೀಗಾಗಿ ಸಿದ್ದರಾಮಯ್ಯ ಅವರ ಕೈ ಬಲಪಡಿಸಲು ನಾವೆಲ್ಲ ಒಗ್ಗಟ್ಟಾಗಿ ಕಾಂಗ್ರೆಸ್ ಪಕ್ಷಕ್ಕೆ ಮತ ಚಲಾಯಿಸಬೇಕು. ಮರಿತಿಬ್ಬೇಗೌಡ ಅವರನ್ನು ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಮಂಡ್ಯ ಜಿಲ್ಲಾಧ್ಯಕ್ಷ ಸುರೇಶ್ ಮಾತನಾಡಿ, ಒಂದು ಸಮುದಾಯ ಒಂದೇ ಪಕ್ಷಕ್ಕೆ ಸೀಮಿತವಲ್ಲ. ಆದರೆ, ಈಗ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿರುವುದರಿಂದ ನಾವೆಲ್ಲಾ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಬೇಕು. ಜಾ.ದಳ ಮತ್ತು ಬಿಜೆಪಿ ಕುರುಬ ಸಮುದಾಯಕ್ಕೆ ಒಂದೇ ಒಂದು ಟಿಕೆಟ್ ಕೂಡ ನೀಡಿಲ್ಲ. ಹೀಗಾಗಿ ನಾವೆಲ್ಲ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಬೇಕು ಎಂದು ಹೇಳಿದರು.

ಹಾಸನ ಜಿಲ್ಲಾಧ್ಯಕ್ಷ ಪಟೇಲ್ ಶಿವಪ್ಪ ಮಾತನಾಡಿ, ಅಹಿಂದ ಮೂಲಕ ಆಂದೋಲನ ಮಾಡಿದ ಸಿದ್ದರಾಮಯ್ಯ ಅವರಿಗೆ ಮತ್ತಷ್ಟು ಬೆಂಬಲ ನೀಡಲು ನಾವೆಲ್ಲ ಮರಿತಿಬ್ಬೇಗೌಡ ಅವರನ್ನು ಗೆಲ್ಲಿಸಬೇಕು ಎಂದರು.

ಕುರುಬರ ಸಂಘದ ಜಿಲ್ಲಾಧ್ಯಕ್ಷ ಶಿವಪ್ಪ, ಕಸಾಪ ಮಾಜಿ ಜಿಲ್ಲಾಧ್ಯಕ್ಷ ಮಾನಸ, ಪ್ರಾಧ್ಯಾಪಕ ಸಿ.ಡಿ.ಪರಶುರಾಮ್, ನಿವೃತ್ತ ಪ್ರಾಧ್ಯಾಪಕ ಪ್ರೊ.ರಂಗರಾಜು, ಸಾವಿತ್ರಮ್ಮ, ಡಿ.ಬನುಮಯ್ಯ ಕಾಲೇಜಿನ ಪ್ರಾಂಶುಪಾಲ ಕೆ.ಮೂರ್ತಿ, ಪದಾಧಿಕಾರಿಗಳಾದ ಡಿ.ಕೆ.ಕುನ್ನೇಗೌಡ, ಆನಂದ, ಬಸವರಾಜು, ಪುರುಷೋತ್ತಮ್, ಮರಿ ಹೆಗಡೆ, ಹುಚ್ಚೇಗೌಡ, ನಾಗರಾಜ್, ಸಿದ್ದೇಗೌಡ, ಪುಟ್ಟಬಸವೇಗೌಡ, ಕೆಂಪಣ್ಣ, ಮಾದೇಗೌಡ, ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಜಿಲ್ಲೆಗಳ ಕುರುಬ ಸಂಘದ ಪದಾಧಿಕಾರಿಗಳು ಮತ್ತಿತರರು ಹಾಜರಿದ್ದರು.